epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237 | ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ | KARNATAKA MALLA, MUMBAI

ಸಂಪುಟ : 35 ಸಂಚಿಕೆ : 143 ಗುರುವಾರ 25-06-2026 ಬೆಲೆ : ₹ 6 ಪುಟಗಳು - 10 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ನಾಗ್ಪುರದಲ್ಲಿ ಹಿಂದೂ ಕುಟುಂಬದಿಂದ ಮೊಹರಾಂಗಾಗಿ 'ತಾಝಿಯಾ' ತಯಾರಿ.



ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರಿಂದ ಪ್ರಧಾನಿ ನರೇಂದ್ರ ಮೋದಿ ಜತೆಗೆ ಭೇಟಿ.

ನಮಗೆಂಥ ಜಗತ್ತು ಬೇಕು ಎಂಬ ಪ್ರಶ್ನೆಗೆ ನನ್ನ ಉತ್ತರ ಮನುಷ್ಯನಾಗಿರುವುದಕ್ಕೆ ಸುರಕ್ಷಿತವಾಗಿರುವುದು. ಕವಿಗಳು ಪ್ರಪಂಚದ ಅಧಿಕೃತ ಶಾಸಕರು.

3 ಪುಣೆ: ಮದುಮಗನ ಕೊಲೆಗೆ ಮಹತ್ವದ ತಿರುವು; ಮುಸುಕು ಧರಿಸಿ ಹಿಂಬಾಲಿಸಿದ್ದ ವಧುವಿನ ಪ್ರಿಯಕರ

ಸಮೀಪಿಸುತ್ತಿರುವ ಸುಂಕದ ಗಡುವು; ಭಾರತ - ಅಮೆರಿಕದಿಂದ ವ್ಯಾಪಾರ ಒಪ್ಪಂದದ ಪ್ರಗತಿ ಪರಿಶೀಲನೆ **5**

ಕಣ್ಣೀರು ಕೂಡ ಒಂದು ಭಾಷೆ. ಅತ್ತವನಿಗೆ ಮಾತ್ರ ಅದು ಅರ್ಥವಾಗುತ್ತದೆ. ಉತ್ಸಾಹವಿಲ್ಲದೆ ಯಾವುದೇ ಮಹತ್ಕಾರ್ಯವೂ ಸಾಧಿಸಿಲ್ಲ.

ಮುಂಬಯಿ, ಉಪನಗರಗಳಲ್ಲಿ ಮುಸಲಧಾರೆ ಮಳೆ; ತಗ್ಗು ಪ್ರದೇಶ ಜಲಾವೃತ

ಮುಂಬಯಿ, ಜೂ. 24- ಮುಂಗಾರು ಮಾರುತ ಮಂಗಳವಾರ ಅಬ್ಬರದಿಂದ ಪ್ರವೇಶಿಸಿದ್ದು ರಾತ್ರಿಯಿಡೀ ಸುರಿದ ಮುಸಲಧಾರೆ ಮಳೆಯಿಂದಾಗಿ ಬುಧವಾರ ಬೆಳಗಾಗುವಷ್ಟರಲ್ಲಿ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿ ಹರಿದ ಪರಿಣಾಮವಾಗಿ ರಸ್ತೆ ಮತ್ತು ಉಪನಗರ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದ್ದು, ಬೆಳಗ್ಗಿನ ವೇಳೆ ಪ್ರಯಾಣಿಕರು ಪರದಾಡುವ ಸ್ಥಿತಿ ಉಂಟಾಗಿದೆ. ಬುಧವಾರ ಬೆಳಗ್ಗಿನ 8 ಗಂಟೆಯ ತನಕದ ಕಳೆದ 24 ಗಂಟೆಗಳಲ್ಲಿ ಮುಂಬಯಿಯ ಕೆಲವೆಡೆ 300 ಮಿಲಿಮೀಟರ್ ತನಕ ಕುಂಭದ್ರೋಣ ಮಳೆಯಾಗಿದೆ.

ಮಳೆಯಿಂದಾಗಿ ಜಲಾವೃತ ಪ್ರದೇಶಗಳಿಗೆ ಮುಂಬಯಿ ಮೇಯರ್ ರಿತು ತಾವ್ಡೆ ಬೆಳಿಗ್ಗೆ ಧಾವಿಸಿದ್ದು, ಕಿಂಗ್ಸ್ ಸರ್ಕಲ್‌ನಲ್ಲಿ ನೀರು ತುಂಬಿದ್ದ ಗಾಂಧಿ ಮಾರುಕಟ್ಟೆಗೆ ತೆರಳಿದಾಗ ಅವರ ಜತೆಗಿದ್ದ ಬೃಹನ್ಮುಂಬಯಿ ಮಹಾನಗರ ಪಾಲಿಕೆಯ ಮೇಲ್ವಿಚಾರಕರೊಬ್ಬರು ತೆರೆದ ನೀರಿನ ಚರಂಡಿಗೆ ಬಿದ್ದರು. ಆದರೆ ಜತೆಗಿದ್ದವರು ಅವರನ್ನು ತಕ್ಷಣ ರಕ್ಷಿಸಿದ್ದರಿಂದ ಅಲ್ಪಸ್ವಲ್ಪ ಗಾಯದಿಂದ ಪಾರಾಗಿದ್ದು ದುರಂತ ತಪ್ಪಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಂಬಯಿ ನಗರ ಮತ್ತು ಉಪನಗರದ ಹಲವು ಪ್ರದೇಶಗಳು ಜಲಾವೃತಗೊಂಡಿದ್ದರಿಂದ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯುಂಟಾದರೆ ಉಪನಗರ ರೈಲುಗಳ ಸಂಚಾರ ಮೂರೂ ಮಾರ್ಗಗಳಲ್ಲಿ ವಿಳಂಬವಾಗಿತ್ತು. ಗಾಂಧಿ ಮಾರುಕಟ್ಟೆಯಲ್ಲಿ ಬಿಎಂಸಿ ಅಧಿಕಾರಿ ಚರಂಡಿಗೆ ಬಿದ್ದ ವೀಡಿಯೋ ದೃಶ್ಯವನ್ನು ಎಕ್ಸ್‌ನಲ್ಲಿ ಹಂಚಿಕೊಂಡಿರುವ ಕಾಂಗ್ರೆಸ್ ಎಂಪಿ ವರ್ಷಾ ಗಾಯಕ್ವಾಡ್ ಅವರು ''ಈ ವ್ಯಕ್ತಿ ನಿಮ್ಮ ನಿಷ್ಕ್ರಿಯತೆ ಮತ್ತು ಭ್ರಷ್ಟಾಚಾರದ ಹೊಂಡಕ್ಕೆ ಬಿದ್ದಿದ್ದಾರೆ. ಇದೊಂದು ಆಕಸ್ಮಿಕವಲ್ಲ, ನಿಮ್ಮ ಭ್ರಷ್ಟಾಚಾರವನ್ನು ರೆಡ್ ಹ್ಯಾಂಡಾಗಿ ಹಿಡಿದ ಘಟನೆಯಾಗಿದೆ'' ಎಂದು ಆಪಾದಿಸಿದ್ದಾರೆ.





ಆಡಳಿತ ಶಿವಸೇನೆ ಎಂಎಲ್‌ಸಿ ಮನೀಷಾ ಕಾಯಂಡೆ ಅವರು, ಮಳೆಗಾಲದಲ್ಲಿ ರಸ್ತೆಗಳಲ್ಲಿ ನೀರು ನಿಲ್ಲದಂತೆ ಮಾಡಲು ಮತ್ತು ವಾಹನ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆ ಆಗದಂತೆ ತಡೆಯಲು ಒಳಚರಂಡಿಗಳನ್ನು ಕೂಡಲೇ ಸ್ವಚ್ಛಗೊಳಿಸುವಂತೆ ಮತ್ತು ಒಣ ತ್ಯಾಜ್ಯವನ್ನು ತಕ್ಷಣ ತೆಗೆಯುವಂತೆ ಕ್ರಮ ತೆಗೆದುಕೊಳ್ಳುವಂತೆ ಮೇಯರ್ ತಾವ್ಡೆ ಅವರನ್ನು ಆಗ್ರಹಿಸಿದ್ದಾರೆ.

ಈ ವಿಚಾರವನ್ನು ರಾಜಕೀಯ ನೆಲೆಯಲ್ಲಿ ನೋಡಬಾರದು. ಜನರು ಎದುರಿಸುವ ಸಮಸ್ಯೆ ನಿವಾರಣೆಗೆ ಮೊದಲ ಆದ್ಯತೆ ನೀಡಬೇಕಾಗಿದೆ ಎಂದು ಕಾಯಂಡೆ ಹೇಳಿದ್ದಾರೆ. ಬಿಎಂಸಿಯಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಶಿವಸೇನೆ ಕೂಡಾ ಬಿಜೆಪಿ ಜತೆಗೆ ಆಡಳಿತ ಮೈತ್ರಿ ಪಕ್ಷವಾಗಿದೆ. ಹವಾಮಾನ ಸೂಚನೆಗಳನ್ನು ಮತ್ತು ಮುನ್ನೆಚ್ಚರಿಕೆಗಳನ್ನು ಜನರು ಅನುಸರಿಸಬೇಕು ಮತ್ತು ಯಾವುದೇ ತುರ್ತು ಸಂದರ್ಭದಲ್ಲಿ ಮಹಾಪಾಲಿಕೆಯ ನಿಯಂತ್ರಣ ಕೊಠಡಿಯನ್ನು ಸಂಪರ್ಕಿಸಬೇಕು ಎಂದು ಮುನ್ಸಿಪಲ್ ಕಮಿಷನರ್ ಅಶ್ವಿನಿ ಭಿಡೆ ಸಾರ್ವಜನಿಕರನ್ನು ವಿನಂತಿ ಮಾಡಿಕೊಂಡಿದ್ದಾರೆ.

ಭಾರೀ ಮಳೆ ಕೆಲ ದಿನ ಮುಂದುವರಿಯುವ ಸಾಧ್ಯತೆಯಿರುವುದರಿಂದ ಎಲ್ಲ ಇಲಾಖೆಗಳಿಗೂ ಎಚ್ಚರವಾಗಿರಲು ಸೂಚಿಸಲಾಗಿದೆ ಮತ್ತು ಪರಿಸ್ಥಿತಿ ಮೇಲೆ ಆಡಳಿತ ನಿರಂತರ ನಿಗಾ ಇಡಲಿದೆ ಎಂದು ಭಿಡೆ ಹೇಳಿದ್ದಾರೆ. ನೀರು ತುಂಬಿದ್ದ ಹಲವು ಪ್ರದೇಶಗಳಿಗೆ ಮೇಯರ್ ತಾವ್ಡೆ ಮತ್ತು ಮಾಜಿ ಮೇಯರ್ ಕಿಶೋರಿ ಪೆಡ್ನೇಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬುಧವಾರ ಬೆಳಿಗ್ಗೆ ಗಂಟೆ 8ರ ತನಕದ ಕಳೆದ 24 ಗಂಟೆಗಳ ಅವಧಿಯಲ್ಲಿ ನಗರದ ಕೊಲಬ ಹವಾಮಾನ ವೀಕ್ಷಣಾಲಯದಲ್ಲಿ 248 ಮಿಲಿ ಮೀಟರ್ ಮಳೆ ದಾಖಲಾಗಿದ್ದರೆ ಉಪನಗರ ಸಾಂತಾಕ್ರೂಜ್ ವೀಕ್ಷಣಾಲಯದಲ್ಲಿ 225 ಮಿಲಿಮೀಟರ್ ಮಳೆಯಾಗಿದೆ ಎಂದು ಬಿಎಂಸಿ ಹೇಳಿದೆ.

ಅತ್ಯಂತ ಬಿರುಸಿನ ಮಳೆ ಸುರಿದ ಪ್ರದೇಶಗಳಲ್ಲಿ ಪಶ್ಚಿಮ ಉಪನಗರ ಮಾಲ್ವಾಣಿಯಲ್ಲಿ 340 ಮಿಲಿಮೀಟರ್ ಮಳೆಯಾದರೆ ಮಧ್ಯ ಮುಂಬಯಿಯ ಪರೇಲ್‌ನಲ್ಲಿ 334 ಮಿಲಿಮೀಟರ್ ಮಳೆ ದಾಖಲಾಗಿದೆ. 5ನೇ ಪುಟಕ್ಕೆ

ಕೋಲ್ಕತ್ತಾ : ನಿರ್ಮಾಣ ಹಂತದ ಗೋದಾಮು ಕುಸಿತ 5 ಬಲಿ, 17 ಗಾಯ; ಅವಶೇಷದಡಿ 40 ಕಾರ್ಮಿಕರು?

ಕೋಲ್ಕತ್ತಾ, ಜೂ. 24- ಪಶ್ಚಿಮ ಕೋಲ್ಕತ್ತಾದ ತರತಲ ಪ್ರದೇಶದಲ್ಲಿ ನಿರ್ಮಾಣ ಹಂತದ ಮೂರು ಮಹಡಿಗಳ ಗೋದಾಮು ಕಟ್ಟಡ ಬುಧವಾರ ಅಪರಾಹ್ನ ಕುಸಿದು ಬಿದ್ದ ಭೀಕರ ದುರಂತದಲ್ಲಿ ಕನಿಷ್ಠ ಐವರು ದುರ್ಮರಣವನ್ನಪ್ಪಿದರೆ 17 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು ಇನ್ನೂ ಹಲವರು ಅವಶೇಷದಡಿ ಬಿದ್ದಿದ್ದು ರಕ್ಷಣಾ ಕಾರ್ಯ ಮುಂದುವರಿದಿದೆ ಎಂದು ಪಶ್ಚಿಮ ಬಂಗಾಳ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿ ಒಬ್ಬರು ಹೇಳಿದ್ದಾರೆ.

ದುರಂತ ಸ್ಥಳಕ್ಕೆ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಭೇಟಿ ನೀಡಿದ್ದು ರಕ್ಷಣಾ ಕಾರ್ಯವನ್ನು ಮತ್ತಷ್ಟು ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಕುಸಿದು ಬಿದ್ದ ಅವಶೇಷದಡಿಯಲ್ಲಿ ಇನ್ನೂ ಕನಿಷ್ಠ 35-40 ಜನರು ಇರುವುದಾಗಿ ಅಧಿಕಾರಿ ಹೇಳಿದ್ದಾರೆ. ಸೇನೆ ಸಹಿತ ಕೇಂದ್ರ ಮತ್ತು ರಾಜ್ಯದ ಏಜೆನ್ಸಿಗಳು ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಕೋಲ್ಕತ್ತಾ ನಗರದಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿ ಪೋರ್ಟ್ ಅಡಿಯಲ್ಲಿ ಇರುವ ಬಾಡಿಗೆ ಜಾಗದಲ್ಲಿ ಈ ಗೋದಾಮು ಇದೆ ಎಂದು ಹಿರಿಯ ಅಧಿಕಾರಿ ಹೇಳಿದ್ದಾರೆ. ಅವಶೇಷದಡಿಯಿಂದ 22 ಜನರನ್ನು ಹೊರಗೆ ತೆಗೆಯಲಾಗಿದ್ದು, ಅದರಲ್ಲಿ ನಾಲ್ವರು ದಾರುಣವಾಗಿ ಮೃತಪಟ್ಟಿದ್ದು ಗಾಯಗೊಂಡಿರುವ 17 ಜನರನ್ನು ಎಸ್‌ಎಸ್‌ಕೆಎಂ ಆಸ್ಪತ್ರೆಗೆ ದಾಖಲಿಸಲಾಗಿದ್ದು ಅವರ ಚಿಕಿತ್ಸೆಗೆ ಎಲ್ಲ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ. 5ನೇ ಪುಟಕ್ಕೆ



ಅಂಧೇರಿ : ಲೋಕಲ್ ರೈಲಿನಲ್ಲಿ 'ಬಾಗಿಲಿ'ಗಾಗಿ ವಾಗ್ವಾದ; ಯುವಕನ ಬರ್ಬರವಾಗಿ ಇರಿದು ಕೊಲೆ; ಆರೋಪಿ ಕುರ್ಲಾದಲ್ಲಿ ಸೆರೆ

ಮುಂಬಯಿ,ಜೂ.24 - ಮಳೆ ಸುರಿಯುತ್ತಿದ್ದ ಸಂದರ್ಭ ಲೋಕಲ್ ರೈಲಿನ ಪ್ರಥಮ ದರ್ಜೆ ಬೋಗಿಯೊಳಗೆ ಬಾಗಿಲು ತೆರೆದಿಡುವ ವಿಷಯದಲ್ಲಿ ತೀವ್ರ ವಾಗ್ವಾದ ನಡೆದು ಸುಮಾರು 22 ವರ್ಷದ ಯುವಕನನ್ನು ಸಹ ಪ್ರಯಾಣಿಕನೊಬ್ಬ ಬರ್ಬರವಾಗಿ ಇರಿದು ಕೊಲೆ ಮಾಡಿದ ಘಟನೆ ಮಂಗಳವಾರ ರಾತ್ರಿ ಅಂಧೇರಿ ಮತ್ತು ಬೊರಿವಲಿ ರೈಲು ನಿಲ್ದಾಣಗಳ ಮಧ್ಯೆ ನಡೆದಿದೆ.

ಘಟನೆ ಬಳಿಕ ರೈಲಿನಿಂದ ಹಾರಿ ಪರಾರಿಯಾಗಿದ್ದ ದಾಳಿಕೋರನನ್ನು ಬಳಿಕ ಸರಕಾರಿ ರೈಲ್ವೆ ಪೊಲೀಸ್ (ಜಿಆರ್‌ಪಿ) ಮಧ್ಯ ರೈಲ್ವೆಯ ಕುರ್ಲಾದಲ್ಲಿ ಬಂಧಿಸಿದ್ದಾರೆ. ಜೋರಾಗಿ ಮಳೆ ಸುರಿಯುತ್ತಿದ್ದಾಗ ರೈಲಿನ ಬಾಗಿಲು ಮುಚ್ಚುವ ವಿಷಯದಲ್ಲಿ ವಾಗ್ವಾದ ತೀವ್ರಗೊಂಡಾಗ ಆರೋಪಿ ಸಚಿನ್ (ರೋಶನ್) ರಮೇಶ್ ಸುವರ್ಣ ತನ್ನ ಬಳಿಯಿದ್ದ ಚಾಕುವಿನಂತಹ ಆಯುಧ ತೆಗೆದು ಬಲಿಪಶು ಮಾಯಾಂಕ್ ಲೋಹರ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ. ಚರ್ಚ್‌ಗೇಟ್-ನಾಲಸೋಪರಾ ಫಾಸ್ಟ್ ಲೋಕಲ್ ರೈಲು ರಾತ್ರಿ 10.42ಕ್ಕೆ ಅಂಧೇರಿ ನಿಲ್ದಾಣ ತಲುಪಿದಾಗ ಲೋಹರ್ ಮತ್ತು ಸಚಿನ್ ಮಧ್ಯೆ ವಾಗ್ವಾದ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅವರಲ್ಲಿ ಒಬ್ಬರು ಬಾಗಿಲು ತೆರೆದಿಡಬೇಕೆಂದು ಬಯಸಿದರೆ, ಇನ್ನೊಬ್ಬರು ಮಳೆ ಬರುತ್ತಿದೆ ಎಂದು ಹೇಳಿ ಅದಕ್ಕೆ ಆಕ್ಷೇಪಿಸಿದರು. ವಾಗ್ವಾದದ ಸಮಯದಲ್ಲಿ ಆರೋಪಿಯು ತನ್ನ ಬ್ಯಾಗ್‌ನಿಂದ ಚಾಕುವಿನಂತಹ ಆಯುಧವನ್ನು ಹೊರತೆಗೆದು ಲೋಹರ್‌ನ ಸೊಂಟ ಮತ್ತು ಎದೆಗೆ ಹಲವಾರು ಬಾರಿ ಇರಿದ. ಈ ಸಮಯದಲ್ಲಿ ರೈಲು ಜನದಟ್ಟಣೆಯಿಂದ ಕೂಡಿದ್ದರೂ, ಯಾರೂ ಆತನನ್ನು ಉಳಿಸಲು ಮುಂದಾಗಲಿಲ್ಲ. 5ನೇ ಪುಟಕ್ಕೆ



ಮೃತ ಆರೋಪಿ

ಬಂಟರ ಸಂಘ ಪುಣೆ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಜೀವನದಲ್ಲಿ 'ಆರೋಗ್ಯವೇ ಭಾಗ್ಯ, ಯೋಗವೇ ಆರೋಗ್ಯದ ಮಾರ್ಗ' ನಿಯಮ ಪಾಲಿಸೋಣ - ಅಜಿತ್ ಹೆಗ್ಡೆ ಕೆಂಜಾರು ಗುತ್ತು





(ಚಿತ್ರ, ವರದಿ : ಹರೀಶ್ ಮೂಡುಬಿದ್ರಿ ಪುಣೆ)

ಪುಣೆ, ಜೂ. 24- ಇಂದು ನಾವು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಇಲ್ಲಿ ಒಂದಾಗಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಯೋಗವು ಕೇವಲ ವ್ಯಾಯಾಮವಲ್ಲ; ಅದು ನಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಒಂದೇ ಸೂತ್ರದಲ್ಲಿ ಬಂಧಿಸುವ ಜೀವನ ವಿಧಾನವಾಗಿದೆ. ಭಾರತದ ಮಹಾನ್ ಋಷಿ-ಮುನಿಗಳ ಕೊಡುಗೆಯಾದ ಯೋಗವನ್ನು ಇಂದು ವಿಶ್ವದ 190ಕ್ಕೂ ಹೆಚ್ಚು ರಾಷ್ಟ್ರಗಳು ಸ್ವೀಕರಿಸಿ ಆಚರಿಸುತ್ತಿವೆ. ಇದು ನಮ್ಮ ದೇಶದ ಸಂಸ್ಕೃತಿ, ಪರಂಪರೆ ಮತ್ತು ಜೀವನ ಮೌಲ್ಯಗಳ ಜಾಗತಿಕ ಮಾನ್ಯತೆಯ ಸಂಕೇತವಾಗಿದೆ. ಇಂದಿನ ವೇಗದ ಯುಗದಲ್ಲಿ ಒತ್ತಡ, ಆತಂಕ ಮತ್ತು ಅನಾರೋಗ್ಯಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಯೋಗವು ಆರೋಗ್ಯಕರ ಹಾಗೂ ಸಮತೋಲನಯುತ ಜೀವನಕ್ಕೆ ದಾರಿದೀಪವಾಗಿದೆ. ದಿನಕ್ಕೆ ಕೆಲವೇ ನಿಮಿಷಗಳ ಯೋಗಾಭ್ಯಾಸವು ದೇಹಕ್ಕೆ ಶಕ್ತಿ, ಮನಸ್ಸಿಗೆ ನೆಮ್ಮದಿ ಹಾಗೂ ಜೀವನಕ್ಕೆ ಹೊಸ ಚೈತನ್ಯವನ್ನು ನೀಡುತ್ತದೆ. ''ಯೋಗಃ ಕರ್ಮಸು ಕೌಶಲಮ್'' ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಅಂದರೆ ಯೋಗವು ನಮ್ಮ ಪ್ರತಿಯೊಂದು ಕಾರ್ಯವನ್ನೂ ಉತ್ತಮವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಪ್ರತಿ ವರ್ಷ ನಮ್ಮ ಸಂಘದ ಗೌರವಾಧ್ಯಕ್ಷ ಸಂತೋಷ್ ಶೆಟ್ಟಿ ಮಾರ್ಗದರ್ಶನದಲ್ಲಿ ಕ್ರೀಡಾ ಕಾರ್ಯಾಧ್ಯಕ್ಷ ವಿವೇಕಾನಂದ ಶೆಟ್ಟಿ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಈ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸುತ್ತಿರುವ ಕ್ರೀಡಾ ಸಮಿತಿ, ಮಹಿಳಾ ವಿಭಾಗ, ಯುವ ವಿಭಾಗ ಹಾಗೂ ಎಲ್ಲಾ ಪ್ರಾದೇಶಿಕ ಸಮಿತಿಗಳಿಗೆ ಅಭಿನಂದನೆಗಳು. ಪ್ರಮೀಳಾ ಜೆ. ಶೆಟ್ಟಿ ಹಲವು ವರ್ಷಗಳಿಂದ ನಮ್ಮ ಸಂಘದ ಯೋಗ ದಿನಾಚರಣೆಯನ್ನು ಯಶಸ್ವಿಯಾಗಿ ನಡೆಸಿಕೊಡುತ್ತಾ ಸಮಾಜದಲ್ಲಿ ಯೋಗದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ.

ಜ್ಯೋತಿ ಶೆಟ್ಟಿ ಯೋಗದಲ್ಲಿ 17 ವರ್ಷಗಳ ಅನುಭವ ಹೊಂದಿದ್ದು, ಎಸ್-ವ್ಯಾಸ ಯೋಗ ವಿಶ್ವವಿದ್ಯಾಲಯ ಬೆಂಗಳೂರು, ಆರೋಗ್ಯವರ್ಧಿನಿ ವಿಶ್ವವಿದ್ಯಾಲಯ ಅಹಮದನಗರ ಹಾಗೂ ಮಣಿಪಾಲ್ ವಿಶ್ವವಿದ್ಯಾಲಯದಲ್ಲಿ ಯೋಗ ಶಿಕ್ಷಣ ಪಡೆದಿರುವುದು ಸಂತಸದ ವಿಷಯವಾಗಿದೆ. ''ಆರೋಗ್ಯವೇ ಭಾಗ್ಯ, ಯೋಗವೇ ಆರೋಗ್ಯದ ಮಾರ್ಗ'' ಎಂಬ ಸಂದೇಶದೊಂದಿಗೆ ಎಲ್ಲರೂ ಪ್ರತಿದಿನ ಯೋಗಾಭ್ಯಾಸ ಮಾಡುವ ಸಂಕಲ್ಪ ಕೈಗೊಳ್ಳೋಣ ಎಂದು ಪುಣೆ ಬಂಟರ ಸಂಘದ ಅಧ್ಯಕ್ಷ ಅಜಿತ್ ಹೆಗ್ಡೆ ಕೆಂಜಾರು ಗುತ್ತು ನುಡಿದರು.



ನಮ್ಮ ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾದ ಯೋಗವು ಇಂದು ವಿಶ್ವದಾದ್ಯಂತ ಮಾನ್ಯತೆ ಪಡೆದಿದೆ. ಸಾವಿರಾರು ವರ್ಷಗಳ ಹಿಂದೆ ನಮ್ಮ ಋಷಿ-ಮುನಿಗಳು ಕಂಡುಕೊಂಡ ಅಮೃತ ಸಮಾನ ಯೋಗ ಮಾರ್ಗವನ್ನು ಇಂದು ಕೋಟ್ಯಾಂತರ ಜನರು ತಮ್ಮ ಜೀವನದ ಭಾಗವಾಗಿಸಿಕೊಂಡಿದ್ದಾರೆ. ಇದು ನಮ್ಮ ದೇಶಕ್ಕೆ ಹೆಮ್ಮೆಯ ವಿಷಯವಾಗಿದೆ. ಇಂದಿನ ಆಧುನಿಕ ಜೀವನದಲ್ಲಿ ನಾವು ಭೌತಿಕವಾಗಿ ಸಾಕಷ್ಟು ಅಭಿವೃದ್ಧಿ ಹೊಂದಿದ್ದರೂ, ಮಾನಸಿಕ ಒತ್ತಡ, ಆತಂಕ, ಖಿನ್ನತೆ, ಅನಾರೋಗ್ಯ ಮತ್ತು ಜೀವನಶೈಲಿ ಸಂಬಂಧಿತ ಕಾಯಿಲೆಗಳು ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಯೋಗವು ಕೇವಲ ಒಂದು ವ್ಯಾಯಾಮವಲ್ಲ, ಅದು ಆರೋಗ್ಯಕರ ಜೀವನದ ಸಂಪೂರ್ಣ ವಿಜ್ಞಾನವಾಗಿದೆ. ಯೋಗವು ನಮ್ಮ ದೇಹವನ್ನು ಸದೃಢಗೊಳಿಸುವುದರ ಜೊತೆಗೆ ಮನಸ್ಸಿಗೆ ಶಾಂತಿ, ಆತ್ಮವಿಶ್ವಾಸ ಮತ್ತು ಸಕಾರಾತ್ಮಕ ಚಿಂತನೆಯನ್ನು ನೀಡುತ್ತದೆ. ಪ್ರತಿದಿನ ಕೆಲವೇ ನಿಮಿಷಗಳ ಯೋಗಾಭ್ಯಾಸ ನಮ್ಮ ಜೀವನದಲ್ಲಿ ಅದ್ಭುತ ಬದಲಾವಣೆಯನ್ನು ತರಬಲ್ಲದು. ಮಹಿಳೆಯರ ದೃಷ್ಟಿಯಿಂದ ನೋಡಿದಾಗ ಯೋಗದ ಮಹತ್ವ ಇನ್ನೂ ಹೆಚ್ಚಾಗುತ್ತದೆ. ಮಹಿಳೆ ಒಂದು ಕುಟುಂಬದ ಶಕ್ತಿ, ಆಧಾರ ಮತ್ತು ಪ್ರೇರಣೆ. ಮನೆಯ ಎಲ್ಲರ ಆರೋಗ್ಯ, ಸಂತೋಷ ಮತ್ತು ಸುಖ ಶಾಂತಿಯ ಹಿಂದೆ ಒಬ್ಬ ಮಹಿಳೆಯ ಶ್ರಮ ಇರುತ್ತದೆ. ಆದ್ದರಿಂದ ಮಹಿಳೆಯರು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿರುವುದು ಅತ್ಯಂತ ಮುಖ್ಯವಾಗಿದೆ. ಯೋಗವು ಮಹಿಳೆಯರಿಗೆ ಆರೋಗ್ಯ, ಆತ್ಮವಿಶ್ವಾಸ ಮತ್ತು ಆಂತರಿಕ ಶಕ್ತಿಯನ್ನು ನೀಡುವ ಅತ್ಯುತ್ತಮ ಸಾಧನವಾಗಿದೆ ಯೋಗವು ಯಾವುದೇ ಜಾತಿ, ಧರ್ಮ, ಭಾಷೆ ಅಥವಾ ದೇಶಕ್ಕೆ ಸೀಮಿತವಾಗಿ. ಅದು ಇಡೀ ಮಾನವ ಕುಲದ ಆರೋಗ್ಯ ಮತ್ತು ಶಾಂತಿಗಾಗಿ ಇರುವ ವಿಶ್ವ ಮಾನವೀಯ ಸಂದೇಶವಾಗಿದೆ. ನಮ್ಮ ಸಂಘದ ಗೌರವಾಧ್ಯಕ್ಷ ಸಂತೋಷ್ ಶೆಟ್ಟಿ ಇನ್ನ ಕುರ್ಕಿಲ್‌ಬೆಟ್ಟು, ಅಧ್ಯಕ್ಷ ಅಜಿತ್ ಹೆಗ್ಡೆಯವರ ಮಾರ್ಗದರ್ಶನ ಮತ್ತು ಸಮಿತಿಯ ಎಲ್ಲಾ ಪದಾಧಿಕಾರಿಗಳು, ಮಹಿಳಾ ವಿಭಾಗ, ಯುವ ವಿಭಾಗ ಹಾಗೂ ಪ್ರಾದೇಶಿಕ ಸಮಿತಿಗಳ ಸದಸ್ಯರುಗಳ ಸಹಕಾರದಿಂದ ಈ ಯೋಗ ದಿನಾಚರಣೆ ಅರ್ಥಪೂರ್ಣವಾಗಿ ನಡೆದಿದೆ. ಯೋಗ ಶಿಕ್ಷಕಿಯರಾದ ಪ್ರಮೀಳಾ ಜೆ. ಶೆಟ್ಟಿ ಮತ್ತು ಜ್ಯೋತಿ ಶೆಟ್ಟಿ ಯೋಗದ ಬಗ್ಗೆ ಬಹಳಷ್ಟು ತಿಳಿಸಿಕೊಟ್ಟಿದ್ದಾರೆ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. **- ಶಮ್ಮಿ ಎ. ಹೆಗ್ಡೆ (ಕಾರ್ಯಾಧ್ಯಕ್ಷೆ : ಮಹಿಳಾ ವಿಭಾಗ ಬಂಟರ ಸಂಘ ಪುಣೆ)**

ಪುಣೆ ಬಂಟರ ಸಂಘದ ಸಮಾಜ ಕಲ್ಯಾಣ ಕಲ್ಪವೃಕ್ಷ ಕ್ರೀಡಾ ದಾತ ಯೋಜನೆಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗಾ ದಿನದಂಗವಾಗಿ ಯೋಗ ದಿನಾಚರಣೆಯು ಜೂ. 21ರಂದು ಬಂಟರ ಭವನದಲ್ಲಿ ಜರಗಿತು.

ಬಂಟರ ಸಂಘದ ಅಧ್ಯಕ್ಷ ಅಜಿತ್ ಹೆಗ್ಡೆ ಅಧ್ಯಕ್ಷತೆಯಲ್ಲಿ ನಡೆದ ಈ ಯೋಗ ಶಿಬಿರವನ್ನು ಚಾವಡಿಯ ಮಂಟಪದಲ್ಲಿ ಪೂಜೆ ಸಲ್ಲಿಸಿ ನಂತರ ದೀಪ ಬೆಳಗಿಸಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪುಣೆಯ ಯೋಗ ಉಪನ್ಯಾಸಕಿ ಜ್ಯೋತಿ ಶೆಟ್ಟಿ, ಪುಣೆಯ ಶೆಟ್ಟಿ ಯೋಗ ಕ್ಲಾಸ್‌ನ ನಿರ್ದೇಶಕಿ ಪ್ರಮೀಳಾ ಜೆ. ಶೆಟ್ಟಿ, ಸಂಘದ ಸಮಿತಿಯ ಪದಾಧಿಕಾರಿಗಳಾದ ಪ್ರಶಾಂತ್ ಶೆಟ್ಟಿ, ಚಂದ್ರಶೇಖರ್ ಶೆಟ್ಟಿ ನಿಟ್ಟೆ, ವಿವೇಕಾನಂದ ಶೆಟ್ಟಿ ಅವರ್ಸೆ, ಶೇಖರ್ ಸಿ. ಶೆಟ್ಟಿ, ರವಿ ಶೆಟ್ಟಿ ಕಾಪು, ಗಣೇಶ್ ಪೂಂಜಾ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಶಮ್ಮಿ ಎ. ಹೆಗ್ಡೆ, ಮಾಜಿ ಕಾರ್ಯಾಧ್ಯಕ್ಷೆ ಜಯಂತಿ ಶೆಟ್ಟಿ, ಮಹಿಳಾ ಸಮಿತಿಯ ಪ್ರಮುಖರಾದ ಸಂಧ್ಯಾ ಆರ್. ಶೆಟ್ಟಿ, ನೀನಾ ಬಿ. ಶೆಟ್ಟಿ, ವೀಣಾ ಪಿ. ಶೆಟ್ಟಿ, ನೀತಾ ಎಸ್. ಶೆಟ್ಟಿ, ಸಾರಿಕಾ ಸಿ. ಶೆಟ್ಟಿ, ವಿನಯಾ ಯು. ಶೆಟ್ಟಿ, ಗೀತಾ ಜೆ. ಶೆಟ್ಟಿ, ಯುವ ವಿಭಾಗ ಕಾರ್ಯಾಧ್ಯಕ್ಷ ಅಭಿನಂದನ್ ಶೆಟ್ಟಿ, ದಕ್ಷಿಣ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಸುಧಾಕರ ಸಿ. ಶೆಟ್ಟಿ, ಮಹಿಳಾ ಕಾರ್ಯಾಧ್ಯಕ್ಷೆ ವಿನೋದಾ ಶೆಟ್ಟಿ, ಉತ್ತರ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ನಾರಾಯಣ ಹೆಗ್ಡೆ, ಮಹಿಳಾ ಕಾರ್ಯಾಧ್ಯಕ್ಷೆ ಪ್ರೇಮಾ ಆರ್. ಶೆಟ್ಟಿ, ಪೂರ್ವ ಪ್ರಾದೇಶಿಕ ಸಮಿತಿಯ ಮಹಿಳಾ ಕಾರ್ಯಾಧ್ಯಕ್ಷೆ ಶಾಲಿನಿ ಎಂ. ಶೆಟ್ಟಿ ಹಾಗೂ ಸಂಘದ ಸಮಿತಿಯ ಪದಾಧಿಕಾರಿಗಳು ಮಹಿಳಾ ವಿಭಾಗ, ಯುವ ವಿಭಾಗದ ಪದಾಧಿಕಾರಿಗಳು, ಪ್ರಾದೇಶಿಕ ಸಮಿತಿಯ ಪದಾಧಿಕಾರಿಗಳು ಸಮಾಜ ಬಾಂಧವರು ಉಪಸ್ಥಿತರಿದ್ದರು.

ಪುಣೆಯ ಯೋಗ ಉಪನ್ಯಾಸಕಿ ಜ್ಯೋತಿ ಶೆಟ್ಟಿ ಯೋಗದ ಬಗ್ಗೆ ಉಪನ್ಯಾಸ ನೀಡಿದರು ಮತ್ತು ಪುಣೆಯ ಶೆಟ್ಟಿ ಯೋಗ ಕ್ಲಾಸ್‌ನ ನಿರ್ದೇಶಕಿ ಪ್ರಮೀಳಾ ಜೆ. ಶೆಟ್ಟಿ ಯೋಗ ದಿನಾಚರಣೆಯನ್ನು ನಡೆಸಿಕೊಟ್ಟರು. ಯೋಗ ತರಬೇತುದಾರೆ ಜ್ಯೋತಿ ಶೆಟ್ಟಿ ಮತ್ತು ಯೋಗ ಶಿಕ್ಷಕಿ ಪ್ರಮೀಳಾ ಶೆಟ್ಟಿಯವರನ್ನು ಸಂಘದ ವತಿಯಿಂದ ಶಾಲು ಪುಷ್ಪಗುಚ್ಛ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ನಿಯಮಿತ ಯೋಗಾಭ್ಯಾಸವು ದೈಹಿಕ, ಮಾನಸಿಕ, ಆಧ್ಯಾತ್ಮಿಕ ಸ್ವಾಸ್ತ್ಯವನ್ನು ಕಾಪಾಡುತ್ತದೆ ; ಯೋಗವು ಜೀವನದ ಅವಿಭಾಜ್ಯ ಅಂಗ : ನ್ಯಾಯವಾದಿ ಡಿ.ಕೆ.ಶೆಟ್ಟಿ





ಬಾಂಬೇ ಬಂಟ್ಸ್ ಅಸೋಸಿಯೇಶನ್‌ನಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮುಂಬಯಿ, ಜೂ.24- ಬಾಂಬೇ ಬಂಟ್ಸ್ ಅಸೋಸಿಯೇಶನ್, ಮುಂಬಯಿ ಇದರ ಆಯೋಜನೆಯಲ್ಲಿ ಮಹಿಳಾ ವಿಭಾಗದ ಸಹಯೋಗದೊಂದಿಗೆ ಜೂ. 21ರ ಆದಿತ್ಯವಾರ , ಸಂಘದ ಅಧ್ಯಕ್ಷ ನ್ಯಾಯವಾದಿ ಡಿ. ಕೆ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ, ಬಂಟ್ಸ್ ಸೆಂಟರ್, ಮೊದಲನೇ ಮಹಡಿ, ಜೂಯಿನಗರ, ನವಿ ಮುಂಬಯಿ ಇಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಅಧ್ಯಕ್ಷರು, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಹಾಗೂ ಅತಿಥಿಗಳಿಂದ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶಾಲಿನಿ ಶೆಟ್ಟಿ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು.

ಕಾರ್ಯಕ್ರಮದಲ್ಲಿ,ಅತಿಥಿಗಳಾಗಿ ಸ್ವಾತಿ ಶೆಟ್ಟಿ, ಯೋಗತಜ್ಞರು, ಸವಿತಾ ರತ್ನಾಕರ ಶೆಟ್ಟಿ, ಯೋಗ ತಜ್ಞರು ಮತ್ತು ರತಿ ಶೆಟ್ಟಿ, ಸಮಾಜ ಸೇವಕಿ, ಭಾಗವಹಿಸಿದರು.

ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಶಾಂತಾ ನಾರಾಯಣ ಶೆಟ್ಟಿ ಅತಿಥಿಗಳನ್ನು ಸ್ವಾಗತಿಸಿದರು. ತದನಂತರ ಮಹಿಳಾ ವಿಭಾಗದ ಪದಾಧಿಕಾರಿಗಳೊಂದಿಗೆ ಅಧ್ಯಕ್ಷ ನ್ಯಾಯವಾದಿ ಡಿ.ಕೆ.ಶೆಟ್ಟಿ ಮತ್ತು ಅತಿಥಿಗಳನ್ನು ಶಾಲು ಹೊದಿಸಿ, ಹೂಗುಚ್ಛಗಳನ್ನಿತ್ತು ಗೌರವಿಸಿದರು. ಇದರೊಂದಿಗೆ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಮತ್ತು ಇತರ ಅತಿಥಿಗಣ್ಯರನ್ನು ಹೂಗುಚ್ಛಗಳನ್ನಿತ್ತು ಗೌರವಿಸಿಸಿದರು.

ಎಸೋಸಿಯೇಷನ್ ಅಧ್ಯಕ್ಷ ನ್ಯಾಯವಾದಿ ಡಿ.ಕೆ.ಶೆಟ್ಟಿಯವರು ನಿಯಮಿತ ಯೋಗಾಭ್ಯಾಸವು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸ್ವಾಸ್ತ್ಯವನ್ನು ಕಾಪಾಡುತ್ತದೆ. ಆದ್ದರಿಂದ ಯೋಗವು ಜೀವನದ ಅವಿಭಾಜ್ಯ ಅಂಗ. ಯೋಗಾಭ್ಯಾಸವನ್ನು ಪ್ರತಿನಿತ್ಯ ಮಾಡಲೇಬೇಕು . ಬರೇ ವರ್ಷಕ್ಕೊಂದು ಬಾರಿ ಯೋಗ ದಿನದಂದು ಮಾತ್ರ ಮಾಡಿದರೆ ಸಾಲದು. ಹಾಗಾಗಿ ನಿತ್ಯ ಯೋಗ ಮಾಡಿ ಆರೋಗ್ಯ ಉಳಿಸಿ ಎಂದು ನುಡಿದರು.

ಅತಿಥಿಗಳಾದ ಸವಿತಾ ರತ್ನಾಕರ ಶೆಟ್ಟಿ ಹಾಗೂ ಯೋಗ ತಜ್ಞರು ತಮ್ಮ ಮಾತಿನಲ್ಲಿ ಪತಂಜಲಿ ಮಹರ್ಷಿಯವರು ವಿವರಿಸಿದ ಯೋಗಗಳ ವಿಧಾನ, ವಿವಿಧ ಆಸನ ಮತ್ತು ಯೋಗ ಜೀವನದಲ್ಲಿ ಯಾಕೆ ಅಗತ್ಯ ಎಂಬಿತ್ಯಾದಿಗಳ ಬಗ್ಗೆ ವಿವರಿಸಿದರು.

ಸ್ವಾತಿ ಶೆಟ್ಟಿ, ಹಾಗೂಯೋಗತಜ್ಞರು ಸೇರಿದ ಎಲ್ಲಾ ಅತಿಥಿಗಣ್ಯರಿಗೆ ಹಾಗೂ ಸಭಿಕರಿಗೆ, ಆರೋಗ್ಯಕ್ಕಾಗಿ ನಿತ್ಯ ಮಾಡಲೇ ಬೇಕಾದ ವಿವಿಧ ರೀತಿಯ ಯೋಗಾಭ್ಯಾಸವನ್ನು ಪ್ರಾಯೋಗಿಕವಾಗಿ ಸ್ವಯಂ ಪ್ರದರ್ಶಿಸಿ ಎಲ್ಲರೂ ಅರಿತು ಕೊಳ್ಳುವ ಹಾಗೆ ಸುಲಭ ರೀತಿಯಲ್ಲಿ ವಿವರಿಸಿದರು.

ಕಾರ್ಯಕ್ರಮದಲ್ಲಿ, ಎಸೋಸಿಯೇಷನ್‌ನ ಉಪಾಧ್ಯಕ್ಷ, ಐಕಳ ಕಿಶೋರ್ ಕೆ. ಶೆಟ್ಟಿ, ಗೌ. ಪ್ರ. ಕಾರ್ಯದರ್ಶಿ, ನ್ಯಾ. ಶೇಖರ್‌ಆರ್. ಶೆಟ್ಟಿ. ಗೌ. ಕೋಶಾಧಿಕಾರಿ, ಸಿ.ಎ. ವಿಶ್ವನಾಥ ಶೆಟ್ಟಿ, ಶಿಕ್ಷಣ ಸಮಿತಿ ಕಾರ್ಯಾಧ್ಯಕ್ಷ ಶ್ರೀಧರ ಕೆ. ಶೆಟ್ಟಿ,ಜತೆ ಕೋಶಾಧಿಕಾರಿ ಸಿ.ಎ. ದಿವಾಕರ ಶೆಟ್ಟಿ, ಸಮಾಜ ಕಲ್ಯಾಣ ಸಮಿತಿ ಜಯ ಸಿ. ಶೆಟ್ಟಿ ಹಾಗೂ ಪದಾಧಿಕಾರಿಗಳು, ಮಾಜಿ ಅಧ್ಯಕ್ಷರುಗಳು, ವಿಶ್ವಸ್ಥರು , ಮಹಿಳಾ ವಿಭಾಗದ ಮಾಜಿ ಕಾರ್ಯಾಧ್ಯಕ್ಷೆಯರು ಮತ್ತು ಯೋಗಾರ್ತಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮಹಿಳಾ ವಿಭಾಗದ ಉಪಾಧ್ಯಕ್ಷೆ ಸಹಾನಿ ಶೆಟ್ಟಿ, ಕಾರ್ಯದರ್ಶಿ ಉಷಾ ಶೆಟ್ಟಿ, ಕೋಶಾಧಿಕಾರಿ ನಾಗವೇಣಿ ಶೆಟ್ಟಿ, ಜತೆ ಕಾರ್ಯದರ್ಶಿ ಮಾಯ ಆಳ್ವ, ಜತೆ ಕೋಶಾಧಿಕಾರಿ ಉಮಾ ಶೆಟ್ಟಿ ಎಲ್ಲರೂ ವೇದಿಕೆಯಲ್ಲಿದ್ದರು.

ಮಹಿಳಾ ವಿಭಾಗದ ಕಾರ್ಯದರ್ಶಿ ಉಷಾ ಶೆಟ್ಟಿ ಕಾರ್ಯಕ್ರಮವನ್ನು ನಿರೂಪಿಸಿದರು.ಜತೆ ಕಾರ್ಯದರ್ಶಿ ಮಾಯ ಆಳ್ವ, ಧನ್ಯವಾದ ಗೈದರು. ಪದಾಧಿಕಾರಿಗಳು ಅತಿಥಿಗಳ ಪರಿಚಯಗಳನ್ನು ವಾಚಿಸಿದರು. ಕೊನೆಯಲ್ಲಿ ಲಘು ಉಪಾಹಾರ ನಡೆಯಿತು.

ಬಂಟರ ಸಂಘ ಮುಂಬಯಿ, ಭಿವಂಡಿ- ಬದ್ಲಾಪುರ ಪ್ರಾದೇಶಿಕ ಸಮಿತಿಯ ಯುವ ವಿಭಾಗದ ವತಿಯಿಂದ ರಕ್ತದಾನ ಶಿಬಿರ; ದಾನಗಳಲ್ಲಿ ಶ್ರೇಷ್ಠ ದಾನ ರಕ್ತದಾನ : ಸುಬೋಧ್ ಭಂಡಾರಿ





(ವರದಿ: ರವಿ.ಬಿ.ಅಂಚನ್ ಪಡುಬಿದ್ರಿ)

ಕಲ್ಯಾಣ್ ಜೂ. 24- ಇಂದು ದೇಶದ ಪ್ರತಿಯೊಂದು ಆಸ್ಪತ್ರೆಯಲ್ಲಿ ರಕ್ತದ ಅಭಾವವಿದೆ, ದಾನಗಳಲ್ಲಿ ಶ್ರೇಷ್ಠ ದಾನ ರಕ್ತದಾನ. ಒಂದು ಯೂನಿಟ್ ರಕ್ತದಿಂದ ಮೂರು ಪ್ರಾಣವನ್ನು ಉಳಿಸ ಬಹುದು. ನಮ್ಮ ಯುವ ವಿಭಾಗ ಪ್ರತಿವರ್ಷ ರಕ್ತದಾನ ಶಿಬಿರವನ್ನು ಏರ್ಪಡಿಸಿ ನೂರಕ್ಕಿಂತ ಹೆಚ್ಚು ಯೂನಿಟ್ ರಕ್ತ ಸಂಗ್ರಹಿಸಿ ನೀಡುತ್ತಿದೆ. ಕಳೆದ ವರ್ಷ ಎರಡು ಬಾರಿ ರಕ್ತದಾನ ಶಿಬಿರವನ್ನು ಏರ್ಪಡಿಸಿದ ಕೀರ್ತಿ ನಮ್ಮ ಸಮಿತಿಗೆ ಇದೆ. ನಮಗಾಗಿ ನಾವು ಬದುಕುತ್ತೇವೆ ನಾವು ಸಮಾಜಕ್ಕಾಗಿ ಬದುಕಿದಾಗ ಸಿಗುವ ಅನಂದ ವಿಶೇಷವಾಗಿರುತ್ತದೆ. ಇಂದು ಯುವ ವಿಭಾಗ ಸಂಕಲ್ಪ ಬ್ಲಡ್ ಬ್ಯಾಂಕ್‌ನ ರಾಜಶೇಖರ ನಾಯರ್ ಅವರ ಸಹಯೋಗ ದೊಂದಿಗೆ ಈ ಕಾರ್ಯಕ್ರಮವನ್ನು ಒಗ್ಗಟ್ಟಿನಿಂದ ಅಚ್ಚುಕಟ್ಟಾಗಿ ರಕ್ತದಾನ ಶಿಬಿರವನ್ನು ಏರ್ಪಡಿಸಿದ್ದಾರೆ .ಇಂತಹ ಕಾರ್ಯ ಸದಾ ಜರಗುತ್ತಿರಲಿ ಉತ್ತಮ ಕಾರ್ಯಗಳಿಗೆ ಪ್ರಾದೇಶಿಕ ಸಮಿತಿಯ ಸಹಕಾರ ಸದಾ ಇದೆ ಎಂದು ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಸುಬೋಧ್ ಭಂಡಾರಿ ನುಡಿದರು.

ಅವರು ಜೂನ್ 21 ರ ಭಾನುವಾರದಂದು ವಿಠಲ್‌ವಾಡಿ ರೈಲ್ವೆ ನಿಲ್ದಾಣದ ಸಮೀಪದ ಹೋಟೆಲ್ ಪ್ರವೀಣ್ ಇಂಟರ್‌ನ್ಯಾಷನಲ್ ಇದರ ಸಭಾಗೃಹ ದಲ್ಲಿ ಪ್ರಾದೇಶಿಕ ಸಮಿತಿಯ ಯುವ ವಿಭಾಗದ ವತಿಯಿಂದ ಜರಗಿದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಆರೋಗ್ಯ ಸಮಿತಿಯ ಕಾರ್ಯಾಧ್ಯಕ್ಷೆಯಾದ ಡಾ. ಪೂಜಾ ಶೆಟ್ಟಿ ಮಾತನಾಡುತ್ತಾ , ಡಾ. ಸ್ವರೂಪ್ ಹೆಗ್ಡೆಯವರ ಅನುಪಸ್ಥಿತಿಯಲ್ಲಿ ಅವರ ಮಾರ್ಗದರ್ಶನದಂತೆ ನಾವು ಆರೋಗ್ಯ ಶಿಬಿರವನ್ನು ಮಾಡುತ್ತಿದ್ದೇವೆ . ಇದರ ಲಾಭವನ್ನು ಎಲ್ಲರೂ ಪಡೆಯ ಬೇಕು .ಇಂದು ರಕ್ತದ ಸಿ.ಬಿ.ಸಿ, ರಕ್ತದ ಸಕ್ಕರೆ ಪ್ರಮಾಣ, ಕಣ್ಣಿನ ತಪಾಸಣೆ, ಹಲ್ಲುಗಳ ತಪಾಸಣೆ ನಡೆಯಲಿದೆ ಇದರ ಲಾಭವನ್ನು ಎಲ್ಲರೂ ಪಡೆಯ ಬೇಕು .ಈ ಕಾರ್ಯಕ್ಕೆ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಸುಬೋಧ್ ಭಂಡಾರಿ ಮತ್ತು ಅವರ ಕಾರ್ಯಾಕಾರಿ ಸಮಿತಿ ಮತ್ತು ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಶೋಭಾ ಎ. ಶೆಟ್ಟಿ ಮತ್ತು ಅವರ ಸಮಿತಿ ಸಹಕಾರವನ್ನು ನೀಡಿದ್ದಾರೆ ಎಂದರು.

ಇದಕ್ಕೂ ಮೊದಲು ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಸುಬೋಧ್ ಭಂಡಾರಿ ದೀಪ ಪ್ರಜ್ವಲಿಸಿ ಶಿಬಿರಕ್ಕೆ ಚಾಲನೆ ನೀಡಿದರು ಈ ಸಂದರ್ಭದಲ್ಲಿ ಸಂಚಾಲಕ ರವೀಂದ್ರ ಶೆಟ್ಟಿ, ಹರೀಶ್ ಶೆಟ್ಟಿ ಶಿಮುಂಜೆ ಪರಾರಿ, ವಂಡ್ಸೆ ಸುಧೀರ್‌ಶೆಟ್ಟಿ, ನಾಗಕಿರಣ್ ಶೆಟ್ಟಿ, ಶೋಭಾ ಶೆಟ್ಟಿ, ಡಾ. ಪೂಜಾ ಶೆಟ್ಟಿ, ಸುಶಾಂತ್ ಶೆಟ್ಟಿ, ಅರ್ಡಿ ಉದಯ ಶೆಟ್ಟಿ, ಅನಿಲ್ ಶೆಟ್ಟಿ, ದೇವರಾಜ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ರಕ್ತದಾನ ಶಿಬಿರದಲ್ಲಿ 104 ಯೂನಿಟ್ ರಕ್ತ ಸಂಗ್ರಹಿಸಿದರೆ, 159 ಸದಸ್ಯರು ರಕ್ತದ ಸಕ್ಕರೆ ಪ್ರಮಾಣ ಮತ್ತು ಸಿ.ಬಿ.ಸಿ ಪ್ರರೀಕ್ಷಿಸಿದರು ಹಾಗೂ 41 ಸದಸ್ಯರು ಹಲ್ಲು ತಪಾಸಣೆಯನ್ನು ಮಾಡಿದರು.

ಜೂ.27 ರಂದು 'ಪರಂಪರೆಯಿಂದ ಪ್ರಗತಿಗೆ' ವಿಶೇಷ ಸಂವಾದ, ಸಾಧಕರಿಗೆ ಗೌರವಾರ್ಪಣೆ

ಐರೋಲಿ ಮೆಹತಾ ಕಾಲೇಜಿನಲ್ಲಿ ಬೆಳ್ಳಿಹಬ್ಬದ ನಿಮಿತ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ



ವಿ.ಎನ್.ಹೆಗಡೆ, ಡಾ. ಜಿ. ಎನ್. ಉಪಾಧ್ಯ, ಚಂದ್ರಶೇಖರ ಪಾಲೆತ್ತಾಡಿ, ವ್ಯಾಸಮೂರ್ತಿ ಮುಗುಳಿ, ದೇಶಪಾಂಡೆ, ಜಾನ್ ಥೋಮಸ್ .

ನವಿಮುಂಬಯಿ,ಜೂ. 24- ಮುಂಬಯಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಮೆಹತಾ ಕಾಲೇಜ್, ಐರೋಳಿ ಇದರ ಆಶ್ರಯದಲ್ಲಿ ಜೂ.27 ರ ಶನಿವಾರದಂದು ಬೆಳಿಗ್ಗೆ 11ಕ್ಕೆ ಪರಂಪರೆಯಿಂದ ಪ್ರಗತಿಗೆ ವಿಶೇಷ ಸಂವಾದ ಹಾಗೂ ವಿಶಿಷ್ಟ ಶಿಕ್ಷಣ ಸಂಸ್ಥೆಗಳ ಸಾಧಕರನ್ನು ಗೌರವಿಸುವ ಕಾರ್ಯಕ್ರಮವು ಕಾಲೇಜ್‌ನ ಸಭಾಂಗಣದಲ್ಲಿ ಜರಗಲಿದೆ.

ಜ್ಞಾನ ವಿಕಾಸ ಮಂಡಳದ ಮೆಹತಾ ಕಾಲೇಜ್ ಐರೋಲಿ,ನವಿ ಮುಂಬಯಿ ರಜತಮಹೋತ್ಸವದ ಅಂಗವಾಗಿ ಕನ್ನಡ ಸಂಘಟನೆಗಳ ಪದಾಧಿಕಾರಿಗಳು ಮತ್ತು ಶಿಕ್ಷಣತಜ್ಞರಿಗಾಗಿ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ ಸಂಯೋಜನೆ ಯೊಂದಿಗೆ 'ಪರಂಪರೆಯಿಂದ ಪ್ರಗತಿಗೆ: ಭಾರತೀಯ ಜ್ಞಾನ ಪರಂಪರೆ' ಈ ಹಿನ್ನೆಲೆಯಲ್ಲಿ ಸಂವಾದ ಕಾರ್ಯಕ್ರಮ ನಡೆಯಲಿದ್ದು ಇದೇ ಸಂದರ್ಭದಲ್ಲಿ ತುಳು ಕನ್ನಡ ಶಿಕ್ಷಣ ಸಂಸ್ಥೆಯ ಸಾಧಕರಿಗೆ ಗೌರವಾರ್ಪಣೆ ಸಹ ನಡೆಯಲಿದೆ. ಇದೇ ಸಂದರ್ಭದಲ್ಲಿ ಸಾಹಿತ್ಯ ಹಾಗು ಸಾಂಸ್ಕೃತಿಕ ಕ್ಷೇತ್ರದಲ್ಲಿಸಾಧನೆಗೈದ ಮಹನೀಯರಿಗೆ ಸನ್ಮಾನ ಕಾರ್ಯಕ್ರಮವೂ ಏರ್ಪಡಿಸಲಾಗಿದೆ. ಮುಂಬಯಿ ವಿಶ್ವವಿದ್ಯಾಲಯ ಪ್ರಕಟಿಸಿದ ಭಾರತೀಯ ಜ್ಞಾನ ಪರಂಪರೆ ಕನ್ನಡ ಆವೃತ್ತಿಯ ಹಿನ್ನೆಲೆಯಲ್ಲಿ ಒಂದು ಸಂವಾದ ಕಾರ್ಯಕ್ರಮವನ್ನು ವಿವಿಧ ವಿಷಯ ತಜ್ಞರು ಅಂದು ನಡೆಸಿಕೊಡಲಿದ್ದಾರೆ.

ಮೆಹತಾ ಕಾಲೇಜ್ ಬೆಳ್ಳಿ ಹಬ್ಬದ ಅಂಗವಾಗಿ ಏರ್ಪಡಿಸಿದ ಈ ಕಾರ್ಯಕ್ರಮಕ್ಕೆ ಹಲವಾರು ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳನ್ನು ಸಂಪರ್ಕಿಸಲಾಗಿದೆ ಹಾಗು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಕರ್ನಾಟಕ ಸಂಘ ಡೊಂಬಿವಿಲಿ, ವಿದ್ಯಾ ಪ್ರಸಾರಕ ಮಂಡಲ ಮುಳುಂದ, ಎನ್ ಕೆ ಇ ಎಸ್ ವಡಾಲಾ, ಬಂಟರ ಸಂಘ ಕುರ್ಲಾ, ಬಂಟ್ಸ್ ಹೈಯರ್‌ಎಜುಕೇಶನ್ , ಜುಯಿನಗರ, ಮೊಗವೀರ ಶಿಕ್ಷಣ ಸಂಸ್ಥೆ ಅಂಧೇರಿ , ಚೆಂಬೂರ್‌ಕರ್ನಾಟಕ ಸಂಘ, ಕನ್ನಡ ಭವನ, ಗುರುನಾರಾಯಣ ರಾತ್ರಿ ಶಾಲೆ (ಬಿಲ್ಲವರ ಅಸೋಸಿಯೇಷನ್ ಪ್ರಾಯೋಜಿತ), ನವೋದಯ ಕನ್ನಡ ಸಂಘ, ಕಿಶನ್ ನಗರ , ಕನ್ನಡಭವನ ಶಾಲೆ ಮುಂಬಯಿ , ನಿಜಲಿಂಗಪ್ಪ ಶಾಲೆ ಅಂಬರನಾಥ್....ಇತ್ಯಾದಿ ಸಂಘಟನೆಗಳು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಯಶಸ್ಸನ್ನು ಪಡೆದಿವೆ, ಕನ್ನಡ ಸಾಹಿತ್ಯ ಹಾಗು ಸಂಸ್ಕೃತಿ ಮತ್ತು ಸಂಘಟನೆಗಳಲ್ಲಿ ಸಾಧನೆಗೈದ ಮಹನೀಯರನ್ನು ಆಹ್ವಾನಿಸಲಾಗಿದೆ. ಕನ್ನಡ ನಾಡು,ನುಡಿಗಾಗಿ ಮತ್ತು ಕನ್ನಡಾ ಸಂಸ್ಕೃತಿ ಗಾಗಿ ಹಲವಾರು ಸಂಸ್ಥೆಗಳು ಮುಂಬಯಿಯಲ್ಲಿ ಕನ್ನಡದ ನೆಲದ ಕಂಪನ್ನು ಹರಡುತ್ತಿದೆ, ಈ ಸಂಸ್ಥೆಗಳನ್ನು ಸಹ ಇದೇ ಸಂದರ್ಭದಲ್ಲಿ ಗೌರವಿಸಲಾಗುವುದು.

ಜ್ಞಾನ ವಿಕಾಸ ಮಂಡಳದ ಮೆಹತಾ ಮಹಾವಿದ್ಯಾಲಯ ಕಳೆದ 25 ವರ್ಷಗಳಿಂದ ನವಿ ಮುಂಬಯಿ ಐರೋಲಿಯಲ್ಲಿ ಗುಣಮಟ್ಟದ ಶಿಕ್ಷಣಕ್ಕಾಗಿ ಹೆಸರುವಾಸಿಯಾಗಿದೆ. ನ್ಯಾಕ್‌ನಿಂದ 'ಅ'ಶ್ರೇಣಿಯನ್ನು ಪಡೆದಿರುವ ಈ ಶಿಕ್ಷಣ ಸಂಸ್ಥೆ ವಿವಿಧ ತರಗತಿಗಳನ್ನು ಹೊಂದಿದ್ದು ಸುಮಾರು 4 ಸಾವಿರ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಕೌಶಲ್ಯ ಶಿಕ್ಷಣ, ಸಂಶೋಧನಾ ಕ್ಷೇತ್ರ , ಉದ್ಯೋಗ ಮೇಳ, ವಿವಿಧ ರೀತಿಯ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಂಡು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಕೊಡುಗೆ ಸಲ್ಲಿಸುತ್ತಿದೆ. 25 ವರ್ಷಗಳು ಸಂದ ಸಂದರ್ಭದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡೊಳ್ಳುತ್ತಿದೆ.

ಈ ವಿಶೇಷ ಕಾರ್ಯಕ್ರಮಕ್ಕೆ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರು ಮುಖ್ಯ ಅತಿಥಿಗಳಾಗಿ ಮತ್ತು ಕರ್ನಾಟಕ ಮಲ್ಲದ ಸಂಪಾದಕರಾದ ಚಂದ್ರಶೇಖರ ಪಾಲೆತ್ತಾಡಿ ಅವರು ಗೌರವ ಅತಿಥಿಗಳಾಗಿ ಆಗಮಿಸಲಿದ್ದಾರೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ವಿ.ಎನ್.ಹೆಗಡೆ ಅವರು ವಹಿಸಿಕೊಳ್ಳಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಸಂಘಟಕರು, ಕನ್ನಡ ಸಾಹಿತ್ಯ ಸಂಸ್ಕೃತಿ ಸಂಘಟನೆಗಳ ಪದಾಧಿಕಾರಿಗಳು, ಶಿಕ್ಷಣ ತಜ್ಞರು ಮತ್ತು ಸಾಹಿತಿಗಳು ಭಾಗವಹಿಸಲು ಜ್ಞಾನ ವಿಕಾಸ ಮಂಡಳದ ಮೆಹತಾ ಕಾಲೇಜ್ ಐರೋಲಿಯ ಪ್ರಧಾನ ಕಾರ್ಯದರ್ಶಿ ವ್ಯಾಸಮೂರ್ತಿ ಮುಗಳಿ ಮತ್ತು ಪ್ರಾಚಾರ್ಯ ಡಾ. ಬಿ.ಆರ್.ದೇಶಪಾಂಡೆ ಅವರು ವಿನಂತಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 7021581383, 9769081632 ಮತ್ತು 9960264749 ಸಂಪರ್ಕಿಸಲು ಕೋರಲಾಗಿದೆ.

ಶ್ರೀ ಶನೀಶ್ವರ ದೇವಸ್ಥಾನ ಘಾಟ್ಕೋಪರ್(ಪ); ಇಂದು 'ಶ್ರೀ ಕೃಷ್ಣ ಸಂಧಾನ' ಯಕ್ಷಗಾನ ತಾಳಮದ್ದಳೆ

ಮುಂಬಯಿ, ಜೂ.24- ಮೌಲಾನಾ ಕಂಪೌಂಡ್, ಗಾಂವ್‌ದೇವಿ ರಸ್ತೆ, ಸಂಘಾನಿ ಎಸ್ಟೇಟ್, ಘಾಟ್‌ಕೋಪರ್(ಪ.) ಇಲ್ಲಿನ ಶ್ರೀ ಶನೀಶ್ವರ ದೇವಸ್ಥಾನದಲ್ಲಿ ಜೂ.25 ರಂದು ಗುರುವಾರ ಬೆಳಿಗ್ಗೆ 10 ಗಂಟೆಗೆ ವಿಶಾಲ ಯಕ್ಷ ಬಳಗ ನಂದಳಿಕೆ, ಕಾರ್ಕಳ ಇವರ ಕಲಾವಿದರ ಕೊಡುವಿಕೆಯಲ್ಲಿ 'ಶ್ರೀ ಕೃಷ್ಣ ಸಂಧಾನ' ಎಂಬ ಆಖ್ಯಾನವನ್ನು ಯಕ್ಷಗಾನ ತಾಳಮದ್ದಳೆ ರೂಪದಲ್ಲಿ ಸಾದರಪಡಿಸಲಿದ್ದಾರೆ.

ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಲೆ ಹಾಗೂ ಕಲಾವಿದರಿಗೆ ಪ್ರೋತ್ಸಾಹವನ್ನು ನೀಡಬೇಕಾಗಿ ಶ್ರೀ ಶನೀಶ್ವರ ದೇವಸ್ಥಾನದ ಪ್ರಕಟಣೆ ತಿಳಿಸಿದೆ .

ಸೃಜನ್ ಕೆ. ಪೂಜಾರಿ ಸಿಎ ಪರೀಕ್ಷೆಯಲ್ಲಿ ಉತ್ತೀರ್ಣ



ಮುಂಬಯಿ, ಜೂ.24 -- ದ ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಎಕೌಂಟೆಂಟ್ ಆಫ್ ಇಂಡಿಯಾ ಮೇ 2026ರಲ್ಲಿ ನಡೆಸಿದ ಸಿಎ ಪರೀಕ್ಷೆಯಲ್ಲಿ ಸೃಜನ್ ಕೆ. ಪೂಜಾರಿ ಇವರು ಉತ್ತೀರ್ಣರಾಗಿರುವರು.

ಸೃಜನ್ ಪೂಜಾರಿ ದಹಿಸರ್ ಪೂರ್ವದ ಎನ್. ಜಿ. ಪಾರ್ಕ್ ನಿವಾಸಿಯಾಗಿದ್ದು, ಮೂಲತ: ತೋಕೂರು ಕೇಶವ ಪೂಜಾರಿ ಹಾಗೂ ಇಡ್ಯ ಸುರತ್ಕಲ್ ಜಯಶ್ರೀ ಕೆ. ಪೂಜಾರಿ ದಂಪತಿಯ ಪುತ್ರರಾಗಿರುವರು.

ಮಾರಿಷಸ್‌ನಲ್ಲಿ ಮೂರು ದಿನದ ವಿಶ್ವ ಧಾರ್ಮಿಕ ನಾಯಕರ ಸಮಾವೇಶದಲ್ಲಿ ಪುತ್ತಿಗೆ ಶ್ರೀಗಳು




ಮಾರಿಷಸ್, ಜೂ.24- ಮಾರಿಷಸ್ ದೇಶದಲ್ಲಿ ನಡೆಯಲಿರುವ ಮೂರು ದಿನದ ವಿಶ್ವ ಧಾರ್ಮಿಕ ನಾಯಕರ ಸಮಾವೇಶದಲ್ಲಿ ಪಾಲ್ಗೊಳ್ಳಲು, ಶ್ರೀ ಪುತ್ತಿಗೆ ಶ್ರೀಗಳು ಆಗಮಿಸಿದಾಗ, ಮಾರಿಷಸ್ ದೇಶದ ಅಧ್ಯಕ್ಷರಾದ ಧರಮ್ ಬೀರ್‌ಗೋಕುಲ್ ಅವರು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಸುಮಾರು ಎಂಬತ್ತಕ್ಕೂ ಅಧಿಕ ದೇಶಗಳಿಂದ ಆಗಮಿಸಿರುವ ಧಾರ್ಮಿಕ ಮತ್ತು ಸಾಮಾಜಿಕ ಸೇವಾ ಸಂಸ್ಥೆಗಳ ನಾಯಕರ ಸಮ್ಮುಖದಲ್ಲಿ ವಿಶ್ವದ ಸಮಕಾಲೀನ ಸವಾಲುಗಳೆನಿಸಿರುವ 'ಹವಾಮಾನ ವೈಪರಿತ್ಯ, ಸಂಘರ್ಷ ಮತ್ತು ಋಣಭಾರ' ಎಂಬ ವಿಷಯದಲ್ಲಿ ಶ್ರೀ ಪುತ್ತಿಗೆ ಶ್ರೀಗಳು ದಿಕ್ಸೂಚಿ ಭಾಷಣ ಮಾಡಿದರು.

ಪುಣೆ: ಮದುಮಗನ ಕೊಲೆಗೆ ಮಹತ್ವದ ತಿರುವು; ಮುಸುಕು ಧರಿಸಿ ಹಿಂಬಾಲಿಸಿದ್ದ ವಧುವಿನ ಪ್ರಿಯಕರ



ಪುಣೆ, ಜೂ.24 - ತಾನು ಮದುವೆಯಾಗಲಿದ್ದ ಯುವ ಉದ್ಯಮಿ ಕೇತನ್ ಅಗರ್ವಾಲ್‌ನನ್ನು ಇಲ್ಲಿಗೆ ಸಮೀಪದ ಲೋಹಗಡ್ ಕೋಟೆಯಲ್ಲಿ ಆಳವಾದ ಕಂದರಕ್ಕೆ ತಳ್ಳಿ ಕೊಲೆ ಮಾಡಲು ವಧು ಸಿಯಾ ಗೋಯೆಲ್‌ಗೆ ಸಹಾಯ ಮಾಡಿದ ಆಕೆಯ ಪ್ರಿಯಕರ ಚೇತನ್ ಚೌಧರಿ ಮುಸುಕು ಧರಿಸಿ ಅವರನ್ನು ಹಿಂಬಾಲಿಸುತ್ತಿರುವುದನ್ನು ತೋರಿಸುವ ಸಿಸಿಟಿವಿ ದೃಶ್ಯಾವಳಿ ಈ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಪ್ರಮುಖ ಮಾಹಿತಿಯನ್ನು ಒದಗಿಸಿದೆ.

ಸುಮಾರು 33 ಡಿಗ್ರಿ ಸೆಲ್ಸಿಯಸ್ ತಾಪಮಾನವಿದ್ದರೂ ಆ ವ್ಯಕ್ತಿ ಹೂಡಿ ಧರಿಸಿರುವುದು ಅಸಾಮಾನ್ಯವೆಂದು ಪೊಲೀಸರು ಕಂಡುಕೊಂಡರು ಮತ್ತು ಆತನ ಒಟ್ಟಾರೆ ಅನುಮಾನಾಸ್ಪದ ಚಲನವಲನ ಕೇತನ್ ಸಾವಿನ ಬಗ್ಗೆ ಮತ್ತಷ್ಟು ತನಿಖೆ ನಡೆಸಲು ಪ್ರೇರೇಪಿಸಿತು. ಇದನ್ನು ಆರಂಭದಲ್ಲಿ ದುರಂತ ಟ್ರೆಕ್ಕಿಂಗ್ ಅಪಘಾತವೆಂದು ಬಿಂಬಿಸಲಾಗಿತ್ತು.

ಜೂ.18 ರಂದು ಟ್ರೆಕ್ಕಿಂಗ್‌ನಲ್ಲಿದ್ದಾಗ ಸಾವನ್ನಪ್ಪಿದ 26 ವರ್ಷದ ಕೇತನ್‌ನನ್ನು ಆತನ ವಧು ಸಿಯಾ (20) ಮತ್ತು ಆಕೆಯ ಪ್ರೇಮಿ ಚೇತನ್ (22) ಅವರು ಕಮರಿಗೆ ತಳ್ಳಿ ಸಾಯಿಸಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಸಿಯಾ ಮತ್ತು ಕೇತನ್ ಫೆಬ್ರವರಿಯಲ್ಲಿ ನಿಶ್ಚಿತಾರ್ಥ ಮಾಡಿಕೊಂಡರು ಮತ್ತು ನವೆಂಬರ್‌ನಲ್ಲಿ ಉದಯಪುರದಲ್ಲಿ ನಡೆಯಲಿದ್ದ ಅದ್ದೂರಿ ಸಮಾರಂಭದಲ್ಲಿ ಮದುವೆಯಾಗಲು ನಿರ್ಧರಿಸಲಾಗಿತ್ತು, ಇದಕ್ಕಾಗಿ ಅರಮನೆಯನ್ನು ಕೂಡ ಕಾಯ್ದಿರಿಸಲಾಗಿತ್ತು.

'ಕೇತನ್ ಸಹೋದರಿ ಸಂಜನಾ ಮತ್ತು ಆತನ ಇತರ ಕುಟುಂಬ ಸದಸ್ಯರೊಂದಿಗೆ ವಿಚಾರಣೆ ನಡೆಸಿದಾಗ, ಸಿಯಾ ಘಟನೆಗೆ ಮೊದಲು ಕೇತನ್‌ಗೆ ಲೋಹಗಡ್ ಕೋಟೆಗೆ ತನ್ನೊಂದಿಗೆ ಬರುವಂತೆ ಹಲವು ಬಾರಿ ಮನವೊಲಿಸಿದ್ದಾಳೆಂದು ನಮಗೆ ತಿಳಿದುಬಂತು. ಮೇ 31 ರಂದು ಸಿಯಾ ಕೇತನ್‌ನನ್ನು ಲೋಹಗಡ್ ಕೋಟೆಗೆ ಕರೆದೊಯ್ದಿದ್ದಳು. ಜೂ.4 ರಂದು ಲೋಹಗಡ್ ಕೋಟೆಗೆ ಹೋಗಬೇಕೆಂದು ಆಕೆ ಮತ್ತೆ ಒತ್ತಾಯಿಸಿದಳು. ಆದಾಗ್ಯೂ, ಕೇತನ್‌ನ ತಾಯಿ ಆತನನ್ನು ಎರಡನೇ ಬಾರಿಗೆ ಅಲ್ಲಿಗೆ ಹೋಗಲು ಅನುಮತಿಸಲಿಲ್ಲ' ಎಂದು ಅಧಿಕಾರಿ ವಿವರಿಸಿದರು. ಸಿಯಾ ಮತ್ತು ಚೇತನ್ ಕೇತನ್‌ನನ್ನು ವಿವಾಹಪೂರ್ವ ಫೋಟೋಶೂಟ್‌ಗಾಗಿ ಬಾಲಿಗೆ ಹೊರಡುವ ಮೊದಲು ಮುಗಿಸಲು ಬಯಸಿದ್ದರು. ಕೇತನ್‌ನ ಪಾಸ್‌ಪೋರ್ಟ್ ಪ್ರವಾಸಕ್ಕೆ ಮೊದಲು ನಿಗೂಢವಾಗಿ ಕಾಣೆಯಾದ ಕಾರಣ ಆ ಪ್ರವಾಸವು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಅಧಿಕಾರಿಗಳು ವಿವರಿಸಿದರು.

ಈ ವರ್ಷದ ಆರಂಭದಲ್ಲಿ ಸಿಯಾ ಜತೆಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದ ಕೇತನ್ ಅಗರ್ವಾಲ್, ಜೂ.18 ರಂದು ಐತಿಹಾಸಿಕ ಕೋಟೆಯ ಬಂಡೆಯಿಂದ ಕೆಳಗೆ ಬಿದ್ದು ಸಾವನ್ನಪ್ಪಿದರು. ಈ ಘಟನೆಯನ್ನು ಆರಂಭದಲ್ಲಿ ಆಕಸ್ಮಿಕ ಸಾವು ಎಂದು ದಾಖಲಿಸಲಾಗಿತ್ತು, ಸಿಯಾ ಕೂಡ ಟ್ರೆಕ್ಕಿಂಗ್ ಸಮಯದಲ್ಲಿ ಆತ ಜಾರಿ ಬಿದ್ದಿದ್ದಾಗಿ ಆತನ ಕುಟುಂಬಕ್ಕೆ ತಿಳಿಸಿದ್ದರು. ಪ್ರಕರಣದ ತನಿಖೆ ನಡೆಸುವ ಸಂದರ್ಭ ಘಟನೆಯ ಸುತ್ತಲಿನ ಕೆಲವು ಸಂದರ್ಭಗಳು ಅನುಮಾನವನ್ನು ಹುಟ್ಟುಹಾಕಿದವು ಇದು ಆಳವಾದ ತನಿಖೆಗೆ ಕಾರಣವಾಯಿತು. ಕೋಟೆಯ ಟಿಕೆಟ್ ಕೌಂಟರ್‌ನಲ್ಲಿ ಅಳವಡಿಸಲಾದ ಸಿಸಿಟಿವಿ ಕ್ಯಾಮೆರಾಗಳನ್ನು ನಾವು ಪರಿಶೀಲಿಸಿದಾಗ ಅಲ್ಲಿ ಕೇತನ್ ಮತ್ತು ಸಿಯಾ ಒಟ್ಟಿಗೆ ನಡೆದುಕೊಂಡು ಹೋಗುವುದನ್ನು ನಾವು ಗಮನಿಸಿದ್ದೇವೆ ಎಂದು ತನಿಖೆಯ ಭಾಗವಾಗಿದ್ದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. ಈ ದೃಶ್ಯಾವಳಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವಾಗ, ಕೇತನ್ ಮತ್ತು ಸಿಯಾ ಅವರ ಹಿಂದೆ ಕೆಲವು ಮೀಟರ್‌ಗಳಷ್ಟು ಹಿಂದೆ ಇದ್ದ ವ್ಯಕ್ತಿಯನ್ನು ಪೊಲೀಸರು ಗಮನಿಸಿದರು.

'ಆ ವ್ಯಕ್ತಿ ಶಾರ್ಟ್ಸ್ ಮತ್ತು ಹೂಡಿ ಧರಿಸಿದ್ದ. ಹೂಡಿಯ ಮುಂಭಾಗವು ತುಂಬಾ ಕೆಳಕ್ಕೆ ಎಳೆಯಲ್ಪಟ್ಟಿದ್ದರಿಂದ ಆತನ ಮುಖ ಕಾಣಿಸುತ್ತಿರಲಿಲ್ಲ. ಹೆಚ್ಚುವರಿಯಾಗಿ ಆ ವ್ಯಕ್ತಿ ಹೂಡಿಯ ಮೇಲೆ ಹೆಡ್‌ಸೆಟ್ ಧರಿಸಿದ್ದ. ಇನ್ನೊಂದು ದೃಶ್ಯಾವಳಿಯಲ್ಲಿ ಸಿಯಾ ಇದ್ದಕ್ಕಿದ್ದಂತೆ ಹಿಂತಿರುಗಿ ನೋಡುತ್ತಿರುವುದನ್ನು ನಾವು ಗಮನಿಸಿದ್ದೇವೆ ಮತ್ತು ಅದೇ ಸಮಯದಲ್ಲಿ, ಹೂಡಿಯಲ್ಲಿದ್ದ ವ್ಯಕ್ತಿ ಇದ್ದಕ್ಕಿದ್ದಂತೆ ಕೆಳಗೆ ಕುಳಿತಿದ್ದನ್ನು ನಾವು ಗಮನಿಸಿದ್ದೇವೆ' ಎಂದು ಅಧಿಕಾರಿ ಹೇಳಿದರು.

ಬಳಿಕ ಜೂ.18ರಂದು ಆ ನಿರ್ದಿಷ್ಟ ಸಮಯದ ತಾಪಮಾನವನ್ನು ಪರಿಶೀಲಿಸಿದಾಗ ಅದು 33 ಡಿಗ್ರಿ ಸೆಲ್ಸಿಯಸ್ ಎಂದು ತಿಳಿದುಬಂದಿದೆ ಮತ್ತು ಅಂತಹ ಶಾಖದಲ್ಲಿ ಯಾರಾದರೂ ಹೂಡಿ ಏಕೆ ಧರಿಸುತ್ತಾರೆ ಎಂದು ಆಶ್ಚರ್ಯವುಂಟಾಯಿತು ಎಂದು ಅವರು ತಿಳಿಸಿದರು. ತನಿಖೆಯ ಸಮಯದಲ್ಲಿ ಸಿಯಾ ಈ ಹಿಂದೆ ಮದುವೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು ಮತ್ತು ಮದುವೆಯನ್ನು ಒಂದು ವರ್ಷ ಮುಂದೂಡಬಹುದೇ ಎಂದು ಕೂಡ ಒಮ್ಮೆ ಕೇಳಿದ್ದಾಗಿ ತನಿಖೆ ಸಂದರ್ಭ ಕೇತನ್ ಅವರ ಚಿಕ್ಕಪ್ಪ ಪೊಲೀಸರಿಗೆ ವಿವರಿಸಿದ್ದಾರೆ.

ಜೂ.14 ರಂದು ಕೇತನ್ ಬಳಿ ಲೋಹಗಡ್‌ಗೆ ಹೋಗಬೇಕೆಂದು ಸಿಯಾ ಮತ್ತೊಮ್ಮೆ ಒತ್ತಾಯಿಸಿದಳು. ಆ ದಿನ, ಕೇತನ್‌ನನ್ನು ಬಂಡೆಯಿಂದ ತಳ್ಳಲು ಆಕೆ ಪ್ರಯತ್ನಿಸಿದ ಬಗ್ಗೆ ಆರೋಪಿಸಲಾಗಿದೆ. ಆದಾಗ್ಯೂ, ಆತ ಪೊದೆಯನ್ನು ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾದ. ಕೇತನ್ ತನ್ನನ್ನು ಏಕೆ ತಳ್ಳಲಾಯಿತು ಎಂದು ಯೋಚಿಸಿದಾಗ, ಆಕೆ ಹಾವಿನ ಬಗ್ಗೆ ಸುಳ್ಳು ಎಚ್ಚರಿಕೆ ನೀಡಿ, ಆತನನ್ನು ರಕ್ಷಿಸುವ ರೀತಿಯಲ್ಲಿ ತೋರಿಸಲು ಪ್ರಯತ್ನಿಸಿದ್ದಾಗಿ ಅಧಿಕಾರಿ ಹೇಳಿದರು.

ಈ ಬೆಳವಣಿಗೆಗಳ ಬಳಿಕ ತನಿಖಾಧಿಕಾರಿಗಳು ತನಿಖೆಯನ್ನು ವಿಸ್ತರಿಸಿ, ಕರೆ ವಿವರ ದಾಖಲೆಗಳು ಮತ್ತು ಡಿಜಿಟಲ್ ಸಂವಹನ ಡೇಟಾ ಸೇರಿದಂತೆ ತಾಂತ್ರಿಕ ಪುರಾವೆಗಳನ್ನು ವಿಶ್ಲೇಷಿಸಿದರು ಎಂದು ಅವರು ವಿವರಿಸಿದರು.

ಸಿಯಾಳ ಕರೆ ದಾಖಲೆಗಳ ಪರಿಶೀಲನೆಯ ಸಂದರ್ಭ ಆಕೆಯ ಮತ್ತು ಪ್ರೇಮಿ ಚೇತನ್ ಚೌಧರಿ ಮಧ್ಯೆ ಹಲವು ಬಾರಿ ಸಂಪರ್ಕದ ಬಗ್ಗೆ ವಿವರಗಳು ಲಭ್ಯವಾದವು. ಅವರ ಮಧ್ಯೆ ಗಂಟೆಗಳ ಕಾಲ ನಡೆದ ಹಲವಾರು ಸಂಭಾಷಣೆಗಳು ಸೇರಿದಂತೆ, ದೀರ್ಘಾವಧಿಯಲ್ಲಿ ಇಬ್ಬರ ಮಧ್ಯೆ ಸಾವಿರಾರು ಕರೆಗಳು ವಿನಿಮಯವಾಗಿರುವುದನ್ನು ನಾವು ಕಂಡುಕೊಂಡಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದರು.

ತಾಂತ್ರಿಕ ವಿಶ್ಲೇಷಣೆಯು ಇಬ್ಬರ ನಡುವೆ ನಿಕಟ ಸಂಪರ್ಕವನ್ನು ತೋರಿಸಿ ಅವರು ಕೇತನ್ ಕೊಲೆಗಾಗಿ ಉತ್ತಮ ಸಂಚು ರೂಪಿಸಿದ್ದನ್ನು ದೃಢಪಡಿಸಿತು.ಬಳಿಕ ನಾವು ಚೌಧರಿಗೆ ಸಂಬಂಧಿಸಿದ ಛಾಯಾಚಿತ್ರ ಮತ್ತು ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳನ್ನು ಪರಿಶೀಲಿಸಿದ್ದೇವೆ.ಕೋಟೆಯ ಸಿಸಿಟಿವಿ ದೃಶ್ಯಾವಳಿಗಳೊಂದಿಗೆ ಆ ಚಿತ್ರಗಳ ಹೋಲಿಕೆಯು ಪೊಲೀಸರು ಆತನ ಮೇಲೆ ಗಮನ ಹರಿಸಲು ಸಹಾಯ ಮಾಡಿತು ಎಂದು ಅವರು ಹೇಳಿದರು.ಲೋನಾವಳ ಗ್ರಾಮೀಣ ಪೊಲೀಸ್ ಠಾಣೆ ಮತ್ತು ಸ್ಥಳೀಯ ಅಪರಾಧ ವಿಭಾಗ ಸಂಗ್ರಹಿಸಿದ ತಾಂತ್ರಿಕ ಪುರಾವೆಗಳು ಮತ್ತು ಗುಪ್ತಚರ ಮಾಹಿತಿಯ ಆಧಾರದ ಮೇಲೆ, ತಂಡಗಳು ಚೌಧರಿಯನ್ನು ಪತ್ತೆಹಚ್ಚಿ ವಿಚಾರಣೆಗಾಗಿ ವಶಕ್ಕೆ ಪಡೆದವು ಎಂದು ಅವರು ತಿಳಿಸಿದರು.

ಬಂಡಾಯ ಸಂಸದ ಸಂಜಯ್ ದಿನ ಪಾಟೀಲ್ ದುರಹಂಕಾರಕ್ಕೆ 'ವೈ ಪ್ಲಸ್' ಭದ್ರತೆ ಕಾರಣ; ಸುಷ್ಮಾ ಅಂಧಾರೆ





ಮುಂಬಯಿ, ಜೂ. 24 - ಶಿವಸೇನೆಗೆ ಸೇರ್ಪಡೆಗೊಂಡ ಬಂಡಾಯ ಸಂಸದ ಸಂಜಯ್ ದಿನ ಪಾಟೀಲ್ ಅವರು ತಮಗೆ ಒದಗಿಸಲಾದ ವೈ ಪ್ಲಸ್ ಭದ್ರತೆಯಿಂದ ಧೈರ್ಯಶಾಲಿಯಾಗಿದ್ದಾರೆ ಎಂದು ಶಿವಸೇನೆ (ಯುಬಿಟಿ) ನಾಯಕಿ ಸುಷ್ಮಾ ಅಂಧಾರೆ ಆರೋಪಿಸಿದ್ದಾರೆ.

ಸಂಜಯ್ ರಾವುತ್ ಮತ್ತು ಈಶಾನ್ಯ ಮುಂಬಯಿ ಸಂಸದರ ನಡುವೆ ಹೆಚ್ಚುತ್ತಿರುವ ವಾಕ್ ಸಮರದ ಮಧ್ಯೆ ಅವರ ಈ ಹೇಳಿಕೆಗಳು ಬಂದಿವೆ.ಸೋಮವಾರ ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಗೆ ಸೇರಿದ ಬಳಿಕ ಪಾಟೀಲ್ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡುತ್ತಾ, ತಮ್ಮ ತಂದೆ ದಿನ ಪಾಟೀಲ್ (ಮಾಜಿ ಕಾಂಗ್ರೆಸ್ ಶಾಸಕ) ಮೇಲೆ ದಾಳಿ ನಡೆದಾಗ, ನಾವು ಐದು ಜನರನ್ನು ಕೊಂದಿದ್ದಾಗಿ ಹೇಳಿದ್ದರು. 'ಆಪರೇಷನ್ ತುಡ್ಡಾ' ಮೂಲಕ ಭಿನ್ನಮತೀಯ ಸಂಸದರನ್ನು ಥಳಿಸುವಂತೆ ಶಿವಸೈನಿಕರಿಗೆ ಸಂಜಯ್ ರಾವುತ್ ಮಾಡಿದ ಮನವಿಗೆ ಅವರು ಈ ಪ್ರತಿಕ್ರಿಯೆ ನೀಡಿದ್ದರು. ಅದಾದ ಬಳಿಕ ರಾವುತ್ ಪಾಟೀಲ್ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದಿಸಿದಾಗ ಈ ವಾಗ್ವಾದ ಅಸಹ್ಯಕರವಾಯಿತು.

'ನೀವು (ಪಾಟೀಲ್) ಪಕ್ಷ (ಸೇನಾ-ಯುಬಿಟಿ) ದೊಂದಿಗೆ ಇದ್ದೀರಿ ಮತ್ತು ಜೂ.18 ರಂದು ದಿಲ್ಲಿಯಲ್ಲಿ ಕರೆಯಲಾದ ಪಕ್ಷದ ಸಭೆಯಲ್ಲಿ ಭಾಗವಹಿಸುತ್ತೀರಿ ಎಂದು ಹೇಳಿದ್ದೀರಿ. ನೀವು ಪೊಲೀಸ್ ರಕ್ಷಣೆಗಾಗಿ ಕಾಯುತ್ತಿದ್ದೀರಿ. ವೈ ಪ್ಲಸ್ ಭದ್ರತೆಯನ್ನು ಪಡೆದ ಬಳಿಕ ನೀವು ದುರಹಂಕಾರಿಗಳಾಗುತ್ತೀರಿ' ಎಂದು ಅಂಧಾರೆ ಅವರು ಪಾಟೀಲ್ ಅವರನ್ನು ಉಲ್ಲೇಖಿಸಿ ಹೇಳಿದರು. ಪಾಟೀಲ್ ಅವರು 'ನನ್ನನ್ನು ಕೆಟ್ಟ ದೃಷ್ಟಿಕೋನದಿಂದ ನೋಡುವವರಿಗೆ ಬಂದೂಕು ಮೂಲಕ ಉತ್ತರಿಸುವುದಾಗಿ ಹೇಳಿದ್ದಾರೆ.ಅವರ ಸಾಮರ್ಥ್ಯದ ಬಗ್ಗೆ ಶಿವಸೇನೆ (ಯುಬಿಟಿ)ಗೆ ತಿಳಿದಿದೆ ಎಂದು ಅಂಧಾರೆ ತಿಳಿಸಿದರು. 6 ಭಿನ್ನಮತೀಯ ಲೋಕಸಭಾ ಸಂಸದರು ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಗೆ ಪಕ್ಷಾಂತರಗೊಳ್ಳುವ ಮೊದಲು ಅವರಿಗೆ ವೈ ಪ್ಲಸ್ ಭದ್ರತೆಯನ್ನು ಒದಗಿಸಲಾಗಿತ್ತು.

ತಪ್ಪಾಗಿ ಮರಾಠಿ ಉಚ್ಚಾರಣೆ; ಸ್ಪೀಕರ್ ನಾರ್ವೇಕರ್ ಕ್ಷಮೆಯಾಚನೆ



ಮುಂಬಯಿ,ಜೂ.24 - ಮಹಾರಾಷ್ಟ್ರ ವಿಧಾನಸಭಾ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ಮುಂಗಾರು ಅಧಿವೇಶನದ ಮೊದಲ ದಿನದಂದು ಸದನದಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಓದುವಾಗ ಕೆಲವು ಪದಗಳನ್ನು ತಪ್ಪಾಗಿ ಉಚ್ಚರಿಸಿದ್ದಕ್ಕಾಗಿ ವಿಷಾದ ವ್ಯಕ್ತಪಡಿಸಿದ್ದಾರೆ.

ತಾಂತ್ರಿಕ ಸಮಸ್ಯೆಗಳು ಮತ್ತು ಭಾಷಣದ ಅಸ್ಪಷ್ಟ ಮುದ್ರಿತ ಪ್ರತಿಯಿಂದಾಗಿ ಆಕಸ್ಮಿಕ ದೋಷ ಉಂಟಾಗಿದೆ ಮತ್ತು ಯಾರ ಭಾವನೆಗಳಿಗೂ ನೋವುಂಟು ಮಾಡುವ ಉದ್ದೇಶ ನನಗಿರಲಿಲ್ಲ ಎಂದು ನಾರ್ವೇಕರ್ ಹೇಳಿದರು.

ಸೋಮವಾರ ಸಂತಾಪ ಸೂಚಕ ನಿರ್ಣಯವನ್ನು ಓದುವಾಗ ಕೆಲವು ತಾಂತ್ರಿಕ ದೋಷಗಳು ನನ್ನನ್ನು ಕೆಲವು ಪದಗಳನ್ನು ತಪ್ಪಾಗಿ ಉಚ್ಚರಿಸುವಂತೆ ಮಾಡಿತು. ನನಗೆ ಲಭ್ಯವಿರುವ ಭಾಷಣದ ಮುದ್ರಿತ ಪ್ರತಿ ಸ್ಪಷ್ಟವಾಗಿಲ್ಲ.ಅದು ಉದ್ದೇಶಪೂರ್ವಕವಲ್ಲ ಎಂದು ಅವರು ತಿಳಿಸಿದರು.ಘಟನೆಯಿಂದ ಯಾರಿಗಾದರೂ ನೋವಾಗಿದ್ದರೆ ಅದಕ್ಕಾಗಿ ವಿಷಾದಿಸುತ್ತೇನೆ ಎಂದು ಸ್ಪೀಕರ್ ಹೇಳಿದರು.

'ಇದರಿಂದ ಯಾರ ಭಾವನೆಗಳಿಗೂ ನೋವಾಗಿದ್ದರೆ, ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಯಾರ ಭಾವನೆಗಳಿಗೂ ನೋವುಂಟು ಮಾಡುವ ಉದ್ದೇಶ ನನಗಿರಲಿಲ್ಲ' ಎಂದು ನಾರ್ವೇಕರ್ ತಿಳಿಸಿದರು. ಮರಾಠಿ ಭಾಷೆಯ ಬಗ್ಗೆ ತಮಗೆ ಅಷ್ಟೇ ಹೆಮ್ಮೆಯಿದೆ.ತಾವು ಈ ಹಿಂದೆ ಮರಾಠಿಯಲ್ಲಿ ಹಲವಾರು ಭಾಷಣಗಳನ್ನು ಮಾಡಿರುವುದಾಗಿಯೂ, ಸದಸ್ಯರು ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆಯೂ ಅವರು ಒತ್ತಾಯಿಸಿದರು. ವಿಧಾನಸಭೆಯಲ್ಲಿ ಪ್ರಸಿದ್ಧ ಹಿನ್ನೆಲೆ ಗಾಯಕಿಯರಾದ ಆಶಾ ಭೋಸ್ಲೆ ಹಾಗೂ ಸುಮನ್ ಕಲ್ಯಾಣ್‌ಪುರ್ ಮತ್ತು ಮಾಜಿ ಶಾಸಕರ ಸಂತಾಪ ಸೂಚಕ ನಿರ್ಣಯಗಳನ್ನು ಓದುವಾಗ ಕೆಲವು ಮರಾಠಿ ಪದಗಳನ್ನು ತಪ್ಪಾಗಿ ಉಚ್ಚರಿಸಿದ್ದಕ್ಕಾಗಿ ಟೀಕೆಗಳು ಕೇಳಿಬಂದ ಬಳಿಕ ನಾರ್ವೇಕರ್ ಅವರ ಈ ಸ್ಪಷ್ಟೀಕರಣ ಬಂದಿದೆ.

ಮಹಾರಾಷ್ಟ್ರ ನವನಿರ್ಮಾಣ ಸೇನೆ ಅಧ್ಯಕ್ಷ ರಾಜ್‌ಠಾಕ್ರೆ ಅವರು, ಸದನದಲ್ಲಿ ಗಾಯಕಿ ಆಶಾ ಭೋಸ್ಲೆಗೆ ಸಂತಾಪ ಸೂಚಿಸುವ ನಿರ್ಣಯವನ್ನು ಓದುವಾಗ ನಾರ್ವೇಕರ್ ಅವರು ಮರಾಠಿಯನ್ನು ಕೊಲೆ ಮಾಡಿರುವುದಾಗಿ ಟೀಕಿಸಿದ್ದರು. ನಾರ್ವೇಕರ್ ಅವರು ಆಶಾ ಭೋಸ್ಲೆ ಅವರ ತಂದೆ ಪ್ರಸಿದ್ಧ ಗಾಯಕ-ನಟ ದೀನನಾಥ್ ಮಂಗೇಶ್ಕರ್ ಅವರನ್ನು 'ದೀನದಯಾಳ್ ಮಂಗೇಶ್ಕರ್' ಎಂದು ಉಲ್ಲೇಖಿಸಿದರು, ಆದರೆ ಸದನದಲ್ಲಿ ಹಾಜರಿದ್ದ ಒಬ್ಬ ಶಾಸಕರೂ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಲಿಲ್ಲ ಎಂದು ಮನಸೇ ಮುಖ್ಯಸ್ಥರು ಹೇಳಿದರು.


ಇದು ಮರಾಠಿ ಭಾಷೆಗೆ ಸಂತಾಪ ಸೂಚಿಸುವ ನಿರ್ಣಯ, ಆಶಾ ಭೋಸ್ಲೆ ಅವರಿಗೆ ಅಲ್ಲ.ಅವರ ಮರಾಠಿಯನ್ನು ಯಾರೂ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ಕಟುವಾಗಿ ತಿಳಿಸಿದರು.

ಸಾಮಾನ್ಯ ವಿದ್ಯುತ್ ಗ್ರಾಹಕರ ಅನುಕೂಲಕ್ಕಾಗಿ ಗ್ರಿಡ್ ಬೆಂಬಲ ಶುಲ್ಕ ; ಮುಖ್ಯಮಂತ್ರಿ ಫಡ್ನವೀಸ್

ಮುಂಬಯಿ,ಜೂ.24 - ಹೆಚ್ಚುತ್ತಿರುವ ಸೌರಶಕ್ತಿಯ ಬಳಕೆಯು ವಿದ್ಯುತ್ ಗ್ರಿಡ್ ಮೇಲೆ ಹೆಚ್ಚುವರಿ ಒತ್ತಡವನ್ನುಂಟು ಮಾಡುತ್ತಿದೆ. ಈ ಒತ್ತಡದಿಂದ ಉಂಟಾಗುವ ವೆಚ್ಚವು ಸಾಮಾನ್ಯ ಗ್ರಾಹಕರ ಮೇಲೆ ಬೀಳದಂತೆ ನೋಡಿಕೊಳ್ಳಲು, 'ಗ್ರಿಡ್ ಬೆಂಬಲ ಶುಲ್ಕ' ವಿಧಿಸಲಾಗಿದೆ. ಈ ಶುಲ್ಕವು ಕೇವಲ 0.13 ಪ್ರತಿಶತ ಗ್ರಾಹಕರಿಗೆ ಮಾತ್ರ ಅನ್ವಯಿಸುತ್ತದೆ. ಇದು ನಷ್ಟವಲ್ಲ ಆದರೆ ಕೆಲವು ಗ್ರಾಹಕರ ಹೆಚ್ಚುವರಿ ಲಾಭದಲ್ಲಿ ಸೀಮಿತ ಕಡಿತವಾಗಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ವಿಧಾನ ಪರಿಷತ್ತಿನಲ್ಲಿ ಮಾಹಿತಿ ನೀಡಿದರು. ವಿಧಾನ ಪರಿಷತ್ ಸದಸ್ಯ ಸತೇಜ್ ಪಾಟೀಲ್ ರಾಜ್ಯದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಗ್ರಾಹಕರಿಗೆ ವಿದ್ಯುತ್ ಮಾರಾಟ ತೆರಿಗೆ ಹೆಚ್ಚಳದ ಬಗ್ಗೆ ಪ್ರಶ್ನೆಯನ್ನು ಎತ್ತಿದರು. ಈ ಸಮಯದಲ್ಲಿ, ಸದಸ್ಯರಾದ ಭಾಯಿ ಜಗ್ತಾಪ್, ಏಕನಾಥ್ ಖಿಡ್ಸೆ, ಡಾ. ನೀಲಂ ಗೋರ್ಹೆ ಉಪ-ಪ್ರಶ್ನೆಗಳನ್ನು ಕೇಳುವ ಮೂಲಕ ಚರ್ಚೆಯಲ್ಲಿ ಭಾಗವಹಿಸಿದರು.

ಗ್ರಿಡ್ ಬೆಂಬಲ ಶುಲ್ಕವನ್ನು 2016ರ ಫೆ.1ರಿಂದ ಜಾರಿಗೆ ತರಲಾಗಿದೆ ಮತ್ತು ಅದನ್ನು ಪೂರ್ವಾನ್ವಯವಾಗಿ ಜಾರಿಗೆ ತಂದಿಲ್ಲ ಎಂದು ಮುಖ್ಯಮಂತ್ರಿ ಹೇಳಿದರು. ಮಹಾರಾಷ್ಟ್ರ ವಿದ್ಯುತ್ ನಿಯಂತ್ರಣ ಆಯೋಗ ಕೆಲವು ಲೆಕ್ಕಾಚಾರಗಳಲ್ಲಿ 40,000 ಕೋಟಿ ರೂ.ಗಳ ನಿಬಂಧನೆಯನ್ನು ದ್ವಿಗುಣಗೊಳಿಸಲಾಗಿದೆ ಎಂದು ಸರಕಾರಕ್ಕೆ ಸೂಚಿಸಿದ ಬಳಿಕ ಆಯೋಗವು ಅದನ್ನು ಮುಂದೂಡಿ ವಿಚಾರಣೆಯನ್ನು ಪುನರಾರಂಭಿಸಿದೆ.

ರಾಜ್ಯದ ಎಲ್ಲಾ ಫೀಡರ್‌ಗಳಲ್ಲಿ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸುವ ಕೆಲಸ ಪೂರ್ಣಗೊಂಡಿದೆ ಮತ್ತು ವಿದ್ಯುತ್ ಬಳಕೆಯ ದತ್ತಾಂಶದಲ್ಲಿ ಯಾವುದೇ ಅಂದಾಜು ಹಸ್ತಕ್ಷೇಪವಿಲ್ಲ. ಮಹಾರಾಷ್ಟ್ರದಲ್ಲಿ ಕೈಗಾರಿಕಾ ವಿದ್ಯುತ್ ದರಗಳು ಅನೇಕ ರಾಜ್ಯಗಳಿಗಿಂತ ಕಡಿಮೆಯಾಗಿದೆ. 2025-26ರಲ್ಲಿ ಮಹಾರಾಷ್ಟ್ರದಲ್ಲಿ ದರವು ಪ್ರತಿ ಯೂನಿಟ್‌ಗೆ 8.19 ರೂ.ಗಳಾಗಿದ್ದು, ಇದು ತಮಿಳುನಾಡು, ತೆಲಂಗಾಣ ಮತ್ತು ಮಧ್ಯಪ್ರದೇಶಕ್ಕಿಂತ ಕಡಿಮೆಯಾಗಿದೆ. ಬಹು-ವರ್ಷದ ಸುಂಕದ ಅಡಿಯಲ್ಲಿ, 2029-30 ರವರೆಗೆ ದರಗಳನ್ನು ನಿಗದಿಪಡಿಸಲಾಗಿದೆ ಮತ್ತು ಆ ಅವಧಿಯಲ್ಲಿ, ಮಹಾರಾಷ್ಟ್ರದಲ್ಲಿ ವಿದ್ಯುತ್ ದರಗಳು ದೇಶದಲ್ಲಿ ಅತ್ಯಂತ ಸ್ಪರ್ಧಾತ್ಮಕವಾಗಿ ಉಳಿಯುತ್ತವೆ ಎಂದು ಅವರು ಹೇಳಿದರು. ರಾಜ್ಯದಲ್ಲಿನ ಕೈಗಾರಿಕಾ ಬೆಳವಣಿಗೆಯನ್ನು ಉಲ್ಲೇಖಿಸಿದ ಮುಖ್ಯಮಂತ್ರಿ ಫಡ್ನವೀಸ್, ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಶೇ.20 ರಷ್ಟು ಹೆಚ್ಚಾಗಿದೆ. ಮಹಾರಾಷ್ಟ್ರದಲ್ಲಿ ವಿದ್ಯುತ್ ದರಗಳು ನಿಜವಾಗಿಯೂ ಹೆಚ್ಚಿದ್ದರೆ, ಉದ್ಯಮವು ಇತರ ರಾಜ್ಯಗಳಿಗೆ ಸ್ಥಳಾಂತರಗೊಳ್ಳುತ್ತಿತ್ತು. ಆದಾಗ್ಯೂ, ವಾಸ್ತವದಲ್ಲಿ, ಕೈಗಾರಿಕೆಗಳು ಮಹಾರಾಷ್ಟ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿವೆ ಎಂದರು



ಕರ್ನಾಟಕ ಸರಕಾರದ ಅಧೀನದಲ್ಲಿರುವ ಏಕೈಕ ಜಾಹೀರಾತು ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ವತಿಯಿಂದ 'ಸಂಪತ್ತಿ - ದ ಮಂತ್ರ ಫಾರ್ ಅಬಂಡನ್ಸ್' ಎಂಬ ಸಮಗ್ರ ವ್ಯವಹಾರ ಪರಿಸರದ ಪೈಲಟ್ ಕಾರ್ಯಕ್ರಮದ ಉದ್ಘಾಟನೆ ಇಂದು ಬೆಂಗಳೂರಿನ ತಾಜ್ ವೆಸ್ಟ್ ಎಂಡ್‌ನ ಐಐಎಂಬಿಎ ಬೆಂಗಳೂರು ಅಲ್ಯೂಮ್ನಿ ಕ್ಲಬ್‌ನಲ್ಲಿ ನಡೆಯಿತು. ಈ ಸಂದರ್ಭದಲ್ಲಿ (ಎಡದಿಂದ ಬಲಕ್ಕೆ) ಸತೀಶ್ ಕೃಷ್ಣ ಸೈಲ್ (ಕೆಎಸ್‌ಎಂಸಿಎ ಅಧ್ಯಕ್ಷರು ಹಾಗೂ ಕಾರವಾರ ಕ್ಷೇತ್ರದ ಶಾಸಕರು) ಸಂಪತ್ತಿಯ ಮುಖ್ಯ ಸಲಹೆಗಾರರಾದ ಎಂ.ಕೆ.ಎಚ್.ಎಚ್. ಜಿಲಾನಿ, ಫೆಮಿನಾ ಮಿಸ್ ಇಂಡಿಯಾ 2026 ಕುಮಾರಿ ಸಾಧ್ವಿ ಸೈಲ್, ಬ್ರಿಕ್ಸ್ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷರಾದ ಸಮೀಪ್ ಶಾಸ್ತ್ರಿ, ಕೆಎಸ್‌ಎಂಸಿಎ ವ್ಯವಸ್ಥಾಪಕ ನಿರ್ದೇಶಕರಾದ ಬಿ. ಆನಂದ್, ಪೇಯು ಸಂಸ್ಥೆಯ ನಿರ್ದೇಶಕರಾದ ಪ್ರೀತಂ ಪ್ರಜಾಪತಿ ಈ ಸಂದರ್ಭ ಹಾಜರಿದ್ದರು.

ಮುಕುಂದ್ ರಿಯಾಲ್ಟಿಯ ಕೇದಾರ್‌ಹೈ ಲಿವಿಂಗ್ ಲಕ್ಸುರಿ ಹೋಮ್ಸ್ ಉದ್ಘಾಟನೆ



ಮಂಗಳೂರು, ಜೂ.24 - ನಗರದ ದೇರೆಬೈಲ್‌ನ ವಿಮಾನ ನಿಲ್ದಾಣ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಮುಕುಂದ್ ರಿಯಾಲ್ಟಿಯ ಪ್ರತಿಷ್ಠಿತ ವಸತಿ ಯೋಜನೆ ಕೇದಾರ್‌ಹೈ ಲಿವಿಂಗ್ ಲಕ್ಸುರಿ ಹೋಮ್ಸ್ ಮಾಜಿ ಮೇಯರ್ ಶಶಿಧರ್‌ಹೆಗ್ಡೆ ಹಾಗೂ ಭೂ ಮಾಲೀಕರಾದ ಎಲಿಯಾಸ್ ಸ್ಯಾಂಕ್ಟಿಸ್ ಅವರು ಗುರುವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಕುಂದ್ ರಿಯಾಲ್ಟಿಯ ವ್ಯವಸ್ಥಾಪಕ ಪಾಲುದಾರ ಗುರುದತ್ತ ಶೆಣೈ, ಗುಣಮಟ್ಟ, ಆರಾಮದಾಯಕತೆ ಹಾಗೂ ದೀರ್ಘಕಾಲೀನ ಮೌಲ್ಯವನ್ನು ಒದಗಿಸುವ ಬದ್ಧತೆಯೊಂದಿಗೆ ಯೋಜನೆ ನಿರ್ಮಿಸಲಾಗಿದೆ. ಯೋಜನೆ ಯಶಸ್ವಿಯಾಗಿಪೂರ್ಣಗೊಳ್ಳಲು ಸಹಕರಿಸಿದ ಮನೆ ಖರೀದಿದಾರರು, ಸಲಹೆಗಾರರು, ಗುತ್ತಿಗೆದಾರರು ಹಾಗೂ ಪಾಲುದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಚೇತನ್ ನಾಯಕ್ ಆ್ಯಂಡ್ ಅಸೋಸಿಯೇಟ್ಸ್ ಸಂಸ್ಥಾಪಕ ಚೇತನ್ ನಾಯಕ್, ಮುಖ್ಯ ವಾಸ್ತುಶಿಲ್ಪಿ ಸುರೇಶ್ ಪೈ, ಮುಕುಂದ್ ರಿಯಾಲ್ಟಿಯ ವ್ಯವಸ್ಥಾಪಕ ಪಾಲುದಾರರಾದ ಮಹೇಶ್ ಶೆಟ್ಟಿ, ಮಂಗಲ್‌ದೀಪ್ ಎ.ಆರ್. ಮೊದಲಾದವರು ಉಪಸ್ಥಿತರಿದ್ದರು.

ಗೃಹ ಮಾಲಿಕರು, ಗಣ್ಯರು, ಸಲಹೆಗಾರರು, ಗುತ್ತಿಗೆದಾರರು, ಚಾನೆಲ್ ಪಾಲುದಾರರು ಹಾಗೂ ಆಹ್ವಾನಿತ ಅತಿಥಿಗಳು ಭಾಗವಹಿಸಿದ್ದರು. ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಈ ಯೋಜನೆ ಐಷಾರಾಮಿ ಜೀವನಶೈಲಿ, ಉತ್ತಮ ಸಂಪರ್ಕ ವ್ಯವಸ್ಥೆ ಹಾಗೂ ಆಧುನಿಕ ಸೌಲಭ್ಯಗಳ

ಸಮನ್ವಯದೊಂದಿಗೆ ವಿನ್ಯಾಸಗೊಳಿಸಲಾಗಿದೆ. ಯೋಜನೆಯಲ್ಲಿ ಪ್ರೀಮಿಯಂ ಅಪಾರ್ಟ್‌ಮೆಂಟ್‌ಗಳ ಜೊತೆಗೆ ಸೀಮಿತ ಸಂಖ್ಯೆಯ ಡುಪ್ಲೆಕ್ಸ್‌ಮನೆಗಳೂ ಸೇರಿವೆ.

ಯೋಜನೆಯ ಪ್ರಮುಖ ಆಕರ್ಷಣೆಯಾಗಿ ರೂಫ್‌ಟಾಪ್ ಇನ್ಫಿನಿಟಿ ಸ್ವಿಮ್ಮಿಂಗ್ ಪೂಲ್ ನಿರ್ಮಾಣಗೊಂಡಿದ್ದು, ಇಲ್ಲಿಂದ ನಗರದ ಸ್ಕೈಲೈನ್,ಹಸಿರು ಪರಿಸರ ಹಾಗೂ ಸಮುದ್ರ ತೀರದ ಮನೋಹರ ನೋಟವನ್ನು ವೀಕ್ಷಿಸಬಹುದಾಗಿದೆ.

ಅಲ್ಲದೆ ಮಕ್ಕಳ ಆಟದ ಮೈದಾನ, ಓಪನ್ ಜಿಮ್ನಾಷಿಯಂ, ಬ್ಯಾಡ್ಮಿಂಟನ್ ಕೋರ್ಟ್, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಸೌಲಭ್ಯಗಳು, ಗ್ರಂಥಾಲಯ, ಕಾರ್ಡಿಯೋ ವಲಯ, ಬಹುಉದ್ದೇಶ ಸಭಾಂಗಣ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗಿದೆ.ಗ್ರಾಹಕರು ಕೇದಾರ್‌ಹೈ ಲಿವಿಂಗ್ ಲಕ್ಸುರಿ ಹೋಮ್ಸ್ ಹೆಚ್ಚಿನ ಮಾಹಿತಿಗಾಗಿ ನಗರದಕಾಪಿಕಾಡ್‌ನಲ್ಲಿರುವ ಮುಕುಂದ್ ರಿಯಾಲ್ಟಿಯ ಆಫೀಸ್ ಅನ್ನು ಸಂಪರ್ಕಿಸಬಹುದು.

ಶಿವಸೇನಾ (ಯುಬಿಟಿ) ಸಂಸದರಿಂದ ಲೋಕಸಭಾ ಸ್ಪೀಕರ್ ಬಿರ್ಲಾ ಭೇಟಿ; ಬಂಡುಕೋರರ ಬೇಡಿಕೆಯ ಪ್ರತಿ ಕೋರಿಕೆ



ಹೊಸದಿಲ್ಲಿ, ಜೂ.24 - ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ(ಯುಬಿಟಿ) ಬುಧವಾರ ಲೋಕಸಭಾ ಸ್ಪೀಕರ್‌ಓಂ ಬಿರ್ಲಾ ಅವರನ್ನು ಭೇಟಿಯಾಗಿ ಏಕನಾಥ್ ಶಿಂದೆ ನೇತೃತ್ವದ ಪಕ್ಷಕ್ಕೆ ಸೇರ್ಪಡೆಗೊಂಡಿರುವ ಪಕ್ಷದ 6 ಬಂಡಾಯ ಸಂಸದರು ಸಲ್ಲಿಸಿದ ಬೇಡಿಕೆಗಳ ಪ್ರತಿಗಳನ್ನು ಹಂಚಿಕೊಳ್ಳುವಂತೆ ಒತ್ತಾಯಿಸಿತು.

ಬಿರ್ಲಾ ಅವರನ್ನು ಭೇಟಿಯಾದ ಬಳಿಕ ಶಿವಸೇನಾ (ಯುಬಿಟಿ) ಸಂಸದರಾದ ಅನಿಲ್ ದೇಸಾಯಿ ಮತ್ತು ಅರವಿಂದ್ ಸಾವಂತ್ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ,'ಸಂವಿಧಾನದ ನಿಬಂಧನೆಗಳನ್ನು ಎತ್ತಿಹಿಡಿಯುವಂತೆ'ಸ್ಪೀಕರ್ ಅವರನ್ನು ವಿನಂತಿಸಿದ್ದೇವೆ ಮತ್ತು ಬಂಡುಕೋರರು ಸಲ್ಲಿಸಿದ ಬೇಡಿಕೆಗಳ ಪ್ರತಿಗಾಗಿ ಕೋರಿದ್ದೇವೆ' ಎಂದರು.

'ಬಂಡುಕೋರರಿಂದ ತಮಗೆ ಯಾವುದೇ ಮನವಿ ಬಂದಿದೆಯೇ ಎಂದು ನಾವು ಅವರನ್ನು ಕೇಳಿದ್ದೇವೆ...' ಎಂದು ಸಾವಂತ್ ಹೇಳಿದರಲ್ಲದೆ ಬಂಡುಕೋರ ಸಂಸದರಿಂದ ಲಿಖಿತವಾಗಿ ಏನೂ ಬಂದಿಲ್ಲ ಎಂದು ಸ್ಪೀಕರ್ ಹೇಳಿದ್ದಾಗಿ ವಿವರಿಸಿದರು.

'ಮೂರನೇ ಎರಡರಷ್ಟು ಬಹುಮತ ಹೊಂದಿದ್ದರೂ ಕೂಡ ಶಾಸಕಾಂಗ ಪಕ್ಷದ ಯಾವುದೇ ಗುಂಪು ಸ್ವಂತವಾಗಿ ಬೇರೆ ಪಕ್ಷದೊಂದಿಗೆ ವಿಲೀನಗೊಳ್ಳಲು ಸಾಧ್ಯವಿಲ್ಲ' ಎಂದು ಹತ್ತನೇ ಪರಿಚ್ಛೇದ ಸ್ಪಷ್ಟವಾಗಿದೆ ಎಂದು ಸ್ಪೀಕರ್ ಮುಂದೆ ಒತ್ತಿ ಹೇಳಿರುವುದಾಗಿ ದೇಸಾಯಿ ಹೇಳಿದರು. ಬಂಡಾಯ ಸಂಸದರು ಲಿಖಿತವಾಗಿ ಏನನ್ನಾದರೂ ಸಲ್ಲಿಸಿದ್ದರೆ, ಸ್ಪೀಕರ್ ತಮ್ಮ ಕಚೇರಿಯೊಂದಿಗೆ ವಿವರಗಳನ್ನು ಪರಿಶೀಲಿಸಿದ ಬಳಿಕ ಅವುಗಳನ್ನು ನವೀಕರಿಸುತ್ತಾರೆ ಎಂದು ಅವರು ತಿಳಿಸಿದರು.

ಶಿವಸೇನೆ (ಯುಬಿಟಿ)ಯ 9 ಲೋಕಸಭಾ ಸಂಸದರಲ್ಲಿ, 6 ಮಂದಿ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಶಿಂದೆ ನೇತೃತ್ವದ ಶಿವಸೇನೆಗೆ ಸೇರ್ಪಡೆಗೊಂಡರು. ಸಾವಂತ್, ದೇಸಾಯಿ ಮತ್ತು ರಾಜಭಾವು ವಾಜೆ ಶಿವಸೇನೆ (ಯುಬಿಟಿ)ಯಲ್ಲೇ ಉಳಿದಿದ್ದಾರೆ.

ಬಾಳಠಾಕ್ರೆ ಜನ್ಮ ಶತಮಾನೋತ್ಸವಕ್ಕೆ ಮರಾಠಿ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ; ಸಚಿವ ಉದಯ್ ಸಾಮಂತ್



ಮುಂಬಯಿ, ಜೂ.24 - ಶಿವಸೇನಾ ಸಂಸ್ಥಾಪಕ ಬಾಳಠಾಕ್ರೆ ಅವರ ಜನ್ಮ ಶತಮಾನೋತ್ಸವ ವರ್ಷವನ್ನು ಗುರುತಿಸಲು ಚಂದ್ರಾಪುರದಲ್ಲಿ ಅವರ ಹೆಸರಿನ ಸೌಲಭ್ಯ ಸೇರಿದಂತೆ ಮರಾಠಿ ಭಾಷಾ ಅಭಿವೃದ್ಧಿ ಕೇಂದ್ರಗಳನ್ನು ಮಹಾರಾಷ್ಟ್ರ ಸರಕಾರ ಸ್ಥಾಪಿಸಲಿದೆ ಎಂದು ಸಚಿವ ಉದಯ್ ಸಾಮಂತ್ ಬುಧವಾರ ವಿಧಾನಸಭೆಗೆ ತಿಳಿಸಿದರು.

ಮರಾಠಿ ಭಾಷಾ ಇಲಾಖೆಯ ಕಾರ್ಯವೈಖರಿಯ ಕುರಿತು ಬಿಜೆಪಿ ಶಾಸಕ ಸುಧೀರ್ ಮುಂಗಂಟಿವಾರ್ ಅವರು ಆರಂಭಿಸಿದ ಚರ್ಚೆಗೆ ಉತ್ತರಿಸಿದ ಸಾಮಂತ್ ಅವರು, ಮುಂದಿನ ವರ್ಷದೊಳಗೆ ಚಂದ್ರಾಪುರದಲ್ಲಿ ಸಂಪೂರ್ಣ ಸುಸಜ್ಜಿತ ಬಾಳಸಾಹೇಬ್ ಠಾಕ್ರೆ ಮರಾಠಿ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ಹೇಳಿದರು.

'ಈ ವರ್ಷವನ್ನು ಹಿಂದೂಹೃದಯಸಾಮ್ರಾಟ್ ಬಾಳಸಾಹೇಬ್ ಠಾಕ್ರೆ ಅವರ ಜನ್ಮ ಶತಮಾನೋತ್ಸವ ವರ್ಷವಾಗಿ ಆಚರಿಸಲಾಗುತ್ತಿದೆ. ಆದ್ದರಿಂದ, ಮುಂದಿನ ವರ್ಷದೊಳಗೆ ಚಂದ್ರಾಪುರ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ನಾವು ಆಧುನಿಕ ಮರಾಠಿ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸುತ್ತೇವೆ' ಎಂದು ಸಚಿವರು ತಿಳಿಸಿದರು.

ಮರಾಠಿಯನ್ನು ಶಾಸ್ತ್ರೀಯ ಭಾಷೆಯಾಗಿ ಗುರುತಿಸಿದ ಬಳಿಕ ಸರಕಾರವು ಮೊದಲ ಹಂತದಲ್ಲಿ ಪುಣೆ, ನಾಸಿಕ್, ರತ್ನಗಿರಿ, ಛತ್ರಪತಿ ಸಂಭಾಜಿನಗರ, ಅಮರಾವತಿ, ನಾಗ್ಪುರ, ಚಂದ್ರಾಪುರ ಮತ್ತು ಕೊಲ್ಹಾಪುರದಲ್ಲಿ ಮರಾಠಿ ಭಾಷಾ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿದೆ ಎಂದು ಸಾಮಂತ್ ಘೋಷಿಸಿದರು.

ಮರಾಠಿಗಾಗಿ ಜಾಗತಿಕ ಕೇಂದ್ರವನ್ನು ಅಭಿವೃದ್ಧಿಪಡಿಸಲು ಮತ್ತು ಮರಾಠಿ ಮಾತನಾಡುವ ಸಮುದಾಯಗಳೊಂದಿಗೆ ಸಂಬಂಧವನ್ನು ಬಲಪಡಿಸಲು ಸರಕಾರ ಲಂಡನ್‌ನಲ್ಲಿ ನಿರ್ಧಾರ ತೆಗೆದುಕೊಂಡಿದೆ ಎಂದು ಸಚಿವರು ಹೇಳಿದರು.

ಜಗತ್ತಿನಾದ್ಯಂತ ಮರಾಠಿ ಮಾತನಾಡುವವರಿಗೆ ಸಾಮಾನ್ಯ ವೇದಿಕೆಯ ಅಗತ್ಯವಿದೆ. ಆದ್ದರಿಂದ, ಮರಾಠಿ ಭಾಷಾ ಚಟುವಟಿಕೆಗಳನ್ನು ಈಗ ಲಂಡನ್‌ನಿಂದ ಸಂಯೋಜಿಸಲಾಗುವುದು ಎಂದು ಅವರು ತಿಳಿಸಿದರು.ಮರಾಠಿ ಭಾಷೆಯ ಪ್ರಚಾರ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಸಮಿತಿಗಳನ್ನು ಮುಂದಿನ ಮೂರು ತಿಂಗಳೊಳಗೆ ರಚಿಸಲಾಗುವುದು ಎಂದು ಸಾಮಂತ್ ಹೇಳಿದರು.

ಸರಕಾರವು ಯಶವಂತರಾವ್ ಚವಾಣ್ ಅನುವಾದ ಸಮಿತಿಯನ್ನು ಪುನರುಜ್ಜೀವನಗೊಳಿಸಿದೆ ಮತ್ತು ಪ್ರಮುಖ ಸಾಹಿತ್ಯವನ್ನು ಮರಾಠಿಗೆ ಅನುವಾದಿಸಲು ಅನುಕೂಲವಾಗುವಂತೆ ಆರ್ಥಿಕ ನೆರವು ನೀಡಿದೆ ಎಂದು ಅವರು ವಿವರಿಸಿದರು.

ರಾಜ್ಯದ ಜಾಗತಿಕ ಸಂಪರ್ಕ ಯೋಜನೆಗಳನ್ನು ಎತ್ತಿ ತೋರಿಸಿದ ಸಚಿವರು, 'ನಮೋ ಸಂವಾದ' ಉಪಕ್ರಮದಡಿಯಲ್ಲಿ ಅಂತಾರಾಷ್ಟ್ರೀಯ ಮರಾಠಿ ವೇದಿಕೆಗಳ ಸಂಖ್ಯೆಯನ್ನು 39 ರಿಂದ 75 ಕ್ಕೆ ಹೆಚ್ಚಿಸಲು ಮತ್ತು ಒಂದು ವರ್ಷದೊಳಗೆ ವಿಶ್ವಾದ್ಯಂತ 75 ಮಾತೃಭಾಷಾ ವೇದಿಕೆಗಳನ್ನು ರಚಿಸಲು ಸರಕಾರ ಉದ್ದೇಶಿಸಿದೆ ಎಂದು ಸಾಮಂತ್ ಹೇಳಿದರು.ಇಲಾಖೆಯಿಂದ ಮರಾಠಿ ಕಲಿಕೆಗೆ ಮೊಬೈಲ್ ಅಪ್ಲಿಕೇಶನ್‌ನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದು ಅವರು ತಿಳಿಸಿದರು.

ವಿಶ್ವ ಮರಾಠಿ ಸಮ್ಮೇಳನ, ಸಂತ-ವಾರ್ಕರಿ ಸಾಹಿತ್ಯ ಸಮ್ಮೇಳನ, ಮಹಿಳಾ ಸಾಹಿತ್ಯ ಸಮ್ಮೇಳನ ಮತ್ತು ಯುವ ಸಾಹಿತ್ಯ ಸಮ್ಮೇಳನದಂತಹ ಉಪಕ್ರಮಗಳ ಮೂಲಕ ಸರಕಾರವು ಮರಾಠಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ವಿಸ್ತರಿಸಿದೆ ಎಂದು ಸಚಿವರು ಹೇಳಿದರು.

ಸಾಮಂತ್ ಅವರ ಪ್ರಕಾರ, ಮುಂದಿನ ವಿಶ್ವ ಮರಾಠಿ ಸಮ್ಮೇಳನವನ್ನು ನಾಗ್ಪುರದಲ್ಲಿ ನಡೆಸಲಾಗುವುದು, ಆದರೆ ವಿದೇಶದಲ್ಲಿರುವ ಮರಾಠಿ ಮಾತನಾಡುವ ಸಮುದಾಯಗಳೊಂದಿಗೆ ಸಂಪರ್ಕ ಸಾಧಿಸಲು ವಿದೇಶಗಳಲ್ಲಿ ಮುಂದಿನ ಆವೃತ್ತಿಯನ್ನು ಆಯೋಜಿಸಲಾಗುವುದು ಎಂದರು. ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಪ್ರಸಿದ್ಧ ಕವಿ ಕುಸುಮಾಗ್ರಜ್ ಅವರ ಹೆಸರಿನ ಮರಾಠಿ ಪೀಠವನ್ನು ಸ್ಥಾಪಿಸಲಾಗಿದೆ ಮತ್ತು ಮಹಾರಾಷ್ಟ್ರ ಸರಕಾರದ ಬೆಂಬಲದೊಂದಿಗೆ ಛತ್ರಪತಿ ಶಿವಾಜಿ ಮಹಾರಾಜರ ಗೆರಿಲ್ಲಾ ಯುದ್ಧ ತಂತ್ರಗಳ ಕುರಿತು ಎಂಎ-ಮಟ್ಟದ ಕೋರ್ಸ್‌ನ್ನು ಅಲ್ಲಿ ಪರಿಚಯಿಸಲಾಗಿದೆ ಎಂದು ಸಚಿವರು ಹೇಳಿದರು.

ಮರಾಠಿ ಭಾಷಾ ಭವನ ಯೋಜನೆಯ ನಿರ್ಮಾಣದಲ್ಲಿನ ವಿಳಂಬದ ಬಗ್ಗೆ ಕಳವಳಗಳನ್ನು ವ್ಯಕ್ತಪಡಿಸಿದ ಸಾಮಂತ್, ಅದರ ಸಮುದ್ರ ಮಟ್ಟದ ಸ್ಥಳಕ್ಕೆ ಸಂಬಂಧಿಸಿದ ತಾಂತ್ರಿಕ ಸವಾಲುಗಳಿಂದ ಕೆಲಸವು ಪರಿಣಾಮ ಬೀರಿದೆ ಎಂದು ಹೇಳಿದರು. ಇದಕ್ಕೂ ಮೊದಲು ಮುಂಗಂಟಿವಾರ್ ಅವರು, ಇಂದಿನ ಜಾಗತೀಕರಣಗೊಂಡ ಜಗತ್ತಿನಲ್ಲಿ ಇಂಗ್ಲಿಷ್ ಮುಖ್ಯವಾದರೂ, ಮಹಾರಾಷ್ಟ್ರವು ಈ ಪ್ರಕ್ರಿಯೆಯಲ್ಲಿ ಮರಾಠಿಯನ್ನು ನಿರ್ಲಕ್ಷಿಸಬಾರದು ಎಂದು ನುಡಿದರು. ಇಂಗ್ಲಿಷ್‌ಗೆ ಪ್ರಾಮುಖ್ಯತೆ ನೀಡಬೇಕಾದರೆ ಮಾತೃಭಾಷೆಯನ್ನು ತ್ಯಾಗ ಮಾಡಬೇಕೇ ಎಂದು ಅವರು ಪ್ರಶ್ನಿಸಿದರಲ್ಲದೆ, ಒಂದು ಭಾಷೆಯನ್ನು ಇನ್ನೊಂದಕ್ಕಿಂತ ಹೆಚ್ಚಾಗಿ ಆಯ್ಕೆ ಮಾಡುವ ಅಗತ್ಯವಿಲ್ಲ ಎಂದು ಹೇಳಿದರು.

ಮರಾಠಿಗೆ ಅದ್ಭುತ ಇತಿಹಾಸವಿದೆ ಮತ್ತು ಅತಿಯಾದ ಪರ್ಷಿಯನ್ ಹಾಗೂ ಅರೇಬಿಕ್ ಪ್ರಭಾವದಿಂದ ಆಡಳಿತವನ್ನು ಮುಕ್ತಗೊಳಿಸಲು ಶ್ರಮಿಸಿದ ಛತ್ರಪತಿ ಶಿವಾಜಿ ಮಹಾರಾಜರಿಂದ ಅದು ಬಲಗೊಂಡಿತು ಎಂದು ಅವರು ತಿಳಿಸಿದರು.

ಡಿಜಿಟಲ್ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮರಾಠಿಯನ್ನು ಉತ್ತೇಜಿಸಬೇಕು ಎಂದು ಬಿಜೆಪಿ ನಾಯಕ ಒತ್ತಿ ಹೇಳಿದರಲ್ಲದೆ, ಸಾಫ್ಟ್‌ವೇರ್, ಕಂಪ್ಯೂಟರ್‌ಗಳು,ಎಐ ಪ್ಲಾಟ್‌ಫಾರ್ಮ್‌ಗಳು ಮತ್ತು ಡಿಜಿಟಲ್ ವಿಷಯ ರಚನೆಯಲ್ಲಿ ಭಾಷೆಯ ಹೆಚ್ಚಿನ ಬಳಕೆಯನ್ನು ಖಚಿತಪಡಿಸಿಕೊಳ್ಳುವಂತೆ ಸರಕಾರವನ್ನು ಒತ್ತಾಯಿಸಿದರು.ಸಾರ್ವಜನಿಕ ನಿಧಿಯಿಂದ ಖರೀದಿಸಿದ ಸರಕಾರಿ ಕಂಪ್ಯೂಟರ್‌ಗಳು ಮತ್ತು ಸಾಫ್ಟ್‌ವೇರ್ ಮರಾಠಿ ಭಾಷೆಯ ಬಳಕೆಯನ್ನು ಬೆಂಬಲಿಸಬೇಕು ಎಂದು ಅವರು ತಿಳಿಸಿದರು.

ಮಹಾರಾಷ್ಟ್ರ ಮುಖ್ಯಮಂತ್ರಿಯಿಂದ ಅಮೆಜಾನ್ ಸಿಇಒ ಭೇಟಿ; ಡೇಟಾ ಸೆಂಟರ್, ಆರೋಗ್ಯ ರಕ್ಷಣೆಯಲ್ಲಿ ಹೂಡಿಕೆಗೆ ಆಹ್ವಾನ



ಮುಂಬಯಿ, ಜೂ.24 - ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಬುಧವಾರ ಇಲ್ಲಿ ಅಮೆಜಾನ್ ಸಿಇಒ ಆಂಡಿ ಜಾಸ್ಸಿ ಅವರನ್ನು ಭೇಟಿ ಮಾಡಿದರು. ರಾಜ್ಯದಲ್ಲಿ ಡೇಟಾ ಸೆಂಟರ್‌ಗಳು, ಆರೋಗ್ಯ ರಕ್ಷಣೆ ಮೂಲಸೌಕರ್ಯ ಮತ್ತು ಕೃತಕ ಬುದ್ಧಿಮತ್ತೆ ನೇತೃತ್ವದ ಕೌಶಲ್ಯ ಅಭಿವೃದ್ಧಿಯಲ್ಲಿ ಹೂಡಿಕೆ ಮಾಡಲು ಅವರು ಅಮೆರಿಕನ್ ಟೆಕ್ ದೈತ್ಯವನ್ನು ಆಹ್ವಾನಿಸಿದರು.

ಮಹಾರಾಷ್ಟ್ರ ದೇಶದ ಡೇಟಾ ಸೆಂಟರ್ ರಾಜಧಾನಿಯಾಗಿದೆ. ಡೇಟಾ ಸೆಂಟರ್‌ಗಳ ವಿಸ್ತರಣೆ ಮತ್ತು ಅಭಿವೃದ್ಧಿಗಾಗಿ ನಾವು ಬಲವಾದ ಪರಿಸರ ವ್ಯವಸ್ಥೆಯನ್ನು ರಚಿಸುತ್ತಿದ್ದೇವೆ. ಇದಲ್ಲದೆ, ಆರೋಗ್ಯ ರಕ್ಷಣೆ, ತಂತ್ರಜ್ಞಾನ ಮೂಲಸೌಕರ್ಯ ಮತ್ತು ಎಐ ಆಧಾರಿತ ಕೌಶಲ್ಯ ಅಭಿವೃದ್ಧಿಯಲ್ಲಿ ಗಮನಾರ್ಹ ಅವಕಾಶಗಳಿವೆ. ಅಮೆಜಾನ್ ರಾಜ್ಯದಲ್ಲಿ ಹೂಡಿಕೆ ಮಾಡಬೇಕು ಎಂದು ಮುಖ್ಯಮಂತ್ರಿ ಹೇಳಿರುವುದಾಗಿ ಸರಕಾರದ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

2030 ರ ವೇಳೆಗೆ ರಾಜ್ಯವು ತನ್ನ ಆರ್ಥಿಕತೆಯ ಗಾತ್ರವನ್ನು ಪ್ರಸ್ತುತ ಅಂದಾಜು 660 ಶತಕೋಟಿ ಡಾಲರ್‌ನಿಂದ 1 ಟ್ರಿಲಿಯನ್ ಡಾಲರ್‌ಗೆ ವಿಸ್ತರಿಸುವ ಗುರಿಯನ್ನು ಹೊಂದಿದೆ ಮತ್ತು ಈಗಾಗಲೇ ಆ ಗುರಿಯ ಅರ್ಧಕ್ಕಿಂತ ಹೆಚ್ಚಿನದನ್ನು ದಾಟಿದೆ ಎಂದು ಫಡ್ನವೀಸ್ ಹೇಳಿದರು.

ನಾಗರಿಕರಿಗೆ ಸೇವೆಗಳ ವಿತರಣೆಯನ್ನು ಸುಧಾರಿಸಲು ಮತ್ತು ಕೃಷಿ, ಮೂಲಸೌಕರ್ಯ, ಆರೋಗ್ಯ ಮತ್ತು ಶಿಕ್ಷಣದಲ್ಲಿ ಎಐ-ಸಕ್ರಿಯಗೊಳಿಸಿದ ವ್ಯವಸ್ಥೆಗಳನ್ನು ನಿರ್ಮಿಸಲು ರಾಜ್ಯ ಸರ್ಕಾರವು ಕೃತಕ ಬುದ್ಧಿಮತ್ತೆಯನ್ನು ಹೆಚ್ಚಾಗಿ ನಿಯೋಜಿಸುತ್ತಿದೆ ಎಂದು ಅವರು ಜಾಸ್ಸಿಗೆ ತಿಳಿಸಿದರು.

ಎಐ ಉದ್ಯೋಗಗಳ ಸ್ವರೂಪವನ್ನು ಪರಿವರ್ತಿಸುತ್ತಿದೆ ಎಂದು ಗಮನಿಸಿದ ಮುಖ್ಯಮಂತ್ರಿಗಳು, ಹೊಸ ತಂತ್ರಜ್ಞಾನದೊಂದಿಗೆ ಹೊಂದಿಕೊಂಡ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು ಅತ್ಯಗತ್ಯ ಮತ್ತು ಈ ಕ್ಷೇತ್ರದಲ್ಲಿಯೂ ಮಹಾರಾಷ್ಟ್ರವು ಅಮೆಜಾನ್‌ನೊಂದಿಗೆ ಪಾಲುದಾರಿಕೆ ಹೊಂದಲು ಆಸಕ್ತಿ ಹೊಂದಿದೆ ಎಂದು ಹೇಳಿದರು.

ಬಲವಾದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ನೆಲೆಯನ್ನು ಹೊಂದಿರುವ ರಾಜ್ಯವು, ಈ ವಲಯಕ್ಕೆ ಎಐ -ಚಾಲಿತ ಕೌಶಲ್ಯ ಕಾರ್ಯಕ್ರಮಗಳಿಗೆ ಅಗತ್ಯವಾದ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಅವರು ತಿಳಿಸಿದರು.

ಸಾರ್ವಜನಿಕ ಕ್ಲೌಡ್ ನೀತಿಯನ್ನು ಜಾರಿಗೆ ತಂದ ದೇಶದ ಮೊದಲ ರಾಜ್ಯ ಮಹಾರಾಷ್ಟ್ರ ಮತ್ತು ಸಾರ್ವಜನಿಕ ಕ್ಲೌಡ್ ಉಪಕ್ರಮಗಳಲ್ಲಿ ಈಗಾಗಲೇ ಅಮೆಜಾನ್ ವೆಬ್ ಸೇವೆಗಳೊಂದಿಗೆ ಕೆಲಸ ಮಾಡಿದೆ ಎಂದು ಮುಖ್ಯಮಂತ್ರಿಗಳು ವಿವರಿಸಿದರು.

ಡೊಂಬಿವಲಿ : ದೇವದಾಸ ಕೆ. ಶೆಟ್ಟಿ ನಿಧನ



ಡೊಂಬಿವಲಿ,ಜೂ.24- ಕುತ್ಯಾರುಗುತ್ತು ದಿ.ಕಿಂಞಣ್ಣ ಶೆಟ್ಟಿ ಹಾಗೂ ದರ್ಭೆ ಪಳ್ಳತ್ತಡ್ಕ ಚೆನ್ನಮ್ಮ ಶೆಟ್ಟಿ ದಂಪತಿಯ ಪುತ್ರರಾದ ದೇವದಾಸ ಕೆ. ಶೆಟ್ಟಿ (63) ಅವರು ಜೂ. 20ರಂದು ಅಲ್ಪಕಾಲದ ಅನಾರೋಗ್ಯದಿಂದಾಗಿ ಡೊಂಬಿವಲಿಯ ಸ್ವಗೃಹದಲ್ಲಿ ನಿಧನ ಹೊಂದಿದರು. ದೇವದಾಸ್ ಕೆ. ಶೆಟ್ಟಿಯವರು ತುಳು ವೆಲ್ಫೇರ್ ಎಸೋಸಿಯೇಶನ್ ಡೊಂಬಿವಲಿ ಇದರ ಮಾಜಿ ಕಾರ್ಯಾಧ್ಯಕ್ಷೆ ವಿನೋದ ಡಿ. ಶೆಟ್ಟಿಯವರ ಪತಿ. ಮೃತರು ಪತ್ನಿ, ಮಕ್ಕಳು, ತಾಯಿ, ಸಹೋದರರು, ಸಹೋದರಿ, ಮೊಮ್ಮಕ್ಕಳು , ಅಳಿಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂಧೇರಿ : ಇಂದಿರಾ ಬಂಗೇರ ನಿಧನ



ಮುಂಬಯಿ, ಜೂ.24- ಅಂಧೇರಿ ಪಶ್ಚಿಮದ ಸೆವೆನ್ ಬಂಗಲೆಯ ಅರಾಮ್ ನಗರ 1 ರ ನಿವಾಸಿ ಇಂದಿರಾ ಚಂದಯ್ಯ ಬಂಗೇರ ಅವರು ಜೂ.23 ರಂದು ನಿಧನರಾಗಿದ್ದಾರೆ. ಮೃತರು ಮೂಲತಃ ಮಂಗಳೂರಿನ ಕುಳಾಯಿಯವರು.

ಇಂದಿರಾ ಬಂಗೇರರವರು ದಾದರ್ ಕಬೂತರ್‌ಖಾನ್‌ದ ಹೋಟೆಲ್ ಮನೋಹರ್ ಮಾಲಕರಾದ ಚಂದಯ್ಯ ಬಂಗೇರರ ಪತ್ನಿ. ಮೃತರು ಮೂರು ಹೆಣ್ಣು, ನಾಲ್ಕು ಗಂಡು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಕಾಂದಿವಲಿ : ಯಶೋದಾ ಜಿ. ಸಾಲ್ಯಾನ್ ನಿಧನ



ಮುಂಬಯಿ, ಜೂ.24- ಕಾಂದಿವಲಿ ಪೂರ್ವ, ಠಾಕೂರ್ ಕಾಂಪ್ಲೆಕ್ಸ್ ತಿರುಪತಿ ಟವರ್ಸ್ ನಿವಾಸಿ ಯಶೋದಾ ಗೋಪಾಲ್ ಸಾಲ್ಯಾನ್ (80) ಅವರು ಜೂನ್ 24 ರಂದು ನಿಧನರಾಗಿದ್ದಾರೆ.

ಮೃತರು ಓರ್ವ ಪುತ್ರ ಹಾಗೂ ಅಪಾರ ಬಂಧು- ಬಳಗವನ್ನು ಅಗಲಿದ್ದಾರೆ.

ಪ್ರಾಥಮಿಕ, ಉನ್ನತ ಶಿಕ್ಷಣ, ಕೃಷಿ ಸಚಿವರಿಲ್ಲದೇ ಕ್ಷೀಣಿಸಿರುವ ಚಟುವಟಿಕೆಗಳು

ಬೆಂಗಳೂರು, ಜೂ. 24 - ಶೈಕ್ಷಣಿಕ ವರ್ಷ ಆರಂಭಗೊಂಡರೂ ರಾಜ್ಯದಲ್ಲಿ ಶಿಕ್ಷಣ ಸಚಿವರುಗಳಿಲ್ಲದೇ ಶೈಕ್ಷಣಿಕ ಚಟುವಟಿಕೆ ಕ್ಷೀಣಿಸಿದೆ. ರಾಜಕೀಯ ಕಾರಣಗಳಿಗಾಗಿ ಸಚಿವ ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗಿಲ್ಲ. ಅದರಲ್ಲೂ ಪ್ರಮುಖವಾಗಿ ಕೃಷಿ ಮತ್ತು ಶಿಕ್ಷಣ ಇಲಾಖೆಗೆ ಪ್ರತ್ಯೇಕ ಸಚಿವರಿಲ್ಲದೇ, ಈ ಪ್ರಮುಖ ಖಾತೆಗಳು ಮುಖ್ಯಮಂತ್ರಿಯವರ ಬಳಿಯೇ ಉಳಿದಿವೆ.

ನೈರುತ್ಯ ಮುಂಗಾರು ಆರಂಭವಾಗಿ ಕೃಷಿ ಹಂಗಾಮು ಶುರುವಾಗಿದೆ. ಜೂನ್‌ನಿಂದ ಶೈಕ್ಷಣಿಕ ವರ್ಷ ಕೂಡ ಆರಂಭಗೊಂಡಿದೆ. ಶಾಲಾ, ಕಾಲೇಜುಗಳಲ್ಲಿ ಪ್ರವೇಶ ಹಾಗೂ ಇತರೆ ಚಟುವಟಿಕೆಗಳು ಬಿರುಸಿನಿಂದ ನಡೆಯುತ್ತಿವೆ. ಸಿಇಟಿ ಕೌನ್ಸಿಲಿಂಗ್ ಪ್ರಕ್ರಿಯೆ ಕೂಡ ನಡೆಯುತ್ತಿದೆ. ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಪ್ರತ್ಯೇಕವಾದ ಸಚಿವರ ಅಗತ್ಯತೆ ಇತ್ತು.

ಶಿಕ್ಷಣದಲ್ಲಿ ಮಹತ್ವದ ಸುಧಾರಣೆ ಮಾಡಲು ಹಿಂದಿನ ಸಿದ್ದರಾಮಯ್ಯ ಸರ್ಕಾರ, ಹಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಪ್ಪದೇ, ಕರ್ನಾಟಕ ತನ್ನದೇ ಆದ ಶಿಕ್ಷಣ ನೀತಿ ರೂಪಿಸಲು ಮುಂದಾಗಿದೆ. ಅದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸಿ ವರದಿ ಪಡೆಯುವ ಪ್ರಯತ್ನಗಳಾಗಿದ್ದವು. ಜೊತೆಗೆ ರಾಜ್ಯಾದ್ಯಂತ ಸುಮಾರು 800ಕ್ಕೂ ಹೆಚ್ಚು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ಕ್ರಿಯಾ ಯೋಜನೆ ಸಿದ್ಧವಾಗಿದೆ. ಈ ಹಂತದಲ್ಲಿ ಇಲಾಖೆಗೆ ಪ್ರತ್ಯೇಕವಾದ ಸಚಿವರ ಅಗತ್ಯ ಹೆಚ್ಚಿತ್ತು.

ಶಾಲಾ, ಕಾಲೇಜುಗಳ ಪ್ರವೇಶದಲ್ಲಿ ಸರ್ಕಾರಿ ಕಾಲೇಜುಗಳಿಗೆ ವಿದ್ಯಾರ್ಥಿಗಳ ಕೊರತೆಯಾದರೆ, ಖಾಸಗಿ ಶಾಲೆಗಳಲ್ಲಿ ಅಧಿಕವಾದ ಶುಲ್ಕ, ಅನಧಿಕೃತವಾದ ಡೊನೇಷನ್ ಹಾವಳಿಯಿಂದ ಪೋಷಕರು ಹೈರಾಣಾಗುತ್ತಿದ್ದಾರೆ. ಸಚಿವರಿಲ್ಲದ ಕಾರಣ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಷ್ಟೇ ಕೆಲಸ ಮಾಡಲು ಸಾಧ್ಯವಾಗುತ್ತಿದೆ. ಕೆಲವು ವಿಚಾರಗಳಲ್ಲಿ ಜನ ಪ್ರಾತಿನಿಧ್ಯದ ಅಗತ್ಯ ತೀವ್ರವಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಈ ಕೊರತೆ ಎದ್ದು ಕಾಣುತ್ತಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗಳಲ್ಲಿ 79 ಸಾವಿರಕ್ಕೂ ಹೆಚ್ಚು ಉನ್ನತ ಶಿಕ್ಷಣದಲ್ಲಿ 13,600 ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಖಾಲಿ ಇವೆ. ರಾಜ್ಯ ಸರ್ಕಾರ 15 ಸಾವಿರ ಶಿಕ್ಷಕರ ನೇಮಕಾತಿಗೆ ಮುಂದಾಗಿದೆ. ಇಂತಹ ಸಂದರ್ಭದಲ್ಲಿ ಶಿಕ್ಷಣ ಸಚಿವರಿಲ್ಲದೇ ಇರುವುದು ಭಾರೀ ಕೊರತೆಯಾಗಿ ಕಾಣಿಸುತ್ತಿದೆ.

ಪಠ್ಯಪುಸ್ತಕ, ಶೂ, ಸಾಕ್ಸ್ , ಸಮವಸ್ತ್ರ ವಿತರಣೆಯಾಗಬೇಕು. ಬಿಸಿಯೂಟ ಯೋಜನೆ ಕ್ರಮ ಬದ್ಧಗೊಳ್ಳಬೇಕು. ರಾಜ್ಯ ಶಿಕ್ಷಣ ನೀತಿಯ ಪ್ರಕಾರ ಪಠ್ಯಕ್ರಮ ಬದಲಾಗಬೇಕು. ಸರ್ಕಾರಿ ಶಾಲೆಗಳಲ್ಲಿ ಮೇಲ್ಚಾವಣಿ ಕುಸಿದು ಕೆಲವೆಡೆ ಅವಘಡಗಳಾಗಿವೆ. ಶಾಲೆಗಳಿಗೆ ಕಟ್ಟಡ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲ ಸೌಲಭ್ಯಗಳ ಕೊರತೆ ಗಂಭೀರವಾಗಿದೆ. ಅವುಗಳತ್ತ ಗಮನ ಹರಿಸಬೇಕಿತ್ತು.

ಈ ಹಿಂದೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾಗಿದ್ದ ಮಧು ಬಂಗಾರಪ್ಪ ಅವರು ಮೂರು ಹಂತದ ಪರೀಕ್ಷೆ ವ್ಯವಸ್ಥೆಗಳನ್ನು ಜಾರಿಗೆ ತಂದು ರಾಷ್ಟ್ರ ಮಟ್ಟದಲ್ಲಿ ಮಾದರಿ ಎನಿಸಿಕೊಂಡಿದ್ದರು.

ಕೆಪಿಎಸ್ ಶಾಲೆಗಳಿಗೆ ಸಿಎಸ್‌ಆರ್ ನಿಧಿ ಬಳಸಿ ಅಭಿವೃದ್ಧಿ ಪಡಿಸಲು ಸಾಕಷ್ಟು ಚರ್ಚೆಗಳಾಗಿದ್ದವು. ಶಿವಮೊಗ್ಗದಲ್ಲಿ ಅಧಿಕೃತವಾಗಿ ಕಾರ್ಯಕ್ರಮ ಉದ್ಘಾಟನೆಯಾಗಬೇಕಿತ್ತು. ಅಷ್ಟರಲ್ಲಿ ನಾಯಕತ್ವ ಬದಲಾವಣೆಯಾಗಿ ಸರ್ಕಾರವೂ ಬದಲಾಯಿತು. ಮೊದಲ ಹಂತದ ಸಂಪುಟ ವಿಸ್ತರಣೆಯಲ್ಲೇ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧುಬಂಗಾರಪ್ಪ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡು ಖಾತೆ ನಿರ್ವಹಣೆಗೆ ಅವಕಾಶ ಮಾಡಿಕೊಡಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಲೋಕೋಪಯೋಗಿ, ಬೃಹತ್ ಕೈಗಾರಿಕೆಯಂತಹ ಖಾತೆಗಳಿಗೆ ಹಿಂದಿನ ಸಚಿವರನ್ನೇ ಮುಂದುವರಿಸಲಾಗಿದೆ. ಶಿಕ್ಷಣ, ಕೃಷಿಯಂತಹ ಖಾತೆಗಳನ್ನು ಕಡೆಗಣಿಸುವುದು ಚರ್ಚೆಗೆ ಗ್ರಾಸವಾಗಿದೆ.

ಎರಡನೇ ಹಂತ ಸಂಪುಟ ವಿಸ್ತರಣೆಯಾಗಬಹುದು. ಶಿಕ್ಷಣ ಮತ್ತು ಕೃಷಿಗೆ ಸಚಿವರ ನೇಮಕವಾಗಬಹುದು ಎಂಬ ನಿರೀಕ್ಷೆಗಳು ಇನ್ನೂ ಈಡೇರಿಲ್ಲ. ಹೊಸ ಸರ್ಕಾರ ರಚನೆಯಾಗಿ ತಿಂಗಳು ಸಮೀಪಿಸಲಾರಂಭಿಸಿವೆ. ಸಂಪುಟ ವಿಸ್ತರಣೆಯೂ ನಡೆದಿಲ್ಲ, ಪ್ರಮುಖ ಖಾತೆಗಳಿಗೆ ಸಚಿವರಿಲ್ಲದೇ ಕೆಲಸ ಕಾರ್ಯಗಳು ಕುಂಠಿತವಾಗುತ್ತಿರುವುದು ಕಂಡು ಬರುತ್ತಿದೆ.

ಗೃಹಲಕ್ಷ್ಮಿ ಯೋಜನೆಯ ಹಣ ವರ್ಗಾವಣೆಗಳಲ್ಲಿ ಭಾರೀ ಅಕ್ರಮ ; ತನಿಖೆಗೆ ಆರ್. ಅಶೋಕ್ ಆಗ್ರಹ

ಗೃಹಲಕ್ಷ್ಮಿ ಯೋಜನೆ ರಾಜ್ಯದ ಇತಿಹಾಸದಲ್ಲೇ ದೊಡ್ಡ ಹಗರಣ : ವಿಜಯೇಂದ್ರ



ಬೆಂಗಳೂರು, ಜೂ. 24 - ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ಹಣ ವರ್ಗಾವಣೆಗಳಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ಖಾತೆಯೇ ಇಲ್ಲದ ಫಲಾನುಭವಿಗಳಿಗೆ ಹಣ ವರ್ಗಾವಣೆ, ಒಂದೇ ಖಾತೆಗೆ ಕೋಟಿ ಕೋಟಿ ಹಣ ಜಮಾ ಆಗಿರುವ ಬಗ್ಗೆ ತನಿಖೆ ನಡೆಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಅವರು, ಮಹಿಳೆಯರ ಸಬಲೀಕರಣದ ಹೆಸರಿನಲ್ಲಿ ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಗೃಹಲಕ್ಷ್ಮಿ ಗ್ಯಾರೆಂಟಿ ಯೋಜನೆ ಕರ್ನಾಟಕದ ಇತಿಹಾಸದಲ್ಲೇ ನಡೆದ ಅತ್ಯಂತ ವ್ಯವಸ್ಥಿತ ಹಗಲು ದರೋಡೆ ಎಂದು ಕಿಡಿಕಾರಿದ್ದಾರೆ. ಮಹಾಲೇಖಪಾಲರ ಡೇಟಾ ಅನಾಲಿಟಿಕ್ಸ್ ವರದಿ ಜನರ ತೆರಿಗೆ ಹಣವನ್ನು ಹೇಗೆ ದುರುಪಯೋಗ ಮಾಡಲಾಗಿದೆ ಎಂಬುದನ್ನು ಸಾಕ್ಷಿಯೊಂದಿಗೆ ಬಯಲಿಗೆಳೆದಿದೆ ಎಂದು ಅವರು ಹೇಳಿದ್ದಾರೆ.

ಅಶೋಕ್ ಅವರ ಆರೋಪದ ಪ್ರಕಾರ, ಬರೋಬ್ಬರಿ 19,020 ಫಲಾನುಭವಿಗಳಿಗೆ ಕೇವಲ ಒಂದೇ ಬ್ಯಾಂಕ್ ಖಾತೆ ಲಿಂಕ್ ಆಗಿದ್ದು, ಆ ಖಾತೆಗೆ ಪ್ರತಿ ತಿಂಗಳು 3.80 ಕೋಟಿ ರೂಪಾಯಿ ಜಮೆಯಾಗುತ್ತಿದೆ. ಒಟ್ಟು 23,262 ಖಾತೆಗಳಿಗೆ ಯಾವುದೇ ಅಧಿಕೃತ ಬ್ಯಾಂಕ್ ವಿವರಗಳಿಲ್ಲದೆ 46.52 ಕೋಟಿ ಹಣ ವರ್ಗಾವಣೆ ಮಾಡಲಾಗಿದೆ. ಕೆಲ ಫಲಾನುಭವಿಗಳ ಹೆಸರಿನಲ್ಲಿ ಪದೇ ಪದೇ ಬ್ಯಾಂಕ್ ಖಾತೆ ಬದಲಾವಣೆ ಮಾಡಲಾಗಿದ್ದು, 10 ಲಕ್ಷಕ್ಕೂ ಹೆಚ್ಚು ಶಂಕಾಸ್ಪದ ದಾಖಲೆಗಳು ಪತ್ತೆಯಾಗಿವೆ ಎಂದು ಅವರು ಹೇಳಿದ್ದಾರೆ.

ಸಿಎಜಿ ಆಡಿಟ್ ಸಂಸ್ಥೆ ಇಲಾಖೆಗೆ ಪದೇ ಪದೇ ಜ್ಞಾಪನಾ ಪತ್ರಗಳನ್ನು ಕಳುಹಿಸಿದರೂ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಸರ್ಕಾರ ಕಡತಗಳನ್ನು ಬಚ್ಚಿಡಲು ಯತ್ನಿಸುತ್ತಿದೆ ಎಂದು ಅಶೋಕ್ ಆರೋಪಿಸಿದ್ದಾರೆ. ಗೃಹಲಕ್ಷ್ಮಿಯ ಹಣ ಬಡ ಮಹಿಳೆಯರಿಗೆ ತಲುಪುತ್ತಿದೆಯೋ ಅಥವಾ ಕಾಂಗ್ರೆಸ್ ಹೈಕಮಾಂಡ್‌ನ ಚುನಾವಣಾ ನಿಧಿಗೆ ಹೋಗುತ್ತಿದೆಯೋ? ಎಂಬ ಪ್ರಶ್ನೆ ಎದ್ದಿದೆ.

ಇದು ಕೇವಲ ತಾಂತ್ರಿಕ ದೋಷವಲ್ಲ, ಸರ್ಕಾರದ ಉನ್ನತ ಮಟ್ಟದಲ್ಲೇ ನಡೆದಿರುವ ನೂರಾರು ಕೋಟಿ ರೂಪಾಯಿಗಳ ಹಗಲು ದರೋಡೆ ಎಂದು ಅವರು ಆರೋಪಿಸಿ, ತಕ್ಷಣವೇ ನಿಷ್ಪಕ್ಷಪಾತ ಉನ್ನತ ಮಟ್ಟದ ತನಿಖೆ ನಡೆಯಬೇಕು ಮತ್ತು ತಪ್ಪಿತಸ್ಥರನ್ನು ಜೈಲಿಗಟ್ಟಬೇಕು ಎಂದು ಆಗ್ರಹಿಸಿದ್ದಾರೆ. ಬಡವರ ಹೆಸರಿನಲ್ಲಿ ಲೂಟಿ ನಡೆಸುತ್ತಿರುವ ಈ ಗ್ಯಾರೆಂಟಿ ಸರ್ಕಾರಕ್ಕೆ ಕನ್ನಡಿಗರು ತಕ್ಕ ಪಾಠ ಕಲಿಸುವರು ಎಂದು ಅಶೋಕ್ ಹೇಳಿದ್ದಾರೆ.

ಗೃಹಲಕ್ಷ್ಮಿ ಯೋಜನೆ ರಾಜ್ಯದ ಇತಿಹಾಸದಲ್ಲೇ ದೊಡ್ಡ ಹಗರಣ : ವಿಜಯೇಂದ್ರ

ಕಾಂಗ್ರೆಸ್ ಸರ್ಕಾರದ ಗೃಹಲಕ್ಷ್ಮಿ ಯೋಜನೆ ರಾಜ್ಯದ ಇತಿಹಾಸದಲ್ಲೇ ದೊಡ್ಡ ಹಗರಣವಾಗಿ ಪರಿಣಮಿಸಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

ಬ್ಯಾಂಕ್ ಖಾತೆಯೇ ಇಲ್ಲದ 23,262 ಜನರಿಗೆ 46.52 ಕೋಟಿ ರೂ. ಪಾವತಿಯಾಗಿರುವುದು, 19,020 ಜನರಿಗೆ ಒಂದೇ ಖಾತೆಗೆ ಹಣ ವರ್ಗಾವಣೆಯಾಗಿರುವುದು ಸಿಎಜಿ ವರದಿಯಿಂದಲೇ ಬಹಿರಂಗವಾಗಿದೆ ಎಂದು ಅವರು ಹೇಳಿದ್ದಾರೆ.

10 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳ ಖಾತೆಗಳು ನಿರಂತರವಾಗಿ ಬದಲಾಗುತ್ತಿರುವುದು ಬಡ ಮಹಿಳೆಯರ ಹೆಸರಿನಲ್ಲಿ ನಡೆಯುತ್ತಿರುವ ಬೃಹತ್ ಲೂಟಿಗೆ ಸಾಕ್ಷಿಯಾಗಿದೆ ಎಂದು ಕಿಡಿಕಾರಿದ್ದಾರೆ. ಸಿಎಜಿ ಕೇಳಿದರೂ ಬ್ಯಾಂಕ್ ಖಾತೆಗಳ ವಿವರ ನೀಡದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಚ್ಚಿಡುತ್ತಿರುವುದಕ್ಕೆ ಕಾರಣವೇನು? ಎಂದು ಅವರು ಪ್ರಶ್ನಿಸಿದ್ದಾರೆ.

ವಿಜಯೇಂದ್ರ ಅವರ ಪ್ರಕಾರ, ಬಡವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಲೂಟಿ ಹೊಡೆದಿರುವ ಗಂಭೀರ ಭ್ರಷ್ಟಾಚಾರದ ಬಗ್ಗೆ ತಕ್ಷಣವೇ ಪಾರದರ್ಶಕ ಉನ್ನತ ಮಟ್ಟದ ತನಿಖೆ ನಡೆಯಬೇಕು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು. ಗ್ಯಾರಂಟಿ ಅನುಷ್ಠಾನ ಸಮಿತಿಗಳು ಕೇವಲ ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ ಹಂಚುವ, ಸಾರ್ವಜನಿಕರ ತೆರಿಗೆ ಹಣದಲ್ಲಿ ಮೋಜು ಮಾಡುವ ಕೇಂದ್ರಗಳಾಗಿವೆ ಎಂದು ಅವರು ಆರೋಪಿಸಿದ್ದಾರೆ.

ಇಷ್ಟೇ ಅಲ್ಲದೆ, ಅರ್ಹ ತಾಯಂದಿರಿಗೆ ನೀಡಬೇಕಿದ್ದ 5,000 ಕೋಟಿ ರೂ. ಹಣ (ಫೆಬ್ರವರಿ-ಮಾರ್ಚ್ 2025) ಫಲಾನುಭವಿಗಳಿಗೆ ತಲುಪದೆ ನಾಪತ್ತೆಯಾಗಿರುವುದನ್ನು ಅವರು ಉಲ್ಲೇಖಿಸಿ, ಈ ಬಗ್ಗೆ ಸರ್ಕಾರ ಇನ್ನೂ ಉತ್ತರ ನೀಡಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

15 ವರ್ಷದ ಅಪ್ರಾಪ್ತ ಬಾಲಕಿಗೆ 29 ವಾರಗಳ ಗರ್ಭಪಾತಕ್ಕೆ ಹೈಕೋರ್ಟ್ ಅನುಮತಿ

ಬೆಂಗಳೂರು, ಜೂ.24 - ಲೈಂಗಿಕ ದೌರ್ಜನ್ಯಕ್ಕೆ ಒಳಗಾದ 15 ವರ್ಷದ ಅಪ್ರಾಪ್ತ ಬಾಲಕಿಯ 29 ವಾರಗಳ ಗರ್ಭಪಾತಕ್ಕೆ ಹೈಕೋರ್ಟ್ ಅನುಮತಿ ನೀಡಿದೆ.

ಇದರೊಂದಿಗೆ, ಪೋಕ್ಸೋ ಕಾಯ್ದೆಯಡಿ ಸಂತ್ರಸ್ತರಾದವರಿಗೆ ತಕ್ಷಣದ ಆರೈಕೆ, ರಕ್ಷಣೆ, ಆಪ್ತಸಮಾಲೋಚನೆ ಮತ್ತು ಪುನರ್ವಸತಿ ಒದಗಿಸುವಲ್ಲಿ ಸರ್ಕಾರದ ಶಿಷ್ಟಾಚಾರಗಳು ಸರಿಯಾಗಿ ಪಾಲನೆಯಾಗುತ್ತಿವೆಯೇ? ಎಂಬುದನ್ನು ಪರಿಶೀಲಿಸಲು ರಾಜ್ಯಾದ್ಯಂತ ಕಡ್ಡಾಯ ಲೆಕ್ಕಪರಿಶೋಧನೆ (ಆಡಿಟ್) ನಡೆಸುವಂತೆ ಸರ್ಕಾರಕ್ಕೆ ನ್ಯಾಯಾಲಯ ಆದೇಶಿಸಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಈ ಬಾಲಕಿಯ ಮೇಲೆ ನಿರಂತರ ಲೈಂಗಿಕ ದೌರ್ಜನ್ಯ ಎಸಗಲಾಗಿತ್ತು. ಈ ಕುರಿತು ಎಪ್ರಿಲ್ 16ರಂದು ಎಫ್‌ಐಆರ್ ದಾಖಲಾಗಿತ್ತು. ಸಾಮಾನ್ಯ ಕಾನೂನಿನನ್ವಯ 24 ವಾರಗಳ ನಂತರ ಗರ್ಭಪಾತಕ್ಕೆ ಅವಕಾಶವಿಲ್ಲದ ಕಾರಣ ಬಾಲಕಿಯ ಪೋಷಕರು ಹೈಕೋರ್ಟ್ ಮೆಟ್ಟಿಲೇರಿದ್ದರು. ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯನ್ನು ಆಧರಿಸಿ, ಸಂತ್ರಸ್ತೆಯ ಭವಿಷ್ಯ ಹಾಗೂ ಆಕೆಯ ದೈಹಿಕ ಹಕ್ಕುಗಳನ್ನು ರಕ್ಷಿಸುವ ಹಿತದೃಷ್ಟಿಯಿಂದ 29 ವಾರ 6 ದಿನಗಳ ಗರ್ಭಪಾತಕ್ಕೆ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಪೀಠವು ಜೂನ್ 8ರಂದು ಅನುಮತಿ ನೀಡಿದೆ.

ಈ ಪ್ರಕರಣದಲ್ಲಿ ಅಧಿಕಾರಿಗಳ ತೀವ್ರ ನಿರ್ಲಕ್ಷ್ಯವನ್ನು ನ್ಯಾಯಾಲಯವು ಎತ್ತಿ ತೋರಿಸಿದೆ. ಎಫ್‌ಐಆರ್ ದಾಖಲಾದ ತಕ್ಷಣ ಠಾಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡಿಲ್ಲ. ಅಧಿಕಾರಿಗಳು ತ್ವರಿತವಾಗಿ ಕಾರ್ಯನಿರ್ವಹಿಸಿದ್ದರೆ ಗರ್ಭಪಾತದ ನಿರ್ಧಾರವನ್ನು ಮೊದಲೇ ತೆಗೆದುಕೊಳ್ಳಬಹುದಿತ್ತು. ಇದರಿಂದ ಬಾಲಕಿ ಮತ್ತು ಆಕೆಯ ಕುಟುಂಬಕ್ಕೆ ಇಷ್ಟೊಂದು ಮಾನಸಿಕ ಯಾತನೆ ಎದುರಾಗುತ್ತಿರಲಿಲ್ಲ ಎಂದು ನ್ಯಾಯಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಪ್ರಕರಣದಲ್ಲಿ ಕರ್ತವ್ಯ ಲೋಪ, ನಿರ್ಲಕ್ಷ್ಯ ಹಾಗೂ ನ್ಯಾಯಾಲಯದ ಹಿಂದಿನ ಆದೇಶಗಳನ್ನು ಪಾಲಿಸದ ಅಧಿಕಾರಿಗಳ ಬಗ್ಗೆ ವಿಚಾರಣೆ ನಡೆಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕರು ವರದಿ ನೀಡಬೇಕು. ಆ ವರದಿಯ ಆಧಾರದ ಮೇಲೆ ಸಂಬಂಧಪಟ್ಟ ಅಧಿಕಾರಿಗಳನ್ನು ಗುರುತಿಸಿ, ಅವರ ವಿರುದ್ಧ ಕಾನೂನು ಪ್ರಕಾರ ಕಠಿಣ ಶಿಸ್ತು ಕ್ರಮ ಜರಗಿಸುವಂತೆಯೂ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ತಮ್ಮ ಮೇಲೂ ಇಡಿ ದಾಳಿ ನಡೆಯುವ ಸಾಧ್ಯತೆ ಇದೆ : ಪ್ರಿಯಾಂಕ್ ಖರ್ಗೆ



ಬೆಂಗಳೂರು, ಜೂ.24 - ತಮ್ಮ ಮೇಲೂ ಇಡಿ ದಾಳಿಯಾಗುವ ಸಾಧ್ಯತೆ ಇದೆ ಎಂದು ಗೃಹ ಹಾಗೂ ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ನಮ್ಮಲ್ಲಿ ಬಲಿತ ದಲಿತರು ಎಷ್ಟು ಜನ ಇದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತೋರಿಸಲಿ ಎಂದುಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಷ್ಟು ಜನ ಬಲಿತ ದಲಿತರು ಇದ್ದಾರೆ ತೋರಿಸಲಿ. ಇವರ ಮನಸ್ಥಿತಿ ಮುಂಚೆಯಿಂದಲೂ ಹೀಗೆಯೇ ಇದೆ. ಕಳೆದ ಚುನಾವಣೆಯಲ್ಲಿ ಅಪಪ್ರಚಾರ ಮಾಡಿದರು. ಯಾಕೆ ನಾನು ಸೂಟು ಹಾಕಬಾರದಾ? ಆರ್‌ಎಸ್ ಎಸ್ ಬಗ್ಗೆ ಕೇಳಿದರೇ ವೈಯಕ್ತಿಕವಾಗಿ ಮಾತನಾಡುತ್ತಿದ್ದಾರೆ. ಆರ್‌ಎಸ್ ಎಸ್ ಆದಾಯ ಕೇಳಿದರೇ ಇವರಿಗೇಕೆ ಉರಿ. ಒಬ್ಬ ದಲಿತ ಆರ್‌ಎಸ್ ಎಸ್ ಬಗ್ಗೆ ಕೇಳಲೇ ಬಾರದಾ? ಎಂದು ಪ್ರಶ್ನಿಸಿದರು.

ಮೋಹನ್ ಭಾಗವತ್ ಬೆಂಗಳೂರಿಗೆ ಬರುತ್ತಿದ್ದಾರಂತೆ. ನೋಂದಣಿ ದಾಖಲೆ ತರ್ತಿದ್ದಾರೋ ಏನೋ ಗೊತ್ತಿಲ್ಲ. ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮೊದಲು ಉತ್ತರ ಕೊಡಲಿ ನೋಂದಣಿ ದಾಖಲೆ ತೋರಿಸಲಿ ಎಂದು ಪ್ರಿಯಾಂಕ್ ಖರ್ಗೆ ಟಾಂಗ್ ಕೊಟ್ಟರು.

ಜಾರಿ ನಿರ್ದೇಶನಾಲಯ ದಾಳಿಗಳ ಸ್ವರೂಪ ಮತ್ತು ಅವುಗಳ ರಾಜಕೀಯ ಉದ್ದೇಶಗಳ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು. ಕೇಂದ್ರ ತನಿಖಾ ಸಂಸ್ಥೆಗಳಾದ ಐಟಿ, ಇಡಿ ಮತ್ತು ಸಿಬಿಐ ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿವೆ ಎಂದು ಅವರು ಆರೋಪಿಸಿದರು.

ಕಳೆದ 12 ವರ್ಷಗಳಲ್ಲಿ ದೇಶಾದ್ಯಂತ ಸಾವಿರಾರು ಇಡಿ ದಾಳಿಗಳು ನಡೆದಿವೆ. ಆದರೆ, ಈ ದಾಳಿಗಳಲ್ಲಿ ಅಪರಾಧ ಸಾಬೀತಾದ ಪ್ರಕರಣಗಳ ಪ್ರಮಾಣ ಶೇಕಡಾ 2 ಕ್ಕಿಂತಲೂ ಕಡಿಮೆ. ಅಂದರೆ ಶೇಕಡಾ 1.5 ಕ್ಕಿಂತಲೂ ಕಡಿಮೆ ಇದೆ. ಈ ಅಂಕಿಅಂಶಗಳು ದಾಳಿಗಳು ರಾಜಕೀಯ ಪ್ರೇರಿತವಾಗಿವೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ ಎಂದು ಅವರು ಪ್ರತಿಪಾದಿಸಿದರು.

ಯಾವಾಗ ಬೇಕೋ ಆವಾಗ ಛೂ ಬಿಡ್ತಾರೆ ಎಂದು ಕೇಂದ್ರ ಸಂಸ್ಥೆಗಳ ಕಾರ್ಯವೈಖರಿಯನ್ನು ಖಂಡಿಸಿದ ಖರ್ಗೆ, ತಮ್ಮ ಮೇಲೂ ಇಡಿ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಇವತ್ತಲ್ಲ ನಾಳೆ ಅದು ಆಗಬಹುದು ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಸಚಿವ ಸತೀಶ್ ಜಾರಕಿಹೊಳಿ ಸಂಬಂಧಿಕರ ಮನೆ ಮೇಲೆ ಇಡಿ ದಾಳಿಯಾದ ಬೆನ್ನಲ್ಲೇ ಪ್ರಿಯಾಂಕ್ ಖರ್ಗೆ ಈ ರೀತಿ ಪ್ರತಿಕ್ರಿಯಿಸಿದರು.

ನಮ್ಮ ಮೆಟ್ರೋ ರೈಲು ಸಂಚಾರದಲ್ಲಿ ತಾಂತ್ರಿಕ ದೋಷ ; ಸಾವಿರಾರು ಪ್ರಯಾಣಿಕರ ಪರದಾಟ!

ಬೆಂಗಳೂರು, ಜೂ. 24 - ಜಾಗತಿಕ ಮಟ್ಟದಲ್ಲಿ ಐಟಿ ಹಬ್ ಎಂದು ಕರೆಯಲ್ಪಡುವ ಬೆಂಗಳೂರಿನಲ್ಲಿ ಸಾರಿಗೆ ವ್ಯವಸ್ಥೆಯ ವೈಫಲ್ಯ ಮತ್ತೊಮ್ಮೆ ಬಯಲಿಗೆ ಬಂದಿದೆ.

ಜೂನ್ 23ರಂದು ಸಂಜೆ ಮೆಟ್ರೋ ರೈಲು ಸಂಚಾರದಲ್ಲಿ ಉಂಟಾದ ತಾಂತ್ರಿಕ ದೋಷದಿಂದ ಸಾವಿರಾರು ಪ್ರಯಾಣಿಕರು ಪರದಾಡುವಂತಾಯಿತು. ಮೆಟ್ರೋ ಸೇವೆ ದಿಢೀರ್ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ರಸ್ತೆಗಳಲ್ಲೇ ಅಸಹಾಯಕರಾಗಿ ನಿಂತು, ಮನೆ ತಲುಪಲು ಟ್ರಕ್ ಮತ್ತು ಲಾರಿಗಳಲ್ಲಿ ಹತ್ತಿ ಹೋಗುವ ಪರಿಸ್ಥಿತಿ ಎದುರಾಯಿತು.

ಆನ್‌ಲೈನ್ ಕ್ಯಾಬ್ ಆ್ಯಪ್‌ಗಳು ಸರಿಯಾಗಿ ಕಾರ್ಯನಿರ್ವಹಿಸದೇ, ಆಟೋ ಚಾಲಕರು ರೈಡ್‌ಗೆ ನಿರಾಕರಿಸಿದ ಪರಿಣಾಮ ಐಟಿ ಉದ್ಯೋಗಿಗಳು ನರಕ ಅನುಭವಿಸಿದರು. ಈ ಘಟನೆಗೆ ಸಂಬಂಧಿಸಿದ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ನೆಟ್ಟಿಗರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೃತಕ ಬುದ್ಧಿಮತ್ತೆ, ಸ್ಮಾರ್ಟ್ ಮೊಬಿಲಿಟಿ, ಎಲೆಕ್ಟ್ರಿಕ್ ವಾಹನಗಳ ಬಗ್ಗೆ ದೊಡ್ಡದಾಗಿ ಮಾತನಾಡುವ ನಗರದಲ್ಲಿ ನಾಗರಿಕರಿಗೆ ಕನಿಷ್ಠ ಸುರಕ್ಷಿತ ಸಾರಿಗೆ ಖಾತರಿಪಡಿಸಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ವ್ಯಂಗ್ಯವಾಗಿ ಕಮೆಂಟ್ ಮಾಡಿದ್ದಾರೆ.

ನಮ್ಮ ಮೆಟ್ರೋ ಕೈಕೊಡುತ್ತದೆ, ಕ್ಯಾಬ್‌ಗಳು ಸಿಗುವುದಿಲ್ಲ, ಆಟೋಗಳು ಬರುವುದಿಲ್ಲ, ಕೊನೆಗೆ ಅಧಿಕಾರಿಗಳು ಸ್ಪಷ್ಟೀಕರಣ ನೀಡುತ್ತಾರೆ. ಮರುದಿನ ಮತ್ತೆ ಅದೇ ಕಥೆ ಮುಂದುವರಿಯುತ್ತದೆ ಎಂದು ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ.

ತೆರಿಗೆ, ಮೆಟ್ರೋ ಟಿಕೆಟ್ ದರ ಮತ್ತು ಮೂಲಸೌಕರ್ಯ ಹೂಡಿಕೆಗಳು ಎಲ್ಲಿಗೆ ಹೋಗುತ್ತಿವೆ? ಎಂಬ ಪ್ರಶ್ನೆಗಳನ್ನು ನೆಟ್ಟಿಗರು ಎತ್ತಿದ್ದಾರೆ. ಯಾವುದೇ ಜಾಗತಿಕ ದರ್ಜೆಯ ನಗರದಲ್ಲಿ ಒಪ್ಪಿಕೊಳ್ಳಲಾಗದ ಇಂತಹ ವ್ಯವಸ್ಥಿತ ವೈಫಲ್ಯಗಳನ್ನು ಬೆಂಗಳೂರಿನ ಜನ ಇನ್ನೆಷ್ಟು ಕಾಲ ಸಹಿಸಬೇಕು ಎಂಬ ಅಸಮಾಧಾನ ವ್ಯಕ್ತವಾಗಿದೆ. ಹೈಪರ್‌ಲೂಪ್ ಮತ್ತು ಭವಿಷ್ಯದ ತಂತ್ರಜ್ಞಾನಗಳ ಬಗ್ಗೆ ಮಾತಾಡುವ ಬದಲು, ಈಗಾಗಲೇ ಟ್ರಕ್-ಆಸ್-ಎ-ಸರ್ವೀಸ್ ಎಂಬ ಹೊಸ ವ್ಯವಸ್ಥೆ ಬೆಂಗಳೂರಿನಲ್ಲಿ ಜಾರಿಯಾಗಿದೆ ಎಂಬ ವ್ಯಂಗ್ಯವನ್ನೂ ನೆಟ್ಟಿಗರು ಮಾಡಿದ್ದಾರೆ.

ವರಿಷ್ಠರ ಅಂಗಳದಲ್ಲಿ ಮುಜುಗರಕ್ಕೆ ಒಳಗಾಗುತ್ತಿರುವ ಬಿ.ವೈ. ವಿಜಯೇಂದ್ರ!

ಬೆಂಗಳೂರು, ಜೂ.24 - ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಅಧಿಕಾರ ವಹಿಸಿಕೊಂಡ ನಂತರ, ಪಕ್ಷವು ಸರಣಿ ಸವಾಲುಗಳನ್ನು ಎದುರಿಸುತ್ತಿದ್ದು, ಎಡವಟ್ಟುಗಳಿಂದ ಭಾರೀ ಮುಜುಗರಕ್ಕೊಳಗಾಗುತ್ತಿದ್ದಾರೆ.

ಇತ್ತೀಚಿನ ಚುನಾವಣೆಗಳ ಲ್ಲಿನ ಹಿನ್ನಡೆ ಮತ್ತು ಪಕ್ಷದ ಆಂತರಿಕ ಅಸಮಾಧಾನವು ಅವರ ನಾಯಕತ್ವದ ಮೇಲೆ ಭಾರೀ ಒತ್ತಡ ಸೃಷ್ಟಿಸಿದೆ. ಪಕ್ಷದ ದೆಹಲಿ ನಾಯಕರ ಅಂಗಳದಲ್ಲಿ ವಿಜಯೇಂದ್ರ ಮುಜುಗರಕ್ಕೊಳಗಾಗಿದ್ದಾರೆ.

ಅಧ್ಯಕ್ಷರಾದ ನಂತರ ನಡೆದ ಕೆಲವು ಉಪಚುನಾವಣೆಗಳು ಮತ್ತು ಸ್ಥಳೀಯ ಮಟ್ಟದ ಚುನಾವಣೆಗಳಲ್ಲಿ ಬಿಜೆಪಿಗೆ ಆಶಾದಾಯಕ ಫಲಿತಾಂಶ ಸಿಗದಿರುವುದು ಪಕ್ಷದೊಳಗಿನ ಚರ್ಚೆಗೆ ಕಾರಣವಾಗಿದೆ. ವಿಶೇಷವಾಗಿ ಸಂಘಟನಾತ್ಮಕವಾಗಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಅವರು ಸವಾಲುಗಳನ್ನು ಎದುರಿಸುತ್ತಿದ್ದಾರೆ.

ವಿಜಯೇಂದ್ರ ಅವರ ನೇತೃತ್ವದ ವಿರುದ್ಧ ಪಕ್ಷದ ಒಳಗಿನಿಂದ ಮತ್ತು ಹೊರಗಿನಿಂದ ಟೀಕೆಗಳು ಕೇಳಿಬರುತ್ತಿದ್ದು, ಇತ್ತೀಚಿನ ಚುನಾವಣೆಗಳಲ್ಲಿನ ಹಿನ್ನಡೆಯು ಅವರ ನಾಯಕತ್ವದ ಮೇಲೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಅಧ್ಯಕ್ಷರಾದ ನಂತರ ನಡೆದ ವಿವಿಧ ಚುನಾವಣೆಗಳಲ್ಲಿ ನಿರೀಕ್ಷಿತ ಗೆಲುವು ಸಾಧಿಸಲು ಪಕ್ಷಕ್ಕೆ ಸಾಧ್ಯವಾಗಿಲ್ಲ ಎಂಬ ವಾದಗಳು ರಾಜಕೀಯ ವಲಯದಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿವೆ.

ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆಯ ಫಲಿತಾಂಶವು ಇದಕ್ಕೆ ಒಂದು ಪ್ರಮುಖ ಉದಾಹರಣೆಯಾಗಿ ಚರ್ಚೆಯಾಗುತ್ತಿದೆ. ರಾಜ್ಯದಲ್ಲಿ ನಡೆದ ಉಪ ಚುನಾವಣೆಗಳು ಹಾಗೂ ಲೋಕಸಭಾ ಚುನಾವಣೆಯ ನಂತರದ ಪ್ರಕ್ರಿಯೆಗಳಲ್ಲಿ ಪಕ್ಷವು ತನ್ನ ಸಂಘಟನಾತ್ಮಕ ಹಿಡಿತವನ್ನು ಪ್ರದರ್ಶಿಸಲು ವಿಫಲವಾಗಿದೆ ಎಂಬ ಆರೋಪವಿದೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನ ವಿಜಯೇಂದ್ರ ಅವರ ನಾಯಕತ್ವಕ್ಕೆ ಬಿದ್ದ ದೊಡ್ಡ ಪೆಟ್ಟು ಎನ್ನಲಾಗಿದೆ. ವಿರೋಧ ಪಕ್ಷದ ಮತಗಳಲ್ಲೇ ಗೊಂದಲ ಉಂಟಾಗಿ, ಆಡಳಿತಾರೂಢ ಕಾಂಗ್ರೆಸ್‌ಗೆ ಅನುಕೂಲವಾಗುವಂತೆ ಫಲಿತಾಂಶ ಹೊರಬಂದಿದ್ದು, ಹೈಕಮಾಂಡ್ ಮಟ್ಟದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಪಕ್ಷದ ಹಿರಿಯ ನಾಯಕರು ಮತ್ತು ಕೆಲವು ಶಾಸಕರಿಂದಲೇ ಬಹಿರಂಗವಾಗಿ ಮತ್ತು ಪರೋಕ್ಷವಾಗಿ ವಿಜಯೇಂದ್ರ ಅವರ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತವಾಗುತ್ತಿದೆ. ಪಕ್ಷದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಏಕಪಕ್ಷೀಯ ಧೋರಣೆ ಅನುಸರಿಸಲಾಗುತ್ತಿದೆ ಎಂಬುದು ಕೆಲ ನಾಯಕರ ಅಳಲು.

ಇದು ಬಣ ರಾಜಕೀಯಕ್ಕೆ ದಾರಿ ಮಾಡಿಕೊಟ್ಟಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿನ ಸೋಲಿಗೆ ರಾಜ್ಯ ನಾಯಕತ್ವದ ವೈಫಲ್ಯವೇ ಕಾರಣ ಎಂದು ಪಕ್ಷದ ಆಂತರಿಕ ವಲಯದಲ್ಲಿ ಟೀಕೆಗಳು ಕೇಳಿಬರುತ್ತಿವೆ. ಈ ಹಿನ್ನೆಲೆಯಲ್ಲಿ, ನವದೆಹಲಿಯಲ್ಲಿರುವ ಪಕ್ಷದ ವರಿಷ್ಠರು ವಿಜಯೇಂದ್ರ ಮತ್ತು ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರನ್ನು ದೆಹಲಿಗೆ ಕರೆಸಿಕೊಂಡು ಸ್ಪಷ್ಟನೆ ಕೇಳಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ.



ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪಕ್ಷದ ರಾಷ್ಟ್ರೀಯ ನಾಯಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಡ್ಡ ಮತದಾನದ ಸತ್ಯಾಸತ್ಯತೆಯನ್ನು ಪತ್ತೆಹಚ್ಚಲು ಸಿ.ಟಿ. ರವಿ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಲಾಗಿದೆ.

ರಾಷ್ಟ್ರೀಯ ನಾಯಕರ ಕಠಿಣ ನಿಲುವು:

ಪಕ್ಷದ ವರಿಷ್ಠರು ಪರಿಸ್ಥಿತಿಯನ್ನು ಹತೋಟಿಗೆ ತರಲು ಮತ್ತು ಭವಿಷ್ಯದ ಕಾರ್ಯತಂತ್ರಗಳನ್ನು ರೂಪಿಸಲು ರಾಜ್ಯ ನಾಯಕತ್ವದೊಂದಿಗೆ ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ.

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ನಡೆಸಬೇಕಾದ ಸಮಯದಲ್ಲಿ, ಬಿಜೆಪಿ ಆಂತರಿಕ ಕಚ್ಚಾಟದಲ್ಲಿ ಸಿಲುಕಿರುವುದು ಕಾರ್ಯಕರ್ತರಲ್ಲಿ ನಿರುತ್ಸಾಹ ಮೂಡಿಸಿದೆ.

ವಿಜಯೇಂದ್ರ ಅವರು ತಮ್ಮ ನಾಯಕತ್ವವನ್ನು ಸಾಬೀತುಪಡಿಸಲು ಮತ್ತು ಪಕ್ಷದಲ್ಲಿನ ಒಗ್ಗಟ್ಟನ್ನು ಮರುಸ್ಥಾಪಿಸಲು ಕಠಿಣ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ಮುಂದಿನ ದಿನಗಳಲ್ಲಿ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಗಳು ಕರ್ನಾಟಕ ಬಿಜೆಪಿಯ ಮುಂದಿನ ದಿಕ್ಕನ್ನು ನಿರ್ಧರಿಸಲಿವೆ.ಲೋಕಸಭಾ ಚುನಾವಣೆ ವಿಜಯೇಂದ್ರ ಅವರು ಅಧ್ಯಕ್ಷರಾದ ನಂತರ ಎದುರಿಸಿದ ಅತಿದೊಡ್ಡ ಚುನಾವಣೆ ಇದಾಗಿತ್ತು. ಈ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟವು ರಾಜ್ಯದಲ್ಲಿ ಒಟ್ಟು 28 ಕ್ಷೇತ್ರಗಳ ಪೈಕಿ 19 ಸ್ಥಾನಗಳನ್ನು ಗೆಲ್ಲುವ ಮೂಲಕ ಉತ್ತಮ ಪ್ರದರ್ಶನವನ್ನೇ ತೋರಿತು. ಆದಾಗ್ಯೂ, ಇದನ್ನು ನೇರವಾಗಿ ವಿಜಯೇಂದ್ರ ಅವರ ವೈಯಕ್ತಿಕ ಸಾಧನೆ ಅಥವಾ ವೈಫಲ್ಯ ಎಂದು ವಿಶ್ಲೇಷಿಸುವಾಗ, ಹೈಕಮಾಂಡ್ ತಂತ್ರಗಳು ಮತ್ತು ಮೋದಿ ಅವರ ಜನಪ್ರಿಯತೆಯನ್ನು ಮುಖ್ಯವಾಗಿ ಪರಿಗಣಿಸಲಾಗುತ್ತದೆ. ವಿರೋಧಿ ಬಣಗಳು ಮತ್ತು ಟೀಕಾಕಾರರು, ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷವು ಹಳೆಯ ವೇಗವನ್ನು ಕಳೆದುಕೊಂಡಿದೆ ಮತ್ತು ಆಂತರಿಕ ಭಿನ್ನಾಭಿಪ್ರಾಯಗಳು ಹೆಚ್ಚಾಗಿವೆ ಎಂದು ಆರೋಪಿಸುತ್ತವೆ.

ಸೋಲಿನ ಸರಪಳಿ ಎಂಬುದು ಅವರ ನಾಯಕತ್ವದ ಮೇಲೆ ನಡೆಯುತ್ತಿರುವ ಪ್ರಮುಖ ಟೀಕೆಯಾಗಿದೆ. ಆಂತರಿಕ ಭಿನ್ನಮತ ವಿಜಯೇಂದ್ರ ಅವರ ನೇತೃತ್ವದ ಬಗ್ಗೆ ಪಕ್ಷದ ಒಳಗಿನಿಂದಲೇ ಅಸಮಾಧಾನ ವ್ಯಕ್ತವಾಗುತ್ತಿದ್ದು, ಅವರ ರಾಜೀನಾಮೆಗೆ ಕೆಲವು ನಾಯಕರು ಆಗ್ರಹಿಸುತ್ತಿರುವ ವರದಿಗಳೂ ಇವೆ. ಮುಖ್ಯವಾಗಿ, ಅಡ್ಡ ಮತದಾನದ ವಿಷಯದಲ್ಲಿ ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡಬೇಕೆಂಬ ವಿಜಯೇಂದ್ರ ಅವರ ಪ್ರಸ್ತಾಪವು ಪಕ್ಷದ ಹಿರಿಯ ನಾಯಕರಿಂದಲೇ ವಿರೋಧಕ್ಕೆ ಗುರಿಯಾಗಿತ್ತು.

ಮಹಾರಾಷ್ಟ್ರದಲ್ಲಿಯೂ ನೀರಿನ ಅಭಾವ ಇರುವುದರಿಂದ ಅಲ್ಲಿಂದ ನೀರು ಬಿಡುವುದು ಕಷ್ಟಕರ : ಸತೀಶ್ ಜಾರಕಿಹೊಳಿ



ಬೆಳಗಾವಿ, ಜೂ. 24 - ಪಕ್ಕದ ಮಹಾರಾಷ್ಟ್ರದಲ್ಲಿಯೂ ನೀರಿನ ಅಭಾವ ಉಂಟಾಗಿರುವುದರಿಂದ ಅಲ್ಲಿಂದ ನೀರು ಬಿಡುವುದು ಕಷ್ಟಕರವಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ವರ್ಷ ಮಾತ್ರವಲ್ಲದೆ ಹಿಂದೆಯೂ ರಾಜ್ಯ ಸರ್ಕಾರ ಮನವಿ ಸಲ್ಲಿಸಿದ್ದರೂ ಮಹಾರಾಷ್ಟ್ರದಿಂದ ನಿರೀಕ್ಷಿತ ಪ್ರಮಾಣದಲ್ಲಿ ನೀರು ಬಿಡುಗಡೆಯಾಗಿಲ್ಲ. ಕೊಯ್ನಾ ಜಲಾಶಯ ಭರ್ತಿಯಾಗಿದ್ದ ಸಂದರ್ಭದಲ್ಲಿಯೂ ಮಹಾರಾಷ್ಟ್ರ ಸರ್ಕಾರ ನೀರು ಬಿಡಲು ಮುಂದಾಗಿರಲಿಲ್ಲ. ಪ್ರಸ್ತುತ ನೀರಿನ ಕೊರತೆಯಿಂದಾಗಿ ಮಹಾರಾಷ್ಟ್ರ ಅಧಿಕಾರಿಗಳು ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಈಗಾಗಲೇ ತಿಳಿಸಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಂಬೈಗೆ ಮದುವೆ ಸಂಬಂಧ ಹೋಗಿದ್ದ ಸಂದರ್ಭದಲ್ಲಿ ಕೃಷ್ಣಾ ನದಿಗೆ ನೀರು ಬಿಡುವ ವಿಚಾರ ಚರ್ಚೆಯಾಗಿಲ್ಲ ಎಂದು ಅವರು ತಿಳಿಸಿದರು. ಬೆಳಗಾವಿ ನಗರದಲ್ಲಿ ಮುಂದಿನ ಎರಡು ತಿಂಗಳಿಗೆ ಸಾಕಾಗುವಷ್ಟು ಕುಡಿಯುವ ನೀರಿನ ಸಂಗ್ರಹವಿದ್ದು, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ. ನೀರಿನ ಕೊರತೆ ಎದುರಾಗುವ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ನೀರು ಸರಬರಾಜು ಸಮರ್ಪಕವಾಗಿ ನಡೆಯುವಂತೆ ಗ್ರಾಮ ಪಂಚಾಯತ್‌ಗಳಿಗೆ ಸೂಚನೆ ನೀಡಲಾಗಿದೆ.

24/7 ಕುಡಿಯುವ ನೀರಿನ ಯೋಜನೆ ಇನ್ನೂ ಸಂಪೂರ್ಣವಾಗಿ ಪೂರ್ಣಗೊಂಡಿಲ್ಲ. ಲಭ್ಯವಿರುವ ನೀರಿನ ಪ್ರಮಾಣ, ವಿತರಣಾ ವ್ಯವಸ್ಥೆ ಹಾಗೂ ತಾಂತ್ರಿಕ ಅಡಚಣೆಗಳನ್ನು ಪರಿಗಣಿಸಿ ನೀರು ಪೂರೈಕೆ ಮಾಡಲಾಗುತ್ತಿದೆ. ಯೋಜನೆ ಪೂರ್ಣಗೊಂಡ ಬಳಿಕ ನಿರಂತರ ನೀರು ಸರಬರಾಜು ಸಾಧ್ಯವಾಗಲಿದೆ ಎಂದು ಅವರು ಹೇಳಿದರು.

ಮಹಾನಗರ ಪಾಲಿಕೆ ಸರ್ಕಾರದ ಗಮನಕ್ಕೆ ಸಮಸ್ಯೆಗಳನ್ನು ಸಮರ್ಪಕವಾಗಿ ತರುವುದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಸ್ಪಷ್ಟ ಮಾಹಿತಿ ದೊರೆತರೆ ಮಾತ್ರ ಸರ್ಕಾರ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಿಯಕರನೊಂದಿಗೆ ಸೇರಿ ತಂದೆ, ತಾಯಿ ಹಾಗೂ ಸಹೋದರಿಯ ಹತ್ಯೆ : ಪುದುಚೆರಿಯಲ್ಲಿ ಯುವತಿಯ ಬಂಧನ ; ಪ್ರಿಯಕರನಿಗಾಗಿ ಹುಡುಕಾಟ

ಬೆಂಗಳೂರು, ಜೂ. 24 - ಪ್ರಿಯಕರನೊಂದಿಗೆ ಸೇರಿ ತಂದೆ, ತಾಯಿ ಹಾಗೂ ಸಹೋದರಿಯನ್ನು ಹತ್ಯೆಗೈದ ಆರೋಪದಲ್ಲಿ ಶ್ವೇತಾ (25) ಎಂಬ ಯುವತಿಯನ್ನು ವೈಟ್‌ಫೀಲ್ಡ್ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಕೃತ್ಯದ ಬಳಿಕ ಪರಾರಿಯಾಗಿದ್ದ ಆಕೆಯನ್ನು ಪುದುಚೇರಿ ರೈಲ್ವೇ ನಿಲ್ದಾಣದ ಬಳಿ ಬಂಧಿಸಲಾಗಿದ್ದು, ಆಕೆಯ ಪ್ರಿಯಕರ ಕೆನತ್‌ಗಾಗಿ ಹುಡುಕಾಟ ಮುಂದುವರಿದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೋಮವಾರ ರಾತ್ರಿ ಸೀಗೇಹಳ್ಳಿಯ ಡಾಮಿನಿಕ್ ಲೇಔಟ್‌ನ ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನಲ್ಲಿ ನಡೆದ ಈ ಘಟನೆದಲ್ಲಿ ಶ್ವೇತಾ ಹಾಗೂ ಕೆನತ್ ಚಾಕುವಿನಿಂದ ಇರಿದು ಸೋಮಸುಂದರ್ (52), ಅವರ ಪತ್ನಿ ಮುತ್ತುಲಕ್ಷ್ಮಿ (48) ಹಾಗೂ ಕಿರಿಯ ಪುತ್ರಿ ಸುಪ್ರಿಯಾ (19) ಅವರನ್ನು ಬರ್ಬರವಾಗಿ ಹತ್ಯೆಗೈದಿದ್ದರು. ಪೋಷಕರೊಂದಿಗೆ ಜಗಳವಾದ ನಂತರ ಈ ದಾಳಿ ನಡೆದಿದ್ದು, ಸ್ಥಳೀಯರ ಸಹಾಯದಿಂದ ಆಸ್ಪತ್ರೆಗೆ ದಾಖಲಿಸಲ್ಪಟ್ಟ ಸೋಮಸುಂದರ್ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದರು.

ಪೊಲೀಸರು ಶೋಧ ನಡೆಸಿದಾಗ ಶ್ವೇತಾಳ ಡೈರಿ ಪತ್ತೆಯಾಗಿದೆ. ಅದರಲ್ಲಿ ಐ ಆ್ಯಮ್ ಸ್ಯಾಡ್, ಐ ಆ್ಯಮ್ ಲೋನ್ಲಿ, ಫೀಲಿಂಗ್ ಲವ್ಡ್, ಐ ಆ್ಯಮ್ ಡಿಪ್ರೆಸ್ಡ್, ಐ ಆ್ಯಮ್ ಸೂಪಿರಿಯರ್ ಎಂದು ಬರೆದಿರುವುದು ಕಂಡುಬಂದಿದೆ. ಪ್ರಾಥಮಿಕ ವಿಚಾರಣೆಯಲ್ಲಿ ಶ್ವೇತಾ ತನ್ನ ಪೋಷಕರು ಜೀವನವನ್ನು ನಿಯಂತ್ರಿಸುತ್ತಿದ್ದರು, ಸ್ವಾತಂತ್ರ್ಯವಿಲ್ಲದ ಕಾರಣ ಹತ್ಯೆಗೈದಿದ್ದೇನೆ ಎಂದು ಹೇಳಿದ್ದಾಳೆ ಎಂದು ಮೂಲಗಳು ತಿಳಿಸಿವೆ.

ಶ್ವೇತಾ ಹಾಗೂ ಕೆನತ್ ನ್ಯೂ ಹಾರಿಜನ್ ಕಾಲೇಜಿನಲ್ಲಿ ಬಿ.ಟೆಕ್ ವ್ಯಾಸಂಗ ಮಾಡಿದ್ದು, ಖಾಸಗಿ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಲಿವ್-ಇನ್ ಸಂಬಂಧದಲ್ಲಿದ್ದು, ಎರಡು ತಿಂಗಳ ಹಿಂದೆ ಸಾಯಿ ಗ್ರೀನ್ ಅಪಾರ್ಟ್‌ಮೆಂಟ್‌ನಲ್ಲಿ ಬಾಡಿಗೆಗೆ ವಾಸಿಸುತ್ತಿದ್ದರು. ಶ್ವೇತಾ ಬ್ಯಾಂಕ್‌ನಿಂದ ಸುಮಾರು ರೂ.30 ಲಕ್ಷ ಸಾಲ ಪಡೆದಿದ್ದು, ಕಂತು ಪಾವತಿಸದ ಕಾರಣ ಕುಟುಂಬಕ್ಕೆ ನೋಟಿಸ್ ಬಂದಿತ್ತು. ಈ ಕಾರಣಕ್ಕೂ ಪೋಷಕರೊಂದಿಗೆ ವೈಮನಸ್ಸು ಹೆಚ್ಚಾಗಿತ್ತು.

ಭಾನುವಾರ ತಾಯಿ ಮುತ್ತುಲಕ್ಷ್ಮಿ ಶ್ವೇತಾಳನ್ನು ಮನೆಗೆ ಕರೆಯಿಸಿಕೊಂಡು ಪ್ರಿಯಕರನೊಂದಿಗೆ ಇರುವುದನ್ನು ನೋಡಿ ಬೈದಿದ್ದಕ್ಕೆ ಕೋಪಗೊಂಡ ಆಕೆ ಕೆನತ್ ಜೊತೆ ಸೇರಿ ಹತ್ಯೆಗೈದಿದ್ದಾಳೆ. ಬಳಿಕ ತಂದೆ ಹಾಗೂ ತಂಗಿಯನ್ನು ಊಟಕ್ಕೆ ಆಹ್ವಾನಿಸಿ ಪೂರ್ವ ಸಂಚಿನಂತೆ ಚಾಕುವಿನಿಂದ ಕೊಲೆ ಮಾಡಿ, ರಾತ್ರಿ ಬೈಕ್ ಮೂಲಕ ಪರಾರಿಯಾಗಿದ್ದರು. ಸದ್ಯ ಶ್ವೇತಾ ಬಂಧನವಾಗಿದ್ದು, ಕೆನತ್‌ಗಾಗಿ ಪೊಲೀಸರು ಹುಡುಕಾಟ ಮುಂದುವರೆಸಿದ್ದಾರೆ.

ಪಾಕ್ ಉಗ್ರ ಸಂಘಟನೆಗಳ ಜೊತೆ ಸಂಪರ್ಕ ; ಯುಪಿ ಮೂಲದ ಸುಯೇಲ್ ಬಂಧನ

ದಾವಣಗೆರೆ, ಜೂ. 24 - ಪಾಕಿಸ್ತಾನದ ಉಗ್ರ ಸಂಘಟನೆಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದ ಉತ್ತರ ಪ್ರದೇಶ ಮೂಲದ ಸುಯೇಲ್ (20) ಎಂಬ ಯುವಕನನ್ನು ದಾವಣಗೆರೆಯಲ್ಲಿ ಪೊಲೀಸರು ಲಾಕ್ ಮಾಡಿದ್ದಾರೆ. ಶಹಜಾನ್ ಪುರದ ಮೂಲದ ಈತನನ್ನು ಹರಿಹರ ನಗರದಲ್ಲಿ ವಾಸಿಸುತ್ತಿದ್ದಾಗ ಬಂಧಿಸಲಾಗಿದೆ.

ಹರಿಹರದ ಕಾರ್ಖಾನೆಯೊಂದರಲ್ಲಿ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಸುಯೇಲ್ ಇನ್‌ಸ್ಟಾಗ್ರಾಂ ಮೂಲಕ ಪಾಕಿಸ್ತಾನದ ಉಗ್ರರೊಂದಿಗೆ ಸಂಪರ್ಕದಲ್ಲಿದ್ದನೆಂದು ಮಾಹಿತಿ ದೊರೆತಿದೆ. ರಾಷ್ಟ್ರೀಯ ತನಿಖಾ ಸಂಸ್ಥೆಯ ಸೂಚನೆಯ ಮೇರೆಗೆ ಕೇಂದ್ರ ಗುಪ್ತಚರ ಇಲಾಖೆ ಹಾಗೂ ದಾವಣಗೆರೆಯ ಗ್ರಾಮಾಂತರ ಡಿವೈಎಸ್ಪಿ ಬಸವರಾಜ್ ನೇತೃತ್ವದ ತಂಡ ನಸುಕಿನಲ್ಲಿ ಕಾರ್ಯಾಚರಣೆ ನಡೆಸಿ ಬಂಧಿಸಿದೆ. ಬಂಧಿತನನ್ನು ಪ್ರಾಥಮಿಕ ವಿಚಾರಣೆ ನಡೆಸಿ ತುಮಕೂರು ಪೊಲೀಸರಿಗೆ ಹಸ್ತಾಂತರ ಮಾಡಲಾಗಿದೆ.



ಒಂದು ತಿಂಗಳ ಹಿಂದೆ ತುಮಕೂರು ಟೌನ್ ಪೊಲೀಸ್ ಠಾಣೆಯವರು ದಾವಣಗೆರೆ ಮೂಲದ ಜಮೀರ್ ಖಾನ್ ಹಾಗೂ ತುಮಕೂರಿನ ಅಲ್ಲಾಭಕ್ಷಿ ಎಂಬವರನ್ನು ಬಂಧಿಸಿದ್ದರು. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರನೇ ವ್ಯಕ್ತಿಯಾಗಿ ಸುಯೇಲ್ ಬಂಧನಕ್ಕೊಳಗಾಗಿದ್ದಾನೆ. ಪಾಕಿಸ್ತಾನದ ಉಗ್ರರ ಜೊತೆ ನಂಟು ಹೊಂದಿದ್ದ ಆರೋಪದ ಮೇಲೆ ತೀವ್ರ ವಿಚಾರಣೆ ಮುಂದುವರಿದಿದೆ.

ವರ್ಷಪೂರ್ತಿ ಆಹಾರ ಸುರಕ್ಷತಾ ಮಾನದಂಡಗಳ ಜಾರಿ ಖಚಿತಪಡಿಸಿಕೊಳ್ಳಿ: ಅಧಿಕಾರಿಗಳಿಗೆ ಆದೇಶ

ಮುಂಬಯಿ,ಜೂ.24 - ವರ್ಷವಿಡೀ ಆಹಾರ ಸುರಕ್ಷತಾ ನಿಯಮಗಳ ನಿರಂತರ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಮತ್ತು ಆವರ್ತಕ ವಿಶೇಷ ಡ್ರೈವ್‌ಗಳನ್ನು ಮಾತ್ರ ಅವಲಂಬಿಸದಂತೆ ಮಹಾರಾಷ್ಟ್ರ ಆಹಾರ ಮತ್ತು ಔಷಧ ಆಡಳಿತ (ಎಫ್‌ಡಿಎ) ಬುಧವಾರ ತನ್ನ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಆಹಾರ ಸುರಕ್ಷತಾ ಮಾನದಂಡಗಳ ಅನುಸರಣೆ ಮತ್ತು ಉಲ್ಲಂಘನೆಗಳ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಹೋಟೆಲ್ ಮತ್ತು ಆಹಾರ ವ್ಯವಹಾರ ನಿರ್ವಾಹಕರೊಂದಿಗೆ ಸಭೆಗಳನ್ನು ನಡೆಸಲು ನಿಯಂತ್ರಕ ಪ್ರಾಧಿಕಾರವು ನಿರ್ಧರಿಸಿದೆ.

ಎಫ್‌ಡಿಎ ಆಯುಕ್ತ ತುಕಾರಾಂ ಮುಂಢೆ ಅವರ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು, ಅಲ್ಲಿ ಅಧಿಕಾರಿಗಳು ವರ್ಷವಿಡೀ ಆಹಾರ ಸುರಕ್ಷತಾ ಮಾನದಂಡಗಳ ಜಾರಿಯನ್ನು ಬಲಪಡಿಸುವ ಕ್ರಮಗಳನ್ನು ಚರ್ಚಿಸಿದರು.

ಎಫ್‌ಡಿಎ ಪ್ರಕಾರ, ಮಹಾರಾಷ್ಟ್ರದಾದ್ಯಂತ ನಡೆಸಿದ ತಪಾಸಣೆಗಳು, ವಿಶೇಷ ಅಭಿಯಾನಗಳು, ಸಮೀಕ್ಷೆಗಳು ಮತ್ತು ಜಾರಿ ಕ್ರಮಗಳು ಹಲವಾರು ಗಂಭೀರ ನ್ಯೂನತೆಗಳನ್ನು ಬಹಿರಂಗಪಡಿಸಿವೆ, ಅವುಗಳಲ್ಲಿ ಅನೈರ್ಮಲ್ಯ ಸ್ಥಿತಿಯಲ್ಲಿ ಆಹಾರವನ್ನು ತಯಾರಿಸುವುದು, ಅಡುಗೆ ಎಣ್ಣೆಯನ್ನು ಮರುಬಳಕೆ ಮಾಡುವುದು, ವೈದ್ಯಕೀಯ ಫಿಟ್‌ನೆಸ್ ಪ್ರಮಾಣೀಕರಣವಿಲ್ಲದೆ ಸಿಬ್ಬಂದಿಯಿಂದ ಆಹಾರವನ್ನು ನಿರ್ವಹಿಸುವುದು, ತಾಪಮಾನ ನಿಯಂತ್ರಣವಿಲ್ಲದೆ ಲೋಪಗಳು ಮತ್ತು ಕಳಪೆ ಗುಣಮಟ್ಟದ ಪ್ಯಾಕೇಜಿಂಗ್ ವಸ್ತುಗಳ ಬಳಕೆ ಸೇರಿವೆ.

ಅಧಿಕೃತ ಪ್ರಕಟಣೆಯ ಪ್ರಕಾರ, ಎಲ್ಲಾ ಸಹಾಯಕ ಆಯುಕ್ತರು, ನಿಯೋಜಿತ ಅಧಿಕಾರಿಗಳು ಮತ್ತು ಆಹಾರ ಸುರಕ್ಷತಾ ಅಧಿಕಾರಿಗಳು ಸಾಂದರ್ಭಿಕ ಡ್ರೈವ್‌ಗಳನ್ನು ಕೈಗೊಳ್ಳುವ ಬದಲು ಅಸ್ತಿತ್ವದಲ್ಲಿರುವ ನಿಯಮಗಳ ನಿರಂತರ ಜಾರಿಯತ್ತ ಗಮನಹರಿಸಬೇಕು ಮತ್ತು ಆಹಾರ ವ್ಯಾಪಾರ ನಿರ್ವಾಹಕರಿಂದ ಕಟ್ಟುನಿಟ್ಟಿನ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಮುಂಢೆ ನಿರ್ದೇಶಿಸಿದ್ದಾರೆ.

ಆಹಾರ ಸುರಕ್ಷತೆಯ ಅವಶ್ಯಕತೆಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ನಿಯಮಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಎಫ್‌ಡಿಎ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕ್ಲೌಡ್ ಕಿಚನ್‌ಗಳು ಮತ್ತು ಇತರ ಆಹಾರ ಸೇವಾ ಸಂಸ್ಥೆಗಳೊಂದಿಗೆ ಸಭೆಗಳನ್ನು ಸಹ ಆಯೋಜಿಸುತ್ತದೆ.

ಆಯುಕ್ತರು ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ತಿನಿಸುಗಳು, ಧಾಬಾಗಳು, ಕ್ಯಾಂಟೀನ್‌ಗಳು, ಕೆಫೆಟೇರಿಯಾಗಳು, ತ್ವರಿತ-ಸೇವಾ ರೆಸ್ಟೋರೆಂಟ್‌ಗಳು, ಔತಣಕೂಟ ಸಭಾಂಗಣಗಳು, ಅಡುಗೆ ಘಟಕಗಳು, ಸಿಹಿ ಅಂಗಡಿಗಳು, ಬೇಕರಿಗಳು, ಆಹಾರ ನ್ಯಾಯಾಲಯಗಳು, ಜ್ಯೂಸ್ ಬಾರ್‌ಗಳು, ಹಿಮ ಅಂಗಡಿಗಳು, ಸರಪಳಿ ರೆಸ್ಟೋರೆಂಟ್‌ಗಳು, ಹಾಗೆಯೇ ಇ-ಕಾಮರ್ಸ್ ಮತ್ತು ಆನ್‌ಲೈನ್ ಆಹಾರ ಸಂಗ್ರಾಹಕರಿಗೆ ಅನ್ವಯವಾಗುವ ಸಮಗ್ರ ಆಹಾರ ಸುರಕ್ಷತೆ ಅನುಸರಣೆ ಆದೇಶವನ್ನು ಹೊರಡಿಸಿದ್ದಾರೆ.ಈ ಆದೇಶವು ಎಲ್ಲಾ ಆಹಾರ ಸೇವಾ ಸಂಸ್ಥೆಗಳು ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರದ ಅಡಿಯಲ್ಲಿ ಮಾನ್ಯ ಪರವಾನಗಿ ಅಥವಾ ನೋಂದಣಿಯನ್ನು ಹೊಂದಿರಬೇಕು ಮತ್ತು ಅದನ್ನು ಪ್ರಮುಖವಾಗಿ ಪ್ರದರ್ಶಿಸಬೇಕು ಎಂದು ಆದೇಶಿಸುತ್ತದೆ.

ನೈರ್ಮಲ್ಯ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು, ನಿಯಮಿತ ವೈದ್ಯಕೀಯ ಪರೀಕ್ಷೆಗಳು, ಆಹಾರ ನಿರ್ವಾಹಕರ ತರಬೇತಿ, ಸುರಕ್ಷಿತ ಆಹಾರ ನಿರ್ವಹಣಾ ಪದ್ಧತಿಗಳು ಮತ್ತು ಪರವಾನಗಿ ಪಡೆದ ಪೂರೈಕೆದಾರರಿಂದ ಮಾತ್ರ ಕಚ್ಚಾ ವಸ್ತುಗಳನ್ನು ಖರೀದಿಸುವುದು ಸಹ ಅಗತ್ಯವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗ್ರಾಹಕರಿಗೆ ಸುರಕ್ಷಿತ ಕುಡಿಯುವ ನೀರನ್ನು ಉಚಿತವಾಗಿ ಒದಗಿಸುವುದು ಮತ್ತು ಅದರ ಲಭ್ಯತೆಯ ಬಗ್ಗೆ ತಿಳಿಸುವ ಸೂಚನೆಗಳನ್ನು ಪ್ರದರ್ಶಿಸುವುದು ಆಹಾರ ಸಂಸ್ಥೆಗಳಿಗೆ ನಿರ್ದೇಶಿಸಲಾಗಿದೆ. ಈ ಆದೇಶವು ಪತ್ರಿಕೆಗಳ ಅಥವಾ ಮುದ್ರಿತ ಕಾಗದದಲ್ಲಿ ಆಹಾರವನ್ನು ಒದಗಿಸುವುದು ಅಥವಾ ಸುತ್ತುವುದನ್ನು ನಿಷೇಧಿಸುತ್ತದೆ.

ದೊಡ್ಡ ಆಹಾರ ವ್ಯವಹಾರಗಳು ಮತ್ತು ಸರಪಳಿ ರೆಸ್ಟೋರೆಂಟ್‌ಗಳು ಮೆನುಗಳಲ್ಲಿ ಕ್ಯಾಲೊರಿ, ಪೋಷಣೆ ಮತ್ತು ಅಲರ್ಜನ್ ಮಾಹಿತಿಯನ್ನು ಒದಗಿಸಬೇಕಾಗುತ್ತದೆ, ಆದರೆ ವಾರ್ಷಿಕ 50 ಕೋಟಿ ರೂ.ಗಿಂತ ಹೆಚ್ಚಿನ ವಹಿವಾಟು ಹೊಂದಿರುವ ಆಹಾರ ವ್ಯವಹಾರಗಳು ಎಫ್‌ಡಿಎ ಮಾನ್ಯತೆ ಪಡೆದ ಏಜೆನ್ಸಿಗಳ ಮೂಲಕ ವಾರ್ಷಿಕ ಆಹಾರ ಸುರಕ್ಷತಾ ನಿರ್ವಹಣಾ ವ್ಯವಸ್ಥೆಯ ಲೆಕ್ಕಪರಿಶೋಧನೆಗೆ ಒಳಗಾಗಬೇಕು.

ಸುರಕ್ಷಿತ ಆಹಾರವು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಮತ್ತು ಆಹಾರ ಸುರಕ್ಷತಾ ಮಾನದಂಡಗಳ ಅನುಸರಣೆ ಕೇವಲ ಕಾನೂನು ಬಾಧ್ಯತೆಯಲ್ಲ, ಸಾಮಾಜಿಕ ಜವಾಬ್ದಾರಿಯೂ ಆಗಿದೆ ಎಂದು ಮುಂಢೆ ಹೇಳಿದರು.

ಆಹಾರ ಸುರಕ್ಷತಾ ನಿಯಮಗಳ ಉಲ್ಲಂಘನೆಯು ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ, 2006 ರ ಅಡಿಯಲ್ಲಿ ದಂಡ, ವಿಚಾರಣೆ ಮತ್ತು ಪರವಾನಗಿಗಳ ಅಮಾನತು ಅಥವಾ ರದ್ದತಿಗೆ ಕಾರಣವಾಗಬಹುದು ಎಂದು ಎಫ್‌ಡಿಎ ಹೇಳಿದೆ.

ಸಮೀಪಿಸುತ್ತಿರುವ ಸುಂಕದ ಗಡುವು; ಭಾರತ - ಅಮೆರಿಕದಿಂದ ವ್ಯಾಪಾರ ಒಪ್ಪಂದದ ಪ್ರಗತಿ ಪರಿಶೀಲನೆ

ಹೊಸದಿಲ್ಲಿ, ಜೂ.24 - ಭಾರತ ಮತ್ತು ಅಮೆರಿಕ ಎರಡು ದಿನಗಳ ಸಚಿವರ ಮಟ್ಟದ ಸಭೆಯಲ್ಲಿ ಮಧ್ಯಂತರ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಪ್ರಗತಿಯನ್ನು ಪರಿಶೀಲಿಸಿದ ಜತೆಗೆ ಮಾರುಕಟ್ಟೆ ಪ್ರವೇಶ, ಡಿಜಿಟಲ್ ವ್ಯಾಪಾರ ಮತ್ತು ಸುಂಕ ರಹಿತ ಅಡೆತಡೆಗಳನ್ನು ಸೇರಿದಂತೆ ಸಮಸ್ಯೆಗಳ ಕುರಿತು ಚರ್ಚಿಸಿದರೂ,ಮುಂದಿನ ತಿಂಗಳು ನಿಗದಿಪಡಿಸಲಾದ ಪ್ರಮುಖ ಸುಂಕದ ಗಡುವಿಗೆ ಮುಂಚಿತವಾಗಿ ಎಲ್ಲಾ ವ್ಯತ್ಯಾಸಗಳನ್ನು ಪರಿಹರಿಸಲಾಗಿದೆ ಎಂಬ ಯಾವುದೇ ಸೂಚನೆಯನ್ನು ನೀಡಲಿಲ್ಲ.

ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮತ್ತು ಅಮೆರಿಕದ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಅವರು ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ (ಬಿಟಿಎ) ಮೊದಲ ಹಂತದ ಕುರಿತು ಚರ್ಚೆ ನಡೆಸಿದರು, ಈ ವರ್ಷದ ಆರಂಭದಲ್ಲಿ ಎರಡೂ ಕಡೆಯವರು ಒಪ್ಪಂದದ ಚೌಕಟ್ಟಿನ ತಿಳುವಳಿಕೆಯನ್ನು ತಲುಪಿದಾಗಿನಿಂದ ಮಾತುಕತೆ ನಡೆಸುತ್ತಿದ್ದಾರೆ. ಬುಧವಾರ ನಡೆದ ಮಾತುಕತೆಯ ಮುಕ್ತಾಯದ ಸಂದರ್ಭದಲ್ಲಿ ವಾಣಿಜ್ಯ ಸಚಿವಾಲಯವು ಹೇಳಿಕೆಯೊಂದನ್ನು ನೀಡಿ, ವರ್ಧಿತ ಮಾರುಕಟ್ಟೆ ಪ್ರವೇಶ, ಡಿಜಿಟಲ್ ವ್ಯಾಪಾರ, ಪೂರೈಕೆ ಸರಪಳಿ ಸ್ಥಿತಿಸ್ಥಾಪಕತ್ವ, ಸುಂಕ ರಹಿತ ಅಡೆತಡೆಗಳ ಕಡಿತ ಹಾಗೂ ಕಾರ್ಯತಂತ್ರದ ವಲಯಗಳಲ್ಲಿನ ಸಹಕಾರ ಸೇರಿದಂತೆ ಪ್ರಸ್ತಾವಿತ ಒಪ್ಪಂದದ ಪ್ರಮುಖ ಅಂಶಗಳ ಸಮಗ್ರ ಪರಿಶೀಲನೆಯನ್ನು ಇಬ್ಬರು ಸಚಿವರು ನಡೆಸಿದ್ದಾರೆಂದು ತಿಳಿಸಿದೆ.

ಮಧ್ಯಂತರ ಒಪ್ಪಂದವನ್ನು ತೀರ್ಮಾನಿಸುವ ಮಾರ್ಗಗಳ ಕುರಿತು ಎರಡೂ ದೇಶಗಳು ಚರ್ಚಿಸಿವೆ ಮತ್ತು ಸಮತೋಲಿತ ಹಾಗೂ ವಾಣಿಜ್ಯಿಕವಾಗಿ ಅರ್ಥಪೂರ್ಣ ಒಪ್ಪಂದಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿವೆ ಎಂದು ಸಚಿವಾಲಯ ಹೇಳಿದೆ.

ಜೂ.24ರಂದು ತಾತ್ಕಾಲಿಕ 10 ಪ್ರತಿಶತದಷ್ಟು ಅಮೆರಿಕ ಸುಂಕ ಆದೇಶದ ಅವಧಿ ಮುಗಿಯುವ ಮೊದಲು ಮಧ್ಯಂತರ ವ್ಯವಸ್ಥೆಯನ್ನು ಅಂತಿಮಗೊಳಿಸಲು ಹೊಸದಿಲ್ಲಿ ಮತ್ತು ವಾಷಿಂಗ್ಟನ್ ಪ್ರಯತ್ನ ನಡೆಸುತ್ತಿರುವ ಸಮಯದಲ್ಲಿ ಗ್ರೀರ್ ಅವರ ಜೂ.22-24 ರ ಭೇಟಿ ನಡೆದಿದೆ.

'ಗಣನೀಯ' ಪ್ರಗತಿಯನ್ನು ಮಾಡಲಾಗಿದೆ ಎಂದು ಹೇಳಿಕೆಯಲ್ಲಿ ಹೇಳಲಾಗಿದ್ದರೂ, ಬಾಕಿ ಇರುವ ಸಮಸ್ಯೆಗಳನ್ನು ಪರಿಹರಿಸಲಾಗಿದೆಯೇ ಎಂದು ಎರಡೂ ಕಡೆಯವರು ಹೇಳಲಿಲ್ಲ.

'ಸಮಗ್ರ ಬಿಟಿಎ ಕಡೆಗೆ ಒಂದು ಪ್ರಮುಖ ಮೈಲಿಗಲ್ಲಾಗಿ ಮಧ್ಯಂತರ ಒಪ್ಪಂದವನ್ನು ತೀರ್ಮಾನಿಸುವ ಮಾರ್ಗಗಳ ಮೇಲೆ ಚರ್ಚೆಗಳು ಕೇಂದ್ರೀಕರಿಸಿದವು' ಎಂದು ಸಚಿವಾಲಯ ಹೇಳಿದೆ.

ವಿಕಸನಗೊಳ್ಳುತ್ತಿರುವ ಜಾಗತಿಕ ವ್ಯಾಪಾರ ಚಲನಶೀಲತೆಯ ಮಧ್ಯೆ ಭಾರತ-ಅಮೆರಿಕ ಆರ್ಥಿಕ ಪಾಲುದಾರಿಕೆಯ ಹೆಚ್ಚುತ್ತಿರುವ ಮಹತ್ವವನ್ನು ಗುರುತಿಸಿ, ಎರಡೂ ಕಡೆಯವರು ದ್ವಿಪಕ್ಷೀಯ ವ್ಯಾಪಾರವನ್ನು ವಿಸ್ತರಿಸುವ, ನಾವೀನ್ಯತೆಯನ್ನು ಬೆಳೆಸುವ ಮತ್ತು ವಿಶ್ವಾಸಾರ್ಹ ಪೂರೈಕೆ ಸರಪಳಿಗಳನ್ನು ನಿರ್ಮಿಸುವ ತಮ್ಮ ಹಂಚಿಕೆಯ ಗುರಿಯನ್ನು ಪುನರುಚ್ಚರಿಸಿದರು ಎಂದು ಅದು ತಿಳಿಸಿದೆ.

ಪಾಕಿಸ್ತಾನ ವಾಯು ಪ್ರದೇಶಕ್ಕೆ ಏರ್ ಇಂಡಿಯಾ ವಿಮಾನ ಎಂಟ್ರಿ; ತನಿಖೆ ಕೈಗೆತ್ತಿಕೊಂಡ ಕೇಂದ್ರ

ಹೊಸದಿಲ್ಲಿ, ಜೂ. 24 - ಜೂನ್ 22ರಂದು ಏರ್ ಇಂಡಿಯಾ ವಿಮಾನ ಪಾಕಿಸ್ತಾನದ ವಾಯು ಪ್ರದೇಶವನ್ನು ಪ್ರವೇಶಿಸಿ ಸ್ವಲ್ಪ ಹೊತ್ತು ಅಲ್ಲೇ ಇದ್ದು ಮರಳಿದೆ ಎಂದು ಅಧಿಕಾರಿಗಳು ತಿಳಿಸಿದ್ದು, ಈ ಬಗ್ಗೆ ತನಿಖೆ ಕೈಗೆತ್ತಿಕೊಳ್ಳಲಾಗಿದೆ. ದಿಲ್ಲಿಯಿಂದ ಪಂಜಾಬ್‌ನ ಅಮೃತಸರಕ್ಕೆ ಹೊರಟಿದ್ದ ವಿಮಾನ ಪಾಕಿಸ್ತಾನದ ವಾಯು ಪ್ರದೇಶದಲ್ಲಿ ಪ್ರವೇಶಿಸಿದ್ದು ಏಕೆ ಎನ್ನುವ ಬಗ್ಗೆ ಪ್ರಶ್ನೆ ಕಾಡುತ್ತಿದ್ದು, ಉತ್ತರ ಕಂಡುಕೊಳ್ಳಲು ಅಧಿಕಾರಿಗಳು ಮುಂದಾಗಿದ್ದಾರೆ. ಈ ಬಗ್ಗೆ ಏರ್ ಇಂಡಿಯಾ ಮಾಹಿತಿ ನೀಡಿದೆ.

ಎಐ479 ವಿಮಾನವು ಜೂ.22ರಂದು ಪಾಕಿಸ್ತಾನದ ವಾಯು ಪ್ರದೇಶವನ್ನು ಪ್ರವೇಶಿಸಿದೆ ಎಂದು ಏರ್‌ಇಂಡಿಯಾ ಹೇಳಿಕೆಯೊಂದರಲ್ಲಿ ತಿಳಿಸಿದೆ. ಜೂ.22ರಂದು ದಿಲ್ಲಿಯಿಂದ ಅಮೃತಸರಕ್ಕೆ ಹೊರಟ ಎಐ79 ವಿಮಾನ ಕೊಂಚ ಹೊತ್ತು ಪಾಕಿಸ್ತಾನದ ವಾಯು ಪ್ರದೇಶದಲ್ಲಿತ್ತು. ಬಳಿಕ ಸುರಕ್ಷಿತವಾಗಿ ಭಾರತದಲ್ಲಿ ಲ್ಯಾಂಡ್ ಆಗಿದೆ ಎಂದು ಏರ್ ಇಂಡಿಯಾ ಅಧಿಕಾರಿಗಳು ಹೇಳಿದ್ದಾರೆ.

ಘಟನೆಯನ್ನು ಸಂಬಂಧಿತ ನಿಯಂತ್ರಕ ಅಧಿಕಾರಿಗಳಿಗೆ ವರದಿ ಮಾಡಲಾಗಿದೆ ಮತ್ತು ಆಂತರಿಕವಾಗಿ ತನಿಖೆ ನಡೆಸಲಾಗುತ್ತಿದೆ ಎಂದು ಏರ್‌ಇಂಡಿಯಾ ತಿಳಿಸಿದೆ. ಘಟನೆಯನ್ನು ನಿಯಂತ್ರಕ ಅಧಿಕಾರಿಗಳಿಗೆ ವರದಿ ಮಾಡಲಾಗಿದೆ ಮತ್ತು ಆಂತರಿಕವಾಗಿ ತನಿಖೆ ನಡೆಸಲಾಗುತ್ತಿದೆ. ಏರ್‌ಇಂಡಿಯಾ ವಿಮಾನದಲ್ಲಿ ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆಯೇ ಮೊದಲ ಆದ್ಯತೆ ಎಂದು ಅದಿಕಾರಿಗಳು ಪುನರುಚ್ಚರಿಸಿದ್ದಾರೆ. ವಾಯು ಪ್ರದೇಶ ಉಲ್ಲಂಘನೆಗೆ ಕಾರಣವಾದ ಸಂದರ್ಭಗಳ ಕುರಿತು ಏರ್‌ಇಂಡಿಯಾ ಹೆಚ್ಚಿನ ವಿವರ ಬಹಿರಂಗಪಡಿಸಿಲ್ಲ. ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ.

ಯುವಕನ ಬರ್ಬರವಾಗಿ ಇರಿದು ಕೊಲೆ; ಆರೋಪಿ ಕುರ್ಲಾದಲ್ಲಿ ಸೆರೆ

ಮೊದಲ ಪುಟದಿಂದ

ಇರಿತದಿಂದ ಲೋಹರ್ ಗಂಭೀರ ಗಾಯಗೊಂಡು ರಕ್ತಸ್ರಾವವಾಗಲಾರಂಭಿಸಿದಾಗ ಆರೋಪಿ ರೋಶನ್ ಬೊರಿವಲಿ ನಿಲ್ದಾಣದಲ್ಲಿ ರೈಲು ನಿಲ್ಲುವ ಮೊದಲೇ ರೈಲಿನಿಂದ ಹಾರಿ ಪರಾರಿಯಾದ.ರೈಲು ರಾತ್ರಿ 11.04 ಕ್ಕೆ ಬೊರಿವಲಿ ನಿಲ್ದಾಣವನ್ನು ತಲುಪಿದಾಗ ಜಿಆರ್‌ಪಿ ಮತ್ತು ಆರ್‌ಪಿಎಫ್ ಸಿಬ್ಬಂದಿಗಳು ಮೂರು ನಿಮಿಷಗಳಲ್ಲಿ ಬೋಗಿಯನ್ನು ಪ್ರವೇಶಿಸಿ ಸ್ಟ್ರೆಚರ್ ಸಜ್ಜುಗೊಳಿಸಿದರು.ಜಿಆರ್‌ಪಿ ಮತ್ತು ಆರ್‌ಪಿಎಫ್ ಸಿಬ್ಬಂದಿಗಳ ಸಹಾಯದಿಂದ ಲೋಹರ್‌ನನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.ವೈದ್ಯಕೀಯ ಸಲಹೆಯ ಮೇರೆಗೆ ರೈಲ್ವೆ ಅಧಿಕಾರಿಗಳು ಆತನನ್ನು ರಾತ್ರಿ 11.42ಕ್ಕೆ ಆಂಬ್ಯುಲೆನ್ಸ್ ಮೂಲಕ ಕಾಂದಿವಲಿಯ ಶತಾಬ್ದಿ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ವೈದ್ಯರು ಆತ ಸಾವನ್ನಪ್ಪಿದ ಬಗ್ಗೆ ಘೋಷಿಸಿದರು. ಲೋಹರ್ ವಿರಾರ್ ನಿವಾಸಿಯಾಗಿರುವ ಬಗ್ಗೆ ತಿಳಿದುಬಂದಿದ್ದು,ಆತನ ಸಾವಿಗೆ ಕುಟುಂಬ ಆಘಾತ ವ್ಯಕ್ತಪಡಿಸಿದೆ.ಲೋಹರ್‌ಗೆ ನ್ಯಾಯ ಸಿಗಬೇಕು ಮತ್ತು ಆರೋಪಿಯನ್ನು ಗಲ್ಲಿಗೇರಿಸಬೇಕು ಎಂದು ಕುಟುಂಬ ಒತ್ತಾಯಿಸಿದೆ. ರೈಲ್ವೆ ಆಡಳಿತವು ಸಿಸಿಟಿವಿ ದೃಶ್ಯಾವಳಿಗಳು ಮತ್ತು ಇತರ ಪುರಾವೆಗಳನ್ನು ಪಡೆದುಕೊಂಡು ಪ್ರಕರಣವನ್ನು ತನಿಖಾ ಸಂಸ್ಥೆಗಳಿಗೆ ಹಸ್ತಾಂತರಿಸಿತು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಮುಂಬಯಿ ಸೆಂಟ್ರಲ್) ಮತ್ತು ಹಿರಿಯ ವಿಭಾಗೀಯ ಭದ್ರತಾ ಆಯುಕ್ತರು ಸೇರಿದಂತೆ ಹಿರಿಯ ರೈಲ್ವೆ ಅಧಿಕಾರಿಗಳು ಬೆಳಿಗ್ಗೆ 1 ಗಂಟೆ ಸುಮಾರಿಗೆ ಬೊರಿವಲಿ ನಿಲ್ದಾಣಕ್ಕೆ ಭೇಟಿ ನೀಡಿ ಘಟನೆಯನ್ನು ಪರಿಶೀಲಿಸಿದರು. ಇರಿತಕ್ಕೆ ಬಳಸಲಾದ ಆಯುಧ ಮತ್ತು ಘಟನೆಗೆ ಕಾರಣವಾದ ಸಂದರ್ಭಗಳನ್ನು ಪರಿಶೀಲಿಸುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ತೀವ್ರ ಶೋಧ ಕಾರ್ಯದ ಬಳಿಕ ಆರೋಪಿ ಸಚಿನ್ ಸುವರ್ಣನನ್ನು ಕುರ್ಲಾದಿಂದ ವಶಕ್ಕೆ ಪಡೆಯಲಾಗಿದೆ.ಈ ಪ್ರಕರಣದಲ್ಲಿ ಆರೋಪಿಯನ್ನು ವಿಚಾರಣೆ ನಡೆಸಲಾಗುವುದು ಮತ್ತು ಈ ಕೊಲೆಯ ಹಿಂದಿನ ನಿಜವಾದ ಕಾರಣವನ್ನು ತನಿಖೆ ಮಾಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.ಪ್ರಸ್ತುತ, ರೈಲ್ವೆ ಪೊಲೀಸರು ಆರೋಪಿ ಸಚಿನ್‌ನನ್ನು ಬೊರಿವಲಿ ಜಿಆರ್‌ಪಿ ಠಾಣೆಗೆ ಕರೆತಂದಿದ್ದು,ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಳ್ಳುವರು.

ಆರೋಪಿಯನ್ನು ಗುರುತಿಸಿದ ಬಳಿಕ ರೈಲ್ವೆ ಪೊಲೀಸರು ಆತನನ್ನು ಪತ್ತೆಹಚ್ಚಲು 7 ತಂಡಗಳನ್ನು ಕಳುಹಿಸಿದ್ದರು. ಪೊಲೀಸರು ಸಿಸಿಟಿವಿ ಮೂಲಕ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾದರು.ಸುಮಾರು 400 ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಸ್ಕ್ಯಾನ್ ಮಾಡುವುದು ಒಳಗೊಂಡಂತೆ ಬೃಹತ್ ಮಾನವ ಬೇಟೆಯ ಗಂಟೆಗಳ ಬಳಿಕ ಆತನನ್ನು ಬಂಧಿಸಲಾಯಿತು.

ಬೊರಿವಲಿ, ಅಂಧೇರಿ, ಮೀರಾರೋಡ್ ಮತ್ತು ನಾಲಸೋಪಾರ ರೈಲು ನಿಲ್ದಾಣಗಳು ಮತ್ತು ನಗರದ ಪಕ್ಕದ ಪ್ರವೇಶ-ನಿರ್ಗಮನ ಸ್ಥಳಗಳಲ್ಲಿ ಅಳವಡಿಸಲಾದ 400 ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ತಂಡಗಳು ಸ್ಕ್ಯಾನ್ ಮಾಡಿವೆ ಎಂದು ಅವರು ತಿಳಿಸಿದ್ದಾರೆ. ತಾಂತ್ರಿಕ ಗುಪ್ತಚರ ಮತ್ತು ಇತರ ಮಾಹಿತಿಗಳ ಸಹಾಯದಿಂದ, ದಾಳಿಕೋರನನ್ನು ಸಿಸಿಟಿವಿ ದೃಶ್ಯಗಳಿಂದ ಗುರುತಿಸಲಾಗಿದೆ ಎಂದು ಹಿರಿಯ ರೈಲ್ವೆ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆರೋಪಿಯು ಮುಂಬಯಿ ವಿಮಾನ ನಿಲ್ದಾಣದ ಸಹಾರ್ ಕಾರ್ಗೋ ಸಂಕೀರ್ಣದಲ್ಲಿ ಕೆಲಸ ಮಾಡುತ್ತಿದ್ದು,ಮೀರಾರೋಡ್ ನಿವಾಸಿಯಾಗಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಅಪರಾಧಕ್ಕೆ ಬಳಸಲಾದ ಆಯುಧವನ್ನು ಇನ್ನೂ ವಶಪಡಿಸಿಕೊಳ್ಳಲಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ಕೊಲೆ ಬಳಿಕ ಸಚಿನ್ ಮನೆಗೆ ಹೋಗಿ,ಲೋಕಲ್ ರೈಲಿನಲ್ಲಿ ತನಗೆ ಜಗಳವಾಗಿದೆ ಎಂದು ತಂದೆಗೆ ತಿಳಿಸಿದ್ದ. ಮಂಗಳವಾರ ಮಧ್ಯರಾತ್ರಿಯ ಸುಮಾರಿಗೆ, ಬಂಧನದ ಭಯದಿಂದ ಆತ ತನ್ನ ಮನೆಯಿಂದ ಹೊರಟು ಮುಂಬಯಿ ಬಿಡಲು ಯೋಜಿಸಿದ್ದ ಎಂದು ಹೇಳಿದ್ದಾರೆ.

ಲೋಹರ್ ಫೈನಾನ್ಸ್ ಮಾರ್ಕೆಟಿಂಗ್ ಅಧ್ಯಯನ ಮಾಡಿದ್ದು,ಕಳೆದ 9 ತಿಂಗಳಿನಿಂದ ಚಕಾಲದಲ್ಲಿ ಕೆಲಸ ಮಾಡುತ್ತಿದ್ದರು. ಇದಕ್ಕಾಗಿ ಆತ ಪ್ರತಿದಿನ ವಿರಾರ್‌ನಿಂದ ಅಂಧೇರಿಗೆ ಪ್ರಯಾಣಿಸುತ್ತಿದ್ದರು. ಲೋಹರ್ ಕುಟುಂಬ ಮೂಲತಃ ನೇಪಾಳದವರಾಗಿದ್ದರೂ,ಅವರು ತುಂಬಾ ಸಮಯದಿಂದ ಮುಂಬಯಿಯಲ್ಲಿ ನೆಲೆಸಿರುವ ಬಗ್ಗೆ ತಿಳಿದುಬಂದಿದೆ.ಲೋಹರ್ ಕುಟುಂಬವು ಆರಂಭದಲ್ಲಿ ಅಂಧೇರಿಯಲ್ಲಿ ವಾಸಿಸುತ್ತಿತ್ತು,ಆದರೆ ಅವರ ಮನೆಯಿದ್ದ ಬಿಲ್ಡಿಂಗ್ ಮರುಅಭಿವೃದ್ಧಿಗಾಗಿ ನೀಡಲಾದ ಕಾರಣ ಅವರು ಕಳೆದ 5 ವರ್ಷಗಳಿಂದ ವಿರಾರ್ ಪೂರ್ವದ ಬೋಯಿರ್‌ಪಾಡದ ಸುರಮ್ ಪಾರ್ಕ್‌ನಲ್ಲಿರುವ ಅಮರನಾಥ್ ಬಿಲ್ಡಿಂಗ್‌ನ ಮೂರನೇ ಮಹಡಿಯಲ್ಲಿ ವಾಸಿಸುತ್ತಿದ್ದಾರೆ.

ಮೃತ ಲೋಹರ್‌ಗೆ ಒಬ್ಬ ಸಹೋದರಿ ಮತ್ತು ಇಬ್ಬರು ಸಹೋದರರಿರುವ ಬಗ್ಗೆ ತಿಳಿದುಬಂದಿದೆ. ಈ ವರ್ಷ ಪಶ್ಚಿಮ ರೈಲ್ವೆ ಉಪನಗರ ಜಾಲದಲ್ಲಿ ವರದಿಯಾದ ಎರಡನೇ ಇರಿತದ ಘಟನೆ ಇದಾಗಿದೆ. ಕಳೆದ ಫೆಬ್ರವರಿಯಲ್ಲಿ ವಿಲೇಪಾರ್ಲೆ ಕಾಲೇಜಿನಲ್ಲಿ 32 ವರ್ಷದ ಉಪನ್ಯಾಸಕರಾಗಿದ್ದ ಅಲೋಕ್ ಸಿಂಗ್ ಅವರನ್ನು ಮಲಾಡ್ ನಿಲ್ದಾಣದಲ್ಲಿ ರೈಲಿನಿಂದ ಇಳಿಯಲು ಪ್ರಯತ್ನಿಸುವಾಗ ನಡೆದ ವಾಗ್ವಾದದ ಸಮಯ ಇರಿದು ಹತ್ಯೆ ಮಾಡಲಾಗಿತ್ತು.ಆ ಪ್ರಕರಣದಲ್ಲಿ ಪೊಲೀಸರು ಆರೋಪಿ ಓಂಕಾರ್ ಶಿಂಧೆ ಎಂಬ ಆರೋಪಿಯನ್ನು ಬಂಧಿಸಿದ್ದರು.

ಬಿಹಾರ : ಪತ್ನಿ, 3 ಮಕ್ಕಳನ್ನು ಕಾಲುವೆಗೆ ಎಸೆದ ವ್ಯಕ್ತಿಯ ಬಂಧನ

ಬೆಟ್ಟಿಯ್ಯ, ಜೂ. 24- ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯಲ್ಲಿ ಪತ್ನಿ ಮತ್ತು ಮೂವರು ಮಕ್ಕಳನ್ನು ಕಾಲುವೆಯೊಂದಕ್ಕೆ ಎಸೆದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪತ್ನಿ ಮತ್ತು ಮಕ್ಕಳ ಜತೆಯಲ್ಲಿ ಪತ್ನಿಯ ತವರು ಮನೆಗೆ ಹೋಗುತ್ತಿದ್ದಾಗ ಗಂಡ ಹೆಂಡತಿ ನಡುವೆ ಜಗಳ ನಡೆದಿದ್ದು, ಕೆರಳಿದ ರಾಮ ಬಾಬು ಯಾದವ್ ಆತನ ಪತ್ನಿ ಮತ್ತು ಮೂವರು ಮಕ್ಕಳನ್ನು ತುಂಬಿ ಹರಿಯುತ್ತಿದ್ದ ಕಾಲುವೆಗೆ ತಳ್ಳಿದ್ದ ಎಂದು ಪೊಲೀಸ್ ಅಧಿಕಾರಿ ಅಜಿತ್‌ಕುಮಾರ್ ತಿಳಿಸಿದ್ದಾರೆ.

ಮಂಗಳವಾರ ಮುಂಜಾನೆ ಗಂಟೆ 4ರ ವೇಳೆಗೆ ಘಟನೆ ನಡೆದಿದ್ದು, ಯಾದವ್ ಪತ್ನಿ ಈಜಿ ದಡ ಸೇರಿ ನೀರಿನಿಂದ ಪಾರಾದರೆ ಮೂವರು ಮಕ್ಕಳು ನೀರಲ್ಲಿ ಮುಳುಗಿ ಮೃತಪಟ್ಟಿರುವುದಾಗಿ ಅಧಿಕಾರಿ ಹೇಳಿದ್ದಾರೆ.

ಒಂದು ಮಗುವಿನ ಮೃತದೇಹ ಮಂಗಳವಾರ ಬೆಳಿಗ್ಗೆ ಪತ್ತೆಯಾದರೆ ಮತ್ತಿಬ್ಬರ ಮೃತದೇಹಗಳನ್ನು ಮಂಗಳವಾರ ಮಧ್ಯಾಹ್ನ ವೇಳೆಗೆ ಕಾಲುವೆಯಿಂದ ಮೇಲೆತ್ತಲಾಗಿದೆ ಎಂದು ತಿಳಿಸಿರುವ ಅಧಿಕಾರಿ, ಯಾದವ್‌ನನ್ನು ಬಂಧಿಸಲಾಗಿದ್ದು ಆತನ ಪತ್ನಿ ನೀಡಿದ ದೂರಿನಂತೆ ಪ್ರಕರಣ ದಾಖಲಿಸಿರುವುದಾಗಿ ಹೇಳಿದ್ದಾರೆ.

ಖಮೇನಿ ಅಂತ್ಯಕ್ರಿಯೆ: ಪ್ರಧಾನಿ ಮೋದಿಗೆ ಇರಾನ್ ಆಹ್ವಾನ

ಹೊಸದಿಲ್ಲಿ, ಜೂ. 24 - ಅಮೆರಿಕ ನಡೆಸಿದ ದಾಳಿಯಲ್ಲಿ ಹತರಾದ ಆಗಿನ ಇರಾನ್‌ನ ಪರಮೋಚ್ಚ ನಾಯಕ, ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಸಂಸ್ಕಾರದ ವಿಧಿವಿಧಾನಗಳು ಜುಲೈ 5 ರಿಂದ 9ರವರೆಗೆ ನಡೆಯಲಿದ್ದು, ಇರಾನ್ ಅಧ್ಯಕ್ಷ ಮಸೂದ್ ಪಜೆಶ್ಕಿಯಾನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಆಹ್ವಾನಿಸಿದ್ದಾರೆ ಎಂದು ರಾಜತಾಂತ್ರಿಕ ಮೂಲಗಳು ಹೇಳಿವೆ.

ಆದರೆ, ಪ್ರಧಾನಿ ಮೋದಿ ಅವರಿಗೆ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲು ಆಹ್ವಾನ ಬಂದಿರುವುದನ್ನು ಪ್ರಧಾನಿ ಕಚೇರಿ ಅಧಿಕೃತವಾಗಿ ಪ್ರಕಟಿಸಿಲ್ಲ.

ಇಸ್ರೇಲ್ ಮತ್ತು ಅಮೆರಿಕ ಪಡೆಗಳು ಫೆಬ್ರುವರಿ 28ರಂದು ಟೆಹರಾನ್ ಮೇಲೆ ನಡೆಸಿದ ವೈಮಾನಿಕ ದಾಳಿಯಲ್ಲಿ ಖಮೇನಿ ಹತರಾಗಿದ್ದರು. ಇದರ ಬೆನ್ನಲ್ಲೇ ಪಶ್ಚಿಮ ಏಷ್ಯಾ ಸಂಘರ್ಷ ತೀವ್ರಗೊಂಡಿದ್ದರಿಂದ ಅವರ ಅಂತ್ಯಕ್ರಿಯೆಯನ್ನು ಮುಂದೂಡಲಾಗಿತ್ತು. ಆಯತೊಲ್ಲಾ ಅಲಿ ಖಮೇನಿ ಸ್ಥಾನಕ್ಕೆ ಅವರ ಪುತ್ರ ಮೊಜ್ತಬಾ ಖಮೇನಿ (56) ಮಾರ್ಚ್‌ನಲ್ಲಿ ನೇಮಕಗೊಂಡಿದ್ದರು.

ಟೆಹರಾನ್ ಮತ್ತು ಕೋಮ್ ನಗರದಲ್ಲಿ ಜುಲೈ 5, 6 ಮತ್ತು 7ರಂದು ಅಂತ್ಯಕ್ರಿಯೆಯ ವಿಧಿಗಳು ನಡೆಯಲಿವೆ. ಖಮೇನಿ ಅವರ ತವರು ಮಶಾದ್‌ನಲ್ಲಿ ಜುಲೈ 9ರಂದು ಅಂತ್ಯಕ್ರಿಯೆ ನಡೆಯಲಿದೆ.

ಪಿಎಂಎಲ್‌ಎ ಪ್ರಕರಣ: ಸಚಿವ ಸತೀಶ್ ಜಾರಕಿಹೊಳಿ ಬಾವ ಮೈದುನನ ನಿವಾಸ ಸಹಿತ ಹಲವು ಸ್ಥಳಗಳ ಮೇಲೆ ಇಡಿ ದಾಳಿ

ಬೆಂಗಳೂರು, ಜೂನ್ 24 - ರಾಜ್ಯ ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಹಣ ವರ್ಗಾವಣೆ ತನಿಖೆಯ ಭಾಗವಾಗಿ, ಕರ್ನಾಟಕ ಪಿಡಬ್ಲ್ಯೂಡಿ ಸಚಿವ ಸತೀಶ್ ಜಾರಕಿಹೊಳಿ ಅವರ ಬಾವ ಮೈದುನ ವೈ. ಮಂಜುನಾಥ್ ಅವರ ನಿವಾಸ ಸೇರಿದಂತೆ ಕರ್ನಾಟಕದ ಹಲವು ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯ ಬುಧವಾರ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಜುನಾಥ್ ಅಬಕಾರಿ ಇಲಾಖೆಯಲ್ಲಿ ಹೆಚ್ಚುವರಿ ಆಯುಕ್ತ ಶ್ರೇಣಿಯ ಅಧಿಕಾರಿಯಾಗಿದ್ದಾರೆ. ಸಿಆರ್‌ಪಿಎಫ್‌ನ ಭದ್ರತಾ ಬೆಂಗಾವಲು ಜೊತೆಗೆ ಬೆಳಗಾವಿ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಸುಮಾರು 18 ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೋಧನೆಗೊಳಗಾದ ಸ್ಥಳಗಳಲ್ಲಿ ಉಪ ಆಯುಕ್ತ ಶ್ರೇಣಿಯ ಅಧಿಕಾರಿ ಮತ್ತು ಇತರ ಕೆಲವು ಇಲಾಖೆ ಸಿಬ್ಬಂದಿ ಸೇರಿದ್ದಾರೆ ಎಂದು ಅವರು ಹೇಳಿದರು. ಲೋಕಾಯುಕ್ತ ಪೊಲೀಸರ ಎಫ್‌ಐಆರ್‌ಅನ್ನು ಗಮನದಲ್ಲಿಟ್ಟುಕೊಂಡು ಇಡಿ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿದೆ ಎಂದು ಅವರು ತಿಳಿಸಿದರು.

ಮಂಜುನಾಥ್ ಬಳ್ಳಾರಿಯ ಮಾಜಿ ಸಂಸದ ವೈ. ದೇವೇಂದ್ರಪ್ಪ ಅವರ ಪುತ್ರ. ಅವರ ಪತ್ನಿ ಸತೀಶ್ ಜಾರಕಿಹೊಳಿ ಮತ್ತು ಬಿಜೆಪಿ ಶಾಸಕರಾದ ರಮೇಶ್ ಹಾಗೂ ಬಾಲಚಂದ್ರ ಜಾರಕಿಹೊಳಿ ಅವರ ಸಹೋದರಿ.

ಸ್ಮಾರ್ಟ್ ವಿದ್ಯುತ್ ಮೀಟರ್‌ಗಳ ವಿರುದ್ಧ ಅದಾನಿ ಸಂಸ್ಥೆಗೆ 'ಅನಧಿಕೃತ' ಪತ್ರ; ಮಹಾರಾಷ್ಟ್ರ ಡಿಸ್ಕಾಂ ಇಂಜಿನಿಯರ್ ಅಮಾನತು

ಥಾಣೆ, ಜೂ. 24 - ಸ್ಮಾರ್ಟ್ ವಿದ್ಯುತ್ ಮೀಟರ್‌ಗಳ ಅಳವಡಿಕೆಯನ್ನು ವಿರೋಧಿಸಿ ಅದಾನಿ ಎನರ್ಜಿ ಸೊಲ್ಯೂಷನ್ಸ್‌ಗೆ 'ಅನಧಿಕೃತ' ಪತ್ರ ಕಳುಹಿಸಿದ್ದಕ್ಕಾಗಿ ಮಹಾರಾಷ್ಟ್ರ ರಾಜ್ಯ ವಿದ್ಯುತ್ ವಿತರಣಾ ಕಂಪನಿಯು ಹಿರಿಯ ಇಂಜಿನಿಯರ್‌ನನ್ನು ಅಮಾನತುಗೊಳಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಎರಡು ದಿನಗಳ ಹಿಂದೆ ಕಳುಹಿಸಲಾದ ಪತ್ರದಲ್ಲಿ, ಪೂರ್ವಾನುಮತಿ ಪಡೆಯದೆ ಗೃಹಬಳಕೆಯ ಗ್ರಾಹಕರ ಅಸ್ತಿತ್ವದಲ್ಲಿರುವ ವಿದ್ಯುತ್ ಮೀಟರ್‌ಗಳನ್ನು ಸ್ಮಾರ್ಟ್ ಮೀಟರ್‌ಗಳೊಂದಿಗೆ ಬದಲಾಯಿಸಿದರೆ ಯಾವುದೇ ಸಂಭಾವ್ಯ ಸಾರ್ವಜನಿಕ ಆಕ್ರೋಶ, ವಿವಾದಗಳು ಅಥವಾ ಗ್ರಾಹಕರ ಆಂದೋಲನಗಳಿಗೆ ಕಂಪನಿಯು ಜವಾಬ್ದಾರವಾಗಿರುತ್ತದೆ ಎಂದು ಹೇಳಲಾಗಿದೆ.

ಪಾಲ್ಘರ್ ವೃತ್ತ ಕಚೇರಿಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಮದನ್ ಸಾಂಗ್ಲೆ ಅವರನ್ನು ಅಮಾನತುಗೊಳಿಸಲು ಔಪಚಾರಿಕ ಆದೇಶವನ್ನು ಮಹಾವಿತರಣ್ ಅವರ ಕೊಂಕಣ ಪ್ರಾದೇಶಿಕ ಕಚೇರಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕರು ಹೊರಡಿಸಿದ್ದಾರೆ.

ಸಾಂಗ್ಲೆ ಶಿಷ್ಟಾಚಾರವನ್ನು ಉಲ್ಲಂಘಿಸಿ ಹಿರಿಯ ಅಧಿಕಾರಿಗಳಿಂದ ಅನುಮತಿ ಅಥವಾ ಪೂರ್ವಾನುಮತಿ ಇಲ್ಲದೆ ನೇರವಾಗಿ ಕಂಪನಿಗೆ ಪತ್ರವನ್ನು ಕಳುಹಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಹಾವಿತರಣ್‌ನ ಉನ್ನತ ಆಡಳಿತವು ಸಂವಹನವನ್ನು ಕಠಿಣವಾಗಿ ಪರಿಗಣಿಸಿದೆ, ಇದು ಅಶಿಸ್ತಿನ ಕ್ರಿಯೆ ಮತ್ತು ಆಡಳಿತಾತ್ಮಕ ಶ್ರೇಣಿಯ ನೇರ ಉಲ್ಲಂಘನೆ ಎಂದು ಬಣ್ಣಿಸಿದೆ.

ಸ್ವತಂತ್ರವಾಗಿ ವ್ಯತಿರಿಕ್ತ ನಿಲುವು ತೆಗೆದುಕೊಂಡು ಅದನ್ನು ತನ್ನ ಮೇಲಧಿಕಾರಿಗಳಿಗೆ ತಿಳಿಸದೆ ಬಾಹ್ಯ ಘಟಕಕ್ಕೆ ತಿಳಿಸುವ ಮೂಲಕ, ಸಾಂಗ್ಲೆ ಅವರು ಉಪಯುಕ್ತತೆಯ ಅಧಿಕೃತ ಆದೇಶಕ್ಕೆ ವಿರುದ್ಧವಾಗಿ ವರ್ತಿಸಿದ್ದಾರೆ ಎಂದು ಪರಿಗಣಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸ್ಮಾರ್ಟ್ ಮೀಟರ್‌ಗಳ ಅನುಷ್ಠಾನವು ಎಂಎಸ್‌ಇಡಿಸಿಎಲ್ ಮುಖ್ಯ ಕಚೇರಿಯಿಂದ ಕೇಂದ್ರ ವಿದ್ಯುತ್ ಪ್ರಾಧಿಕಾರದ (ಸಿಇಎ) ಮಾರ್ಗಸೂಚಿಗಳ ಅಡಿಯಲ್ಲಿ ಹೊರಡಿಸಲಾದ ನೀತಿ ನಿರ್ದೇಶನವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೋಷರಹಿತ ಮೀಟರ್‌ಗಳನ್ನು ಒದಗಿಸಲು ಮೂಲಸೌಕರ್ಯವನ್ನು ನವೀಕರಿಸುವುದು ಮತ್ತು ನಿಖರವಾದ ಬಳಕೆಯ ದಾಖಲೆಗಳನ್ನು ನಿರ್ವಹಿಸುವುದು ಭಾರತೀಯ ವಿದ್ಯುತ್ ಕಾಯ್ದೆ, 2003ರ ಸೆಕ್ಷನ್ 55ರ ಅಡಿಯಲ್ಲಿ ಕಡ್ಡಾಯಗೊಳಿಸಲಾದ ಶಾಸನಬದ್ಧ ಬಾಧ್ಯತೆಗಳಾಗಿವೆ ಎಂದು ಅದು ತಿಳಿಸಿದೆ.

ಮುಸಲಧಾರೆ ಮಳೆ; ತಗ್ಗು ಪ್ರದೇಶ ಜಲಾವೃತ

ಮೊದಲ ಪುಟದಿಂದ

ಬುಧವಾರ ಬೆಳಿಗ್ಗೆ ಗಂಟೆ 8ರಿಂದ ಮುಂಬಯಿ ಮತ್ತು ಉಪನಗರಗಳಲ್ಲಿ ಮಳೆ ಬಹುತೇಕವಾಗಿ ನಿಂತಿದ್ದರಿಂದಾಗಿ ವಾಹನ ಸಂಚಾರ ಮತ್ತು ಉಪನಗರ ರೈಲುಗಳ ಸಂಚಾರ ಸುಗಮವಾಗಿದೆ. ಬುಧವಾರ ಬೆಳಿಗ್ಗೆ ಗಂಟೆ 6ರಿಂದ 7ರ ನಡುವೆ 13 ಮಿಲಿಮೀಟರ್ ಮಳೆಯಾದರೆ ಬೆಳಿಗ್ಗೆ ಗಂಟೆ 8ರಿಂದ ಅಪರಾಹ್ನ 2 ಗಂಟೆ ತನಕ 7 ಮಿಲಿಮೀಟರ್ ಮಳೆಯಾಗಿದೆ ಎಂದು ಬಿಎಂಸಿ ಹೇಳಿದೆ. ಮಂಗಳವಾರ ರಾತ್ರಿ ಗಂಟೆ 10ರಿಂದ ಬುಧವಾರ ಮುಂಜಾನೆ ಗಂಟೆ 5ರ ತನಕ ಧಾರಾಕಾರ ಮಳೆಯಾಗಿದ್ದರಿಂದ ಮುಂಬಯಿ ನಗರ ಮತ್ತು ಉಪನಗರಗಳು ಮತ್ತು ನೆರೆಯ ಜಿಲ್ಲೆಗಳಲ್ಲೂ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿ ಹರಿಯುತ್ತಿತ್ತು.

ಅಂಧೇರಿ ಸಬ್‌ವೇ, ಹಿಂದ್‌ಮಾತಾ, ಕಿಂಗ್ಸ್ ಸರ್ಕಲ್, ಮಾಟುಂಗ ಪ್ರದೇಶಗಳಲ್ಲಿ ಬೆಳಗ್ಗಿನ ಹೊತ್ತು ನೀರು ರಸ್ತೆಗಳಲ್ಲಿ ತುಂಬಿ ಹರಿಯುತ್ತಿದ್ದುದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿ ವಾಹನ ದಟ್ಟಣೆ ಉಂಟಾಗಿತ್ತು. ಸಯನ್, ಕುರ್ಲಾ, ದಾದರ್, ಮಾನ್‌ಖುರ್ದ್, ಮಾಟುಂಗಾ ಮತ್ತು ಇತರ ಕೆಲವೆಡೆ ರೈಲು ಹಳಿಗಳಲ್ಲಿ ನೀರು ತುಂಬಿದ್ದರಿಂದಾಗಿ ರೈಲು ಸಂಚಾರದಲ್ಲಿ ವ್ಯತ್ಯಯವಾಗಿತ್ತು. ಆದರೆ ನೀರು ಅಪಾಯ ಮಟ್ಟಕ್ಕೆ ತಲುಪದೇ ಇದ್ದುದರಿಂದಾಗಿ ರೈಲು ಸಂಚಾರ ಸ್ಥಗಿತ ಆಗಿಲ್ಲ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ಮಧ್ಯ ರೈಲ್ವೆಯಲ್ಲಿ ಬೆಳಗ್ಗಿನ ತುರ್ತು ಅವಧಿಯಲ್ಲಿ ರೈಲು ಸಂಚಾರ ವಿಳಂಬವಾಗಿದ್ದರಿಂದ ಪ್ರಯಾಣಿಕರು ಕಿಕ್ಕಿರಿದು ತುಂಬಿದ್ದರು ಎಂದು ಉಪನಗರ ರೈಲು ಪ್ರಯಾಣಿಕರು ಆಪಾದಿಸಿದ್ದಾರೆ. ತುರ್ಭೆ ಮತ್ತು ಕೋಪರ್‌ಖೈರ್ನೆ ನಿಲ್ದಾಣಗಳ ನಡುವೆ ರೈಲು ಹಳಿಗಳ ಮೇಲೆ ಭಾರೀ ಮಳೆಯಿಂದಾಗಿ ನೀರು ತುಂಬಿ ಹರಿದ ಪರಿಣಾಮವಾಗಿ ಮಧ್ಯ ರೈಲ್ವೆಯ ಥಾಣೆ ಮತ್ತು ವಾಶಿ, ಪನ್ವೇಲ್ ಟ್ರಾನ್ಸ್ ಹಾರ್ಬರ್ ರೈಲು ಮಾರ್ಗದಲ್ಲಿಯೂ ರೈಲು ಸಂಚಾರ ವಿಳಂಬವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರೈಲ್ವೆ ಹಳಿಯಲ್ಲಿ ನೀರು ತುಂಬಿದ್ದರಿಂದಾಗಿ ಥಾಣೆ-ವಾಶಿ ವಿಭಾಗದ ಅಫ್‌ಲೈನನ್ನು ಬೆಳಗ್ಗಿನ ಜಾವ ಗಂಟೆ 5.06ಕ್ಕೆ ಮತ್ತು ಡೌನ್‌ಲೈನನ್ನು ಮುಂಜಾನೆ ಗಂಟೆ 5.50ಕ್ಕೆ ಅಸುರಕ್ಷಿತ ಎಂದು ಘೋಷಿಸಲಾಗಿತ್ತು ಎಂದು ಮಧ್ಯ ರೈಲ್ವೆಯ ವಕ್ತಾರರೊಬ್ಬರು ತಿಳಿಸಿದ್ದಾರೆ.ಬೆಳಿಗ್ಗೆ ಗಂಟೆ 7.27ಕ್ಕೆ ರೈಲುಗಳ ವೇಗದ ಮಿತಿಯನ್ನು ಗಂಟೆಗೆ 10 ಕಿ.ಮೀಗೆ ನಿಗದಿ ಮಾಡಿ ಅಫ್‌ಲೈನ್‌ನಲ್ಲಿ ರೈಲು ಸಂಚಾರಕ್ಕೆ ಅನುವು ಮಾಡಿಕೊಟ್ಟರೆ ಡೌನ್ ಲೈನ್‌ನಲ್ಲಿ ಬೆಳಿಗ್ಗೆ ಗಂಟೆ 7.35ಕ್ಕೆ 30 ಕಿ.ಮೀ. ವೇಗದ ಮಿತಿಯಲ್ಲಿ ರೈಲು ಸಂಚಾರಕ್ಕೆ ಅನುಮತಿ ನೀಡಲಾಗಿತ್ತು ಎಂದು ವಕ್ತಾರ ಹೇಳಿದ್ದಾರೆ.

ಭಾರೀ ಮಳೆಯಿಂದ ಹಳಿಯಲ್ಲಿ ಹೊಂಡ ಬಿದ್ದಿದ್ದು ಅದನ್ನು ದುರುಸ್ತಿ ಮಾಡಲಾಯಿತು ಎಂದು ವಕ್ತಾರ ಹೇಳಿದ್ದಾರೆ. ಬುಧವಾರ ಬೆಳಗ್ಗಿನ ವೇಳೆಗೆ ರಸ್ತೆಗಳಲ್ಲಿ ನೀರು ತುಂಬಿ ಹರಿಯುತ್ತಿದ್ದುದರಿಂದ 24ಕ್ಕೂ ಹೆಚ್ಚು ಬಸ್ಸು ಮಾರ್ಗಗಳ ಬೆಸ್ಟ್ ಬಸ್ಸುಗಳ ಸಂಚಾರವನ್ನು ಬದಲಿ ರಸ್ತೆ ಮೂಲಕ ಪರಿವರ್ತಿಸಲಾಗಿತ್ತು ಎಂದು ಬೆಸ್ಟ್ ವಕ್ತಾರರೊಬ್ಬರು ತಿಳಿಸಿದ್ದಾರೆ. ಕೊಲಬಾ ಹವಾಮಾನ ವೀಕ್ಷಣಾಲಯದಲ್ಲಿ ಜೂನ್ 23ರಂದು ಬೆಳಿಗ್ಗೆ ಗಂಟೆ 8ರಿಂದ ಜೂನ್ 24ರ ಬೆಳಿಗ್ಗೆ ಗಂಟೆ 8ರ ತನಕ 24 ಗಂಟೆಗಳಲ್ಲಿ 248 ಮಿಲಿ ಮೀಟರ್ ಮಳೆ ದಾಖಲಾಗಿರುವುದರಿಂದ ಜೂನ್ ತಿಂಗಳ ಅಂದಾಜು ಶೇಕಡಾ 45ರಷ್ಟು ಮಳೆಯಾದಂತಾಗಿದೆ. ಜೂನ್ ತಿಂಗಳಲ್ಲಿ ಕೊಲಬಾದಲ್ಲಿ ಒಟ್ಟು 542 ಮಿಲಿಮೀಟರ್ ಮಳೆ ದಾಖಲಾಗುತ್ತಿತ್ತು.

ಅದೇ ರೀತಿಯಲ್ಲಿ ಸಾಂತಾಕ್ರೂಜ್‌ನಲ್ಲಿ 225 ಮಿಲಿಮೀಟರ್ ಮಳೆ ದಾಖಲಾಗಿದ್ದು ಜೂನ್ ತಿಂಗಳ ಶೇಕಡಾ 42ರಷ್ಟು ಮಳೆಯಾಗಿದೆ. ಜೂನ್ ತಿಂಗಳಲ್ಲಿ ಸಾಂತಾಕ್ರೂಜ್‌ಕೇಂದ್ರದಲ್ಲಿ 537 ಮಿಲಿಮೀಟರ್ ಮಳೆಯಾಗುತ್ತಿತ್ತು ಎಂದು ಬಿಎಂಸಿ ಹೇಳಿದೆ. ನೆರೆಯ ಥಾಣೆ ಮತ್ತು ಪಾಲ್ಘರ್ ಜಿಲ್ಲೆಗಳಲ್ಲಿಯೂ ಕಳೆದ ರಾತ್ರಿ ಭಾರೀ ಮಳೆಯಾಗಿದೆ. ಮಾಲ್ಶೇಜ್ ಘಾಟಿಯಲ್ಲಿ ಭೂಕುಸಿತ ಉಂಟಾದರೆ ಥಾಣೆ ಜಿಲ್ಲೆಯಲ್ಲಿ 24 ಗಂಟೆಗಳ ಅವಧಿಯಲ್ಲಿ 27 ದೂರುಗಳು ಬಂದಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಥಾಣೆ ಮತ್ತು ಪುಣೆ ಜಿಲ್ಲೆಗಳನ್ನು ಸಂಪರ್ಕಿಸುವ ದುರ್ಗಮ ಮಾಲ್ಶೇಜ್ ಘಾಟ್ ಪ್ರದೇಶದಲ್ಲಿ ಮಂಗಳವಾರ ತಡ ಸಂಜೆ ಸಣ್ಣ ಪ್ರಮಾಣದ ಭೂಕುಸಿತ ಉಂಟಾಗಿದೆ ಎಂದು ಥಾಣೆ ಸ್ಥಾನೀಯ ಜಿಲ್ಲಾಧಿಕಾರಿ ಸಂದೀಪ್ ಮಾನೆ ತಿಳಿಸಿದ್ದಾರೆ. ಮಂಗಳವಾರ ಸಂಜೆ ಗಂಟೆ 6ರಿಂದ 7ರ ನಡುವೆ ಘಾಟಿಯ ''ವಾಶ್ ಪಾಯಿಂಟ್'' ಮತ್ತು ''ಅಂಬ್ರಲ್ಲಾ ಪಾಯಿಂಟ್'' ನಡುವೆ ಭೂಕುಸಿತ ಉಂಟಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿಗಳು ಹೇಳಿದ್ದಾರೆ. ತಕ್ಷಣವೇ ಜೆಸಿಬಿಗಳನ್ನು ಬಳಸಿ ರಸ್ತೆಗೆ ಬಿದ್ದ ಮಣ್ಣನ್ನು ಮತ್ತು ಇತರ ಅವಶೇಷಗಳನ್ನು ತೆರವು ಮಾಡಿ ವಾಹನ ಸಂಚಾರಕ್ಕೆ ಮುಕ್ತ ಅವಕಾಶ ಒದಗಿಸಿರುವುದಾಗಿ ಮಾನೆ ತಿಳಿಸಿದ್ದಾರೆ. ಥಾಣೆ ಜಿಲ್ಲೆಯಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ ಮರಗಳು ಅಥವಾ ಮರಗಳ ಕೊಂಬೆಗಳು ಬಿದ್ದಿರುವ 18 ದೂರುಗಳು ಬಂದಿದ್ದರೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಕುರಿತ 4 ದೂರುಗಳು ಬಂದಿವೆ ಎಂದು ವಲಯ ವಿಪತ್ತು ನಿರ್ವಹಣಾ ಘಟಕದ ಮುಖ್ಯಸ್ಥ ಯಾಸಿನ್ ತಡ್ವಿ ಹೇಳಿದ್ದಾರೆ. ಥಾಣೆ ನಗರದ ಚರಾಯಿ ಪ್ರದೇಶದಲ್ಲಿ ಬುಧವಾರ ಬೆಳಿಗ್ಗೆ ರಸ್ತೆ ಬದಿಯ ದೊಡ್ಡ ಮರವೊಂದು ಉರುಳಿ ಬಿದ್ದು ಎರಡು ಕಾರುಗಳಿಗೆ ಹಾನಿಯಾಗಿದೆ. ಸ್ಥಳೀಯ ವಿಪತ್ತು ನಿರ್ವಹಣಾ ಘಟಕ ಮತ್ತು ಅಗ್ನಿ ಶಾಮಕ ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿದ್ದು ಮರವನ್ನು ತುಂಡರಿಸಿ ಅವಶೇಷ ತೆಗೆದಿರುವುದಾಗಿ ತಿಳಿಸಿರುವ ತಡ್ವಿ ಘಟನೆಯಲ್ಲಿ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ತಿಳಿಸಿದ್ದಾರೆ. ಪಾಲ್ಘರ್ ಜಿಲ್ಲೆಯ ವಸಾಯಿ, ವಿರಾರ್ ಮತ್ತು ನಾಲಸೋಪಾರಗಳಲ್ಲೂ ಮಂಗಳವಾರ ಭಾರೀ ಮಳೆಯಾಗಿದ್ದು ತಗ್ಗುಪ್ರದೇಶಗಳು ಜಲಾವೃತವಾಗಿದ್ದು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಸ್ರಾಪುರ ಬಾಲಕಿ ಅತ್ಯಾಚಾರ-ಕೊಲೆ ಪ್ರಕರಣ;ಇಂದು ಪುಣೆ ನ್ಯಾಯಾಲಯದಿಂದ ತೀರ್ಪು

ಪುಣೆ,ಜೂ.24 - ನಸ್ರಾಪುರ ಬಾಲಕಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಪುಣೆಯ ವಿಶೇಷ ನ್ಯಾಯಾಲಯವು ಜೂ.25 ರಂದು ತನ್ನ ತೀರ್ಪು ಪ್ರಕಟಿಸಲಿದೆ ಎಂದು ಪುಣೆ ಗ್ರಾಮೀಣ ಪೊಲೀಸರ ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಈ ಪ್ರಕರಣವು ಪುಣೆ ಜಿಲ್ಲೆಯ ಬೋರ್ ತಾಲ್ಲೂಕಿನ ನಸ್ರಾಪುರ ಪ್ರದೇಶದಲ್ಲಿ ಮೂರುವರೆ ವರ್ಷದ ಬಾಲಕಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಆರೋಪಕ್ಕೆ ಸಂಬಂಧಿಸಿದೆ. ಈ ಘಟನೆ ಮೇ 1 ರಂದು ಬೆಳಕಿಗೆ ಬಂದಿದ್ದು, ರಾಜ್ಯಾದ್ಯಂತ ವ್ಯಾಪಕ ಆಕ್ರೋಶಕ್ಕೆ ಕಾರಣವಾಯಿತು.

ವಿಶೇಷ ಸಾರ್ವಜನಿಕ ಅಭಿಯೋಜಕ ಅಜಯ್ ಮಿಸಾರ್ ಅವರು ಪ್ರಕರಣದ ಅಂತಿಮ ಸುತ್ತಿನ ವಾದಗಳು ಬೆಳಿಗ್ಗೆ 11 ಗಂಟೆಗೆ ಆರಂಭವಾಗಿ ಶನಿವಾರ ಸಂಜೆ 4 ಗಂಟೆಯ ಸುಮಾರಿಗೆ ಮುಕ್ತಾಯಗೊಂಡವು ಎಂದು ಹೇಳಿದರು.

ಮಿಸಾರ್ ಅವರ ಪ್ರಕಾರ, ಪ್ರಾಸಿಕ್ಯೂಷನ್ ನ್ಯಾಯಾಲಯದ ಮುಂದೆ ಹಲವಾರು ನಿರ್ಣಾಯಕ ಸಾಕ್ಷ್ಯಗಳನ್ನು ಮಂಡಿಸಿತು, ಇದರಲ್ಲಿ ಘಟನೆಗಳ ವಿವರವಾದ ಟೈಮ್‌ಲೈನ್, ವೈದ್ಯಕೀಯ ಮತ್ತು ವಿಧಿವಿಜ್ಞಾನ ವರದಿಗಳು, ಡಿಎನ್‌ಎ ವಿಶ್ಲೇಷಣೆಯ ಸಂಶೋಧನೆಗಳು ಮತ್ತು ಆರೋಪಿಯನ್ನು ಅಪರಾಧಕ್ಕೆ ಸಂಪರ್ಕಿಸುವ ಸಂಪರ್ಕ ಚಾರ್ಟ್‌ಗಳು ಸೇರಿವೆ.

ಪ್ರಾಸಿಕ್ಯೂಷನ್ ಪ್ರಮುಖ ನ್ಯಾಯಾಂಗ ಪೂರ್ವನಿದರ್ಶನಗಳ ಉಲ್ಲೇಖಗಳೊಂದಿಗೆ ಲಿಖಿತ ವಾದಗಳನ್ನು ಕೂಡ ಸಲ್ಲಿಸಿದೆ ಎಂದು ಅವರು ಹೇಳಿದರು. ಪ್ರತಿವಾದಿಯು ದಿನದ ಬಳಿಕ ತನ್ನ ಸಲ್ಲಿಕೆಗಳನ್ನು ಪೂರ್ಣಗೊಳಿಸಿತು, ನಂತರ ನ್ಯಾಯಾಲಯವು ಈ ವಿಷಯವನ್ನು ತೀರ್ಪಿಗಾಗಿ ಕಾಯ್ದಿರಿಸಿತು.

ವಿಶೇಷ ತ್ವರಿತ ನ್ಯಾಯಾಲಯವು ಪ್ರಕರಣವನ್ನು ಕೈಗೆತ್ತಿಕೊಂಡಿತು. ಪುಣೆ ಗ್ರಾಮೀಣ ಪೊಲೀಸರು ಘಟನೆ ನಡೆದ ಎರಡು ವಾರಗಳಲ್ಲಿ ಭೀಮರಾವ್ ಕಾಂಬ್ಳೆ ಎಂದು ಗುರುತಿಸಲಾದ ಆರೋಪಿಯ ವಿರುದ್ಧ 1,100 ಪುಟಗಳಿಗೂ ಹೆಚ್ಚು ಚಾರ್ಜ್‌ಶೀಟ್ ಸಲ್ಲಿಸಿದರು.

ಪೊಲೀಸರ ಪ್ರಕಾರ, ಆ ಪ್ರದೇಶದಲ್ಲಿ ವಾಸಿಸುವ 65 ವರ್ಷದ ಆರೋಪಿಯು ಅಪರಾಧ ಮಾಡುವ ಮೊದಲು ಮಗುವನ್ನು ಆಮಿಷವೊಡ್ಡಿದ್ದಾನೆ ಎಂದು ಆರೋಪಿಸಲಾಗಿದೆ. ಘಟನೆ ಬೆಳಕಿಗೆ ಬಂದ ಸ್ವಲ್ಪ ಸಮಯದ ನಂತರ ಆತನನ್ನು ಬಂಧಿಸಲಾಯಿತು.

ಮೇ ತಿಂಗಳ ಆರಂಭದಲ್ಲಿ, ಪುಣೆ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ ಸಂದೀಪ್ ಸಿಂಗ್ ಗಿಲ್ ಆರೋಪಿಯ ವಿರುದ್ಧ ಎರಡು ರೀತಿಯ ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದ್ದರು, ಅದರಲ್ಲಿ 2015 ರಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣವೂ ಸೇರಿದೆ.

5 ಬಲಿ, 17 ಗಾಯ; ಅವಶೇಷದಡಿ 40 ಕಾರ್ಮಿಕರು

ಮೊದಲ ಪುಟದಿಂದ

ರಕ್ಷಿಸಲ್ಪಟ್ಟವರೆಲ್ಲ ಕಟ್ಟಡ ನಿರ್ಮಾಣ ಕಾಮಗಾರಿ ಕಾರ್ಮಿಕರೆನ್ನಲಾಗಿದೆ. ರಾಜ್ಯ ಸರಕಾರಿ ಆಡಳಿತದ ಎಸ್‌ಎಸ್‌ಕೆಎಂ ಆಸ್ಪತ್ರೆಯ ಟ್ರಾಮಾ ಚಿಕಿತ್ಸಾ ಕೇಂದ್ರಕ್ಕೆ ದಾಖಲಿಸಲಾಗಿರುವ ಗಾಯಾಳುಗಳಲ್ಲಿ ಹಲವರ ಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಾಳುಗಳ ಚಿಕಿತ್ಸೆಗೆ ನರತಜ್ಞರು, ಮೂಳೆ ತಜ್ಞರು ಮತ್ತು ಸಾಮಾನ್ಯ ಔಷಧ ತಜ್ಞರನ್ನು ಒಳಗೊಂಡ ವೈದ್ಯರ ತಂಡವನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ತರತಲ ಪ್ರದೇಶದ ಬ್ರೇಸ್ ಸೇತುವೆ ಬಳಿಯ ಸಾರಿಗೆ ಡಿಪೋ ರಸ್ತೆಯಲ್ಲಿರುವ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಗೋದಾಮಿನ ಛಾವಣಿ ಏಕಾಏಕಿಯಾಗಿ ಕುಸಿಯಿತು. ದುರಂತ ವೇಳೆ ಹಲವು ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ನಿರ್ಮಾಣ ಕಾಮಗಾರಿ ವೇಳೆ ಕಬ್ಬಿಣದ ಬೀಮ್‌ಗಳು ಮತ್ತು ಕಾಂಕ್ರೀಟ್ ಅಲುಗಾಡಲು ಆರಂಭವಾಗಿ ಕುಸಿದು ಬಿದ್ದಿದ್ದು ಕಾರ್ಮಿಕರು ಅವಶೇಷದಡಿ ಬಿದ್ದಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಅವಶೇಷದಡಿ ಬಿದ್ದವರು ರಕ್ಷಿಸುವಂತೆ ಬೊಬ್ಬಿಡುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಮೊದಲ ಮತ್ತು ಎರಡನೇ ಮಹಡಿಗಳ ಆರ್‌ಸಿಸಿ ಕಾಮಗಾರಿ ಪೂರ್ಣಗೊಂಡಿದ್ದು, ನೆಲಮಹಡಿಯಲ್ಲಿ ನಿರ್ಮಾಣ ಕೆಲಸಗಳು ನಡೆಯುತ್ತಿದ್ದಾಗ ಇಡೀ ಕಟ್ಟಡ ಸಂಪೂರ್ಣವಾಗಿ ಕುಸಿದಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ಕಾಸ್ಟಿಂಗ್ ಕೆಲಸ ನಡೆಯುತ್ತಿದ್ದಾಗ ಗೋದಾಮು ಕಟ್ಟಡ ಕುಸಿದು ಬಿದ್ದಿದೆ. ಕಳಪೆ ಗುಣಮಟ್ಟದ ಸಾಮಗ್ರಿಗಳ ಬಳಕೆಯೇ ದುರಂತಕ್ಕೆ ಕಾರಣವಾಗಿದೆ ಎಂದು ಅಗ್ನಿ ಶಾಮಕ ಇಲಾಖೆ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅವಶೇಷದಡಿ ಇರುವವರ ಜತೆಗೆ ಸೇನೆ ಸಂಪರ್ಕಕ್ಕೆ ಯತ್ನಿಸಿದ್ದು ಸಂಪರ್ಕ ಆಗಿದೆ. ಆದರೆ ಬೃಹತ್ ಗಾತ್ರದ ಕಾಂಕ್ರೀಟ್ ಬ್ಲಾಕ್‌ಗಳನ್ನು ತೆಗೆಯದೆ ಒಳಗಿರುವವರ ರಕ್ಷಣೆ ಅಸಾಧ್ಯವಾಗಿದೆ ಎಂದು ಸುದ್ದಿಗಾರರಿಗೆ ಸ್ಥಳದಲ್ಲಿ ಮುಖ್ಯಮಂತ್ರಿ ಅಧಿಕಾರಿ ತಿಳಿಸಿದ್ದಾರೆ. ಸೇನೆ, ಕೋಲ್ಕತ್ತಾ ಪೊಲೀಸ್, ವಿಪತ್ತು ನಿರ್ವಹಣಾ ತಂಡಗಳು, ನಾಗರಿಕ ರಕ್ಷಣಾ ಇಲಾಖೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಯುದ್ದೋಪಾದಿಯಲ್ಲಿ ರಕ್ಷಣಾ ಕಾರ್ಯ ನಡೆಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕುಸಿದು ಬಿದ್ದಿರುವ ಕಬ್ಬಿಣದ ಬೀಮ್‌ಗಳನ್ನು ತೆಗೆಯಲು ಕ್ರೇನ್‌ಗಳು ಮತ್ತು ಬೃಹತ್ ಉಪಕರಣ ಎತ್ತುವ ಯಂತ್ರವನ್ನು ಬಳಸಲಾಗುತ್ತಿದೆ. ಎನ್‌ಡಿಆರ್‌ಎಫ್ ತಂಡವು ಶ್ವಾನ ದಳವನ್ನು ಮತ್ತು ಡ್ರೋನ್‌ಗಳನ್ನು ಬಳಸಿದೆ.

Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com

ಕರ್ನಾಟಕ ಮಲ್ಲ

ಸಂಪಾದಕರ ಮಾತು...

ಗುರುವಾರ, 25, ಜೂನ್ 2026.

ಅಡ್ಡ ಮತದಾನ; ಬಿಜೆಪಿ - ಜೆಡಿಎಸ್ ಮೈತ್ರಿಗೆ ಕುತ್ತು?

ಕರ್ನಾಟಕದಲ್ಲಿ ಜೂನ್ 18ರಂದು ವಿಧಾನಸಭಾ ಸದಸ್ಯರಿಂದ ವಿಧಾನ ಪರಿಷತ್ತಿನ 7 ಸದಸ್ಯರ ಆಯ್ಕೆಗಾಗಿ ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ವಿರೋಧಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಒಟ್ಟು 11 ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ್ದಾರೆ. ಪರಿಣಾಮವಾಗಿ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಅವರು ಕೇವಲ 14 ಮತಗಳನ್ನು ಪಡೆದು ಪರಾಭವಗೊಂಡು ಕಾಂಗ್ರೆಸ್ ಪಕ್ಷದ ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಎಲ್ಲರಿಗಿಂತ ಹೆಚ್ಚು 32 ಮತಗಳನ್ನು ಪಡೆದು ಜಯಭೇರಿ ಬಾರಿಸುವ ಮೂಲಕ ಬಿಜೆಪಿ ಮತ್ತು ಜೆಡಿಎಸ್ ನಾಯಕರ ತಲೆ ತಗ್ಗಿಸುವಂತೆ ಆಗಿದೆ. ಇಂತಹ ಸೋಲು ಮತ್ತು ಮುಖಭಂಗವನ್ನು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಕನಸ್ಸಲ್ಲೂ ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ ಕಳೆದ ಒಂದು ದಶಕದಿಂದ ವಿಧಾನ ಪರಿಷತ್ ಮತ್ತು ರಾಜ್ಯಸಭಾ ಚುನಾವಣೆಗಳಲ್ಲಿ ವಿರೋಧಿ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಎಂಎಲ್‌ಎಗಳು ಆಡಳಿತ ಬಿಜೆಪಿ ಅಭ್ಯರ್ಥಿಗಳಿಗೆ ಮತ ಹಾಕುವ ರಾಜಕಾರಣ ನಡೆಯುತ್ತಿದೆ. ಆದರೆ ಈ ಕೆಟ್ಟ ಸಂಪ್ರದಾಯವನ್ನು ಈ ಬಾರಿ ಕರ್ನಾಟಕದಲ್ಲಿ ಕಾಂಗ್ರೆಸ್ ತನ್ನದಾಗಿಸಿಕೊಂಡಿದೆ.

ವಿಚಿತ್ರ ಎಂದರೆ ಅಡ್ಡ ಮತದಾನ, ಎಂಎಲ್‌ಎಗಳ ಕುದುರೆವ್ಯಾಪಾರದಲ್ಲಿ ಮುಂಚೂಣಿಯಲ್ಲಿರುವ ಬಿಜೆಪಿಯ ಕರ್ನಾಟಕದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಪಕ್ಷದ ಎಂಎಲ್‌ಎಗಳನ್ನು ಪತ್ತೆ ಹಚ್ಚಲು ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕರಿಗೆ ಪಕ್ಷದ ಸಭೆ ನಡೆಸಿ ಅಲ್ಲಿ ಮಂಜುನಾಥ ದೇವರ ಮುಂದೆ ಆಣೆ ಪ್ರಮಾಣ ಮಾಡಿಸುವುದಾಗಿ ಹೇಳಿಕೆ ನೀಡಿ ಅವರ ರಾಜಕೀಯ ದೌರ್ಬಲ್ಯವನ್ನು ಸಾರ್ವಜನಿಕಗೊಳಿಸಿದ್ದಾರೆ. ವಿಜಯೇಂದ್ರ ಅವರ ತಂದೆ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಮತ್ತು ಜೆಡಿಎಸ್ ನಾಯಕ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಕುರಿತು ಸಂಘರ್ಷ ನಡೆಸಿದ್ದು ಮತ್ತು 2019ರಲ್ಲಿ ಕುಮಾರಸ್ವಾಮಿ ಅವರ ಸರಕಾರವನ್ನು ಪತನ ಮಾಡಲು ಕಾಂಗ್ರೆಸ್ಸಿನ 14 ಮತ್ತು ಜೆಡಿಎಸ್ ಪಕ್ಷದ 3 ಎಂಎಲ್‌ಎಗಳನ್ನು ರಾಜೀನಾಮೆ ಕೊಡಿಸಿದ್ದು ಗೊತ್ತಿದ್ದೂ ವಿಜಯೇಂದ್ರ ಅವರು ಕಾಂಗ್ರೆಸ್ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದ ಬಿಜೆಪಿ ಎಂಎಲ್‌ಎಗಳನ್ನು ಪತ್ತೆ ಹಚ್ಚಿ ಶಿಕ್ಷಿಸಲು ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಮಾಡಿಸುವುದಕ್ಕೆ ಬಯಸಿದ್ದು, ಅವರ ಬಗ್ಗೆ ಬಿಜೆಪಿ ಹೈಕಮಾಂಡ್ ಯಾವ ರೀತಿಯಲ್ಲಿ ತೀರ್ಮಾನಕ್ಕೆ ಬರುತ್ತದೆ ಎನ್ನುವ ಕುತೂಹಲ ಮೂಡಿಸಿದೆ.

ವಿಧಾನ ಪರಿಷತ್ ಚುನಾವಣಾ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟ ಆದಾಗ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಅವರಿಗೆ ಕೇವಲ 14 ಮತಗಳು ಬಿದ್ದಿರುವುದು ಬೆಳಕಿಗೆ ಬಂದಾಗ ಬಿಜೆಪಿ ಮತ್ತು ಜೆಡಿಎಸ್ ಪಕ್ಷದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬ ನಿಜ ಬಯಲಾಗಿತ್ತು. ಜೆಡಿಎಸ್ 18 ಎಂಎಲ್‌ಎಗಳನ್ನು ಹೊಂದಿದೆ. ಆದರೆ ಜೆಡಿಎಸ್ ಅಭ್ಯರ್ಥಿ ಪಡೆದ ಮತ 14 ಎಂದರೆ ಜೆಡಿಎಸ್ ಪಕ್ಷದ ನಾಲ್ವರು ಎಂಎಲ್‌ಎಗಳು ಕೂಡಾ ಅಡ್ಡ ಮತದಾನ ಮಾಡಿದ್ದಾರೆ ಎನ್ನುವುದು ಖಚಿತ ಆಗಿದೆ. ಜೆಡಿಎಸ್ ಪಕ್ಷದಿಂದ ಅಡ್ಡ ಮತದಾನ ಮಾಡಿದವರು ಯಾರು ಎಂದು ತನಗೆ ಗೊತ್ತಿದೆ ಎಂದು ಕುಮಾರಸ್ವಾಮಿ ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆ. ಜೆಡಿಎಸ್ ಹಿರಿಯ ಎಂಎಲ್‌ಎ ಜಿ. ಟಿ. ದೇವೇ ಗೌಡ ಅವರು ಪಕ್ಷದ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸುತ್ತಿಲ್ಲ ಎಂದು ಕುಮಾರಸ್ವಾಮಿ ಅವರು ಹೇಳುವ ಮೂಲಕ ಜೆಡಿಎಸ್ ಬಂಡಾಯಗಾರರ ನಾಯಕ ದೇವೇ ಗೌಡ ಎಂದು ಬೊಟ್ಟು ಮಾಡಿದ್ದಾರೆ. ಜೆಡಿಎಸ್ ಅಭ್ಯರ್ಥಿಗೆ ಚುನಾವಣೆಯಲ್ಲಿ 14 ಮತಗಳು ಮಾತ್ರ ಸಿಕ್ಕಿದ್ದರಿಂದ ಜೆಡಿಎಸ್ ಪಕ್ಷದ ನಾಲ್ವರು ಮತ್ತು ಬಿಜೆಪಿಯ 7 ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅಡ್ಡ ಮತದಾನ ಮಾಡಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಕಂಡು ಬಂದಿರುವ ವಾಸ್ತವ. ಬಿಜೆಪಿಯ 63 ಮತ್ತು ಬಿಜೆಪಿಯಿಂದ ಉಚ್ಛಾಟಿತ ಆಗಿರುವ ಬಸನ ಗೌಡ ಪಾಟೀಲ್ ಯತ್ನಾಳ್ ಸೇರಿದಂತೆ 64 ಎಂಎಲ್‌ಎಗಳ ಮತಗಳು ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳಿಗೆ ಬೀಳಬೇಕಿತ್ತು. ಆದರೆ ಬಿಜೆಪಿಯ ಎಂಎಲ್‌ಎಗಳಲ್ಲಿ ಬಿಜೆಪಿ ಅಭ್ಯರ್ಥಿ ರಘು ಕೌಟಿಲ್ಯ ಅವರು 29 ಮತ್ತು ಲಿಂಗರಾಜ ಪಾಟೀಲ್ 27 ಮತ ಪಡೆದು ಚುನಾಯಿತರಾಗಿದ್ದು, ಅವರಿಬ್ಬರು ಪಡೆದ ಒಟ್ಟು ಮತಗಳು 56. ಬಿಜೆಪಿ ಸದಸ್ಯರ ಒಂದು ಮತ ಕುಲಗೆಟ್ಟಿತ್ತು. ಇದರಿಂದಾಗಿ ಬಿಜೆಪಿಯ 7 ಎಂಎಲ್‌ಎಗಳ ಮತಗಳು ಕಾಂಗ್ರೆಸ್ಸಿನ ವಿನಯ್ ಅವರಿಗೆ ವರ್ಗಾವಣೆ ಆಗಿದೆ ಎನ್ನುವುದು ಸ್ಪಷ್ಟ.

ಬಿಜೆಪಿ ನಾಯಕರು ಕಾಂಗ್ರೆಸ್ ಅಭ್ಯರ್ಥಿಗೆ ಬಿಜೆಪಿಯ ಎಷ್ಟು ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎಂದು ಇನ್ನೂ ಸ್ಪಷ್ಟವಾಗಿ ಹೇಳಿಕೊಂಡಿಲ್ಲ. ಅದರ ಬದಲು ಪಕ್ಷದ ಮೂರ್ನಾಲ್ಕು ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎಂದು ವಿಪಕ್ಷ ನಾಯಕ ಆರ್. ಅಶೋಕ್, ವಿಜಯೇಂದ್ರ ಮತ್ತು ಇತರ ನಾಯಕರು ಹೇಳಿಕೊಂಡಿದ್ದಾರೆ. ಮಾಜಿ ಮುಖ್ಯಮಂತ್ರಿ ಹಿರಿಯ ಬಿಜೆಪಿ ನಾಯಕ ಸದಾನಂದ ಗೌಡ ಅವರು ಬಿಜೆಪಿ ಎಂಎಲ್‌ಎಗಳಲ್ಲಿ ಅಡ್ಡ ಮತದಾನ ಮಾಡಲು ಕಾಂಗ್ರೆಸ್ ನಾಯಕರ ಜತೆ ಗುಪ್ತ ಸಭೆ ನಡೆಸಿದವರು ಯಾರೆಂದು ತನಗೆ ಗೊತ್ತಿದ್ದು ಅದನ್ನು ತಾನು ಬಿಜೆಪಿ ವರಿಷ್ಠರ ಗಮನಕ್ಕೆ ತಂದಿದ್ದೇನೆ ಎಂದು ಹೇಳಿಕೆ ನೀಡಿದ್ದಾರೆ. ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಮತ್ತು ವಿಧಾನಸಭಾ ವಿಪಕ್ಷ ನಾಯಕ ಅಶೋಕ್ ಅವರನ್ನು ಬಿಜೆಪಿ ಹೈಕಮಾಂಡ್ ಕರೆಸಿಕೊಂಡು ಅಡ್ಡ ಮತದಾನ ಬಗ್ಗೆ ವಿವರ ಕೇಳಿದೆ. ಇದರಿಂದಾಗಿ ಅಡ್ಡ ಮತದಾನ ವಿಚಾರದಲ್ಲಿ ಬಿಜೆಪಿ ಹೈಕಮಾಂಡ್ ಯಾವ ತೀರ್ಮಾನಕ್ಕೆ ಬರಲಿದೆ ಎನ್ನುವುದು ಮುಂದಿನ ದಿನಗಳಲ್ಲಿ ತಿಳಿಯಬೇಕಿದೆ.

ಆದರೆ ಬಿಜೆಪಿ ಎಂಎಲ್‌ಎಗಳ ಅಡ್ಡ ಮತದಾನ ವಿಚಾರವಾಗಿ ಬಿಜೆಪಿ ನಾಯಕರ ವಿಭಿನ್ನ ಹೇಳಿಕೆಗಳು ಬಿಜೆಪಿ ಮತ್ತು ಜೆಡಿಎಸ್ ನಡುವಿನ ರಾಜಕೀಯ ಮೈತ್ರಿಯಲ್ಲಿ ಬಿರುಕಿಗೆ ಕಾರಣ ಆದರೆ ಆಶ್ಚರ್ಯವಿಲ್ಲ. 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡು ಭಾರೀ ಹಿನ್ನಡೆ ಅನುಭವಿಸಿದ್ದ ಹಿನ್ನಲೆಯಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಹಿಂದಿಕ್ಕ ಬೇಕಾದರೆ ಕಾಂಗ್ರೆಸ್ ವಿರೋಧಿ ಮತಗಳ ವಿಭಜನೆ ತಡೆಯಲೇ ಬೇಕು ಎಂದು ತೀರ್ಮಾನ ಮಾಡಿದ್ದ ಬಿಜೆಪಿ ಕೇಂದ್ರ ನಾಯಕರು ಮಾಜಿ ಪ್ರಧಾನಿ ಎಚ್. ಡಿ. ದೇವೇ ಗೌಡರನ್ನು ಸಂಪರ್ಕ ಮಾಡಿ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಯ ಘೋಷಣೆ ಮಾಡಿದ್ದರು. ಆ ಹಠಾತ್ ನಿರ್ಧಾರ ಬಗ್ಗೆ ಕರ್ನಾಟಕದ ಬಿಜೆಪಿ ಮತ್ತು ಜೆಡಿಎಸ್ ನಾಯಕರಲ್ಲಿ ತೀವ್ರ ಅಸಮಾಧಾನ ಎದ್ದಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾಹ ಅವರ ನಿರ್ಧಾರ ಮತ್ತು ಆದೇಶವನ್ನು ಪ್ರಶ್ನಿಸುವ ಧೈರ್ಯ ರಾಜ್ಯ ಬಿಜೆಪಿ ನಾಯಕರಲ್ಲಿ ಇರಲಿಲ್ಲ. ಜೆಡಿಎಸ್ ನಾಯಕರೂ ದೇವೇ ಗೌಡ ಮತ್ತು ಕುಮಾರಸ್ವಾಮಿ ಅವರ ನಿರ್ಧಾರವನ್ನು ಪ್ರಶ್ನಿಸುವ ಬದಲು ಅವರ ಇಷ್ಟದಂತೆ ಆಗಲಿ ಎಂದು ಮೌನ ವಹಿಸಿದ್ದರು. ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆಗಿನ ಮೈತ್ರಿ ಬಿಜೆಪಿಗೆ ಲಾಭ ತಂದಿದ್ದರೆ ಜೆಡಿಎಸ್ ನಲ್ಲಿ ಕುಮಾರಸ್ವಾಮಿ ಕೇಂದ್ರ ಸಚಿವರಾಗಲು ಕಾರಣ ಆಯಿತು. ಬಿಜೆಪಿ 17 ಸ್ಥಾನ ಗೆದ್ದರೆ ಜೆಡಿಎಸ್ ಎರಡು ಸ್ಥಾನ ಗೆದ್ದಿತ್ತು. ವಿಶೇಷವೆಂದರೆ ದೇವೇ ಗೌಡರ ಅಳಿಯ ಡಾ. ಸಿ. ಎನ್.ಮಂಜುನಾಥ್ ಅವರು ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಬಿಜೆಪಿ ಎಂಪಿಯಾಗಿ ರಾಜಕಾರಣ ಪ್ರವೇಶ ಮಾಡಿದರು.

ಆದರೆ ಈಗ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಎಂಎಲ್‌ಎಗಳ ಅಡ್ಡ ಮತದಾನ ಎರಡೂ ಪಕ್ಷಗಳ ಆಂತರಿಕ ಸಮಸ್ಯೆಯ ಜತೆಗೆ ಪರಸ್ಪರ ಮೈತ್ರಿ ಬಿಕ್ಕಟ್ಟನ್ನು ಬಹಿರಂಗ ಮಾಡಿದೆ. 4 ಜೆಡಿಎಸ್ ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ್ದಾರೆ ಎಂದರೆ ಕುಮಾರಸ್ವಾಮಿ ಅವರ ವಿರುದ್ಧ ನಾಲ್ವರು ಎಂಎಲ್‌ಎಗಳು ಬಂಡಾಯ ಎದ್ದಿದ್ದಾರೆ ಎನ್ನುವುದು ಸ್ಪಷ್ಟ. ಇದರ ಜತೆಗೆ ಬಿಜೆಪಿಯ 7 ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ್ದಾರೆ ಎಂದರೆ ಅವರೆಲ್ಲ ಜೆಡಿಎಸ್ ಅಭ್ಯರ್ಥಿಗೆ ಮತ ಹಾಕಲು ಇಷ್ಟ ಪಟ್ಟಿಲ್ಲ ಮಾತ್ರವಲ್ಲ ಜೆಡಿಎಸ್ ಜತೆಗಿನ ಮೈತ್ರಿಗೆ ವಿರುದ್ಧವಾಗಿದ್ದಾರೆ ಎನ್ನುವುದನ್ನು ಬೊಟ್ಟು ಮಾಡಿದೆ. ಈ ಬೆಳವಣಿಗೆ ಸಹಜವಾಗಿಯೇ ಬಿಜೆಪಿ ಮತ್ತು ಜೆಡಿಎಸ್ ನಡುವಿನ ಮೈತ್ರಿಯಲ್ಲಿ ಬಿರುಕು ಹೆಚ್ಚುವ ಸಾಧ್ಯತೆ ಇದೆ. ಬಿಜೆಪಿ ನಾಯಕರು ಮತ್ತು ಕುಮಾರಸ್ವಾಮಿ ನಡುವೆ ಹಿಂದೆ ನಡೆದಿರುವ ಸಂಘರ್ಷದ ಪರಿಣಾಮವೇ ಬಿಜೆಪಿ ನಾಯಕರ ಅರಿವಿನಲ್ಲಿ ಇದ್ದೇ ಬಿಜೆಪಿ ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎಂಬ ವದಂತಿಗೆ ಕೂಡಾ ಕಾರಣ ಆಗಿದೆ. ಅಂತಹ ವದಂತಿಗೆ ಅವಕಾಶ ನೀಡದೇ ಇರಲು ವಿಜಯೇಂದ್ರ ಅವರು ಧರ್ಮಸ್ಥಳದಲ್ಲಿ ಆಣೆ ಪ್ರಮಾಣದ ಹೇಳಿಕೆ ಬಂದಿದೆ ಎಂಬ ಶಂಕೆ ಕುಮಾರಸ್ವಾಮಿಗೆ ಬಂದಿದ್ದು ಮುಂಬರುವ ವಿಧಾನಸಭಾ ಚುನಾವಣೆ ಮೊದಲು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮುರಿದು ಬಿದ್ದರೆ ಆಶ್ಚರ್ಯ ಇಲ್ಲ.

ಮೌಲ್ಯ ಹೆಚ್ಚಿಸಿಕೊಂಡಿರುವ ವಿಶ್ವ ಫುಟ್ಬಾಲ್ ಆಟಗಾರರು



'ವಿಶ್ವಶಾಂತಿ ಮತ್ತು ಸೌಹಾರ್ದತೆಯೇ ಮನುಕುಲದ ನೆಮ್ಮದಿಯ ದ್ಯೋತಕ. ಎಲ್ಲಿ ಪ್ರೀತಿ ಇರುತ್ತದೋ ಅಲ್ಲಿ ಶಾಂತಿ ಇರುತ್ತದೆ' ಎನ್ನುವ ಸಂದೇಶವನ್ನು ಸಾರುವ ವಿಶ್ವ ಕಪ್ ಫುಟ್ಬಾಲ್' ಎಂಬ ಸುಂದರ ಕಾವ್ಯ 'ಮಹಾಕಾವ್ಯ' ವಾಗಿ ಈಗಾಗಲೇ ಅನಾವರಣ ಗೊಂಡಿದೆ. ಅಮೆರಿಕ, ಕೆನಡಾ ಹಾಗೂ ಮೆಕ್ಸಿಕೊ ದೇಶಗಳ ಆತಿಥ್ಯದಲ್ಲಿ ಭರ್ಜರಿಯಾಗಿಯೇ ಶುರುವಾಗಿರುವ ಈ ವಿಶ್ವಕಪ್ ಫುಟ್ಬಾಲ್ ಪಂದ್ಯಾಟದಲ್ಲಿ 48 ರಾಷ್ಟ್ರಗಳು ಭಾಗವಹಿಸುತ್ತಿವೆ. ಘಟಾನುಘಟಿ ತಂಡಗಳು ಭಾಗವಹಿಸುತ್ತಿರುವುದರಿಂದ ವಿಶ್ವದಾದ್ಯಂತ ಫುಟ್ಬಾಲ್ ಜ್ವರ ಆರಂಭವಾಗಿದೆ.

ಫುಟ್ಬಾಲ್ ವಿಶ್ವಕಪ್ ಎಂದರೆ ವಿಶ್ವದ ಅತ್ಯುತ್ತಮ ಆಟಗಾರರ ಸಮಾಗಮ. ಮೈದಾನದಲ್ಲಿ ತಮ್ಮ ಅದ್ಭುತ ಪ್ರದರ್ಶನದ ಮೂಲಕ ಕೋಟ್ಯಂತರ ಅಭಿಮಾನಿಗಳನ್ನು ಆಕರ್ಷಿಸುತ್ತಿರುವ ಈ ವಿಶ್ವಕಪ್ ಮನುಕುಲ ಕಂಡ ಸಾಹಸ ಕತೆಯ ಕಾಲ್ಚೆಂಡಿನ ವಿಶ್ವಸಮರ. ಇಂತಹ ಸಾಹಸಿಕ ಹೋರಾಟದಲ್ಲಿ ವಿಶ್ವದ ಅತ್ಯುತ್ತಮ ಆಟಗಾರರ ಸಮಾಗಮ ಆಗುತ್ತಿದೆ. ಮೈದಾನದಲ್ಲಿ ತಮ್ಮ ಕಾಲ್ಚಳಕದ ಮೂಲಕ ಅಬ್ಬರಿಸುವ ಆಟಗಾರರು, ತಮ್ಮ ಅಮೋಘ ಆಟದ ಮೂಲಕ ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ.

ಮೈದಾನದಲ್ಲಿ ತಮ್ಮ ಅದ್ಭುತ ಪ್ರದರ್ಶನದ ಮೂಲಕ ಅಭಿಮಾನಿಗಳ ಗಮನ ಸೆಳೆಯುತ್ತಿರುವ ಈ ಆಟಗಾರರು ಆದಾಯ ಮತ್ತು ಸಂಪತ್ತಿನ ವಿಷಯದಲ್ಲೂ ತಮ್ಮ ತಾರಾ ಮೌಲ್ಯವನ್ನು ಹೆಚ್ಚಿಸಿಕೊಂಡಿದ್ದಾರೆ. ಆರ್ಥಿಕವಾಗಿಯೂ ದೊಡ್ಡ ಮಟ್ಟದ ಯಶಸ್ಸು ಸಾಧಿಸಿರುವ ಕೆಲವರು ಕ್ಲಬ್ ಒಪ್ಪಂದಗಳು, ಜಾಹೀರಾತುಗಳು, ಬ್ರ್ಯಾಂಡ್ ಅಂಬಾಸಿಡರ್‌ಶಿಪ್‌ಗಳು ಮತ್ತು ವಿವಿಧ ವ್ಯಾಪಾರ ಹೂಡಿಕೆಗಳ ಮೂಲಕ ಅವರು ಸಾವಿರಾರು ಕೋಟಿ ರೂಪಾಯಿ ಸಂಪತ್ತಿನ ಒಡೆಯರಾಗಿದ್ದಾರೆ. ಹಾಗಾಗಿ ಈ ಬಾರಿಯ ವಿಶ್ವಕಪ್‌ನಲ್ಲಿ ಭಾಗವಹಿಸುತ್ತಿರುವ ಮುಂಚೂಣಿಯ ಹಾಗೂ ಅತಿ ಶ್ರೀಮಂತ ಆಟಗಾರರ ಬಗ್ಗೆ ಬೆಳಕು ಚೆಲ್ಲುವ ವಿಶೇಷ ಮಾಹಿತಿ ಇಲ್ಲಿದೆ.

ಕ್ರಿಸ್ಟಿಯಾನೊ ರೊನಾಲ್ಡೊ - ಸಾರ್ವಕಾಲಿಕ ಶ್ರೇಷ್ಠ ಆಟಗಾರ

ವಿಶ್ವದ ಅತ್ಯಂತ ಜನಪ್ರಿಯ ಫುಟ್ಬಾಲ್ ಆಟಗಾರರಲ್ಲಿ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಅಗ್ರಸ್ಥಾನದಲ್ಲಿದ್ದಾರೆ. ಇವರು ಶ್ರೀಮಂತ ಆಟಗಾರರಲ್ಲೂ ಮೊದಲ ಸ್ಥಾನದಲ್ಲಿದ್ದಾರೆ. ಮ್ಯಾಂಚೆಸ್ಟರ್‌ಯುನೈಟೆಡ್, ರಿಯಲ್ ಮ್ಯಾಡ್ರಿಡ್ ಮತ್ತು ಯುವೆಂಟಸ್‌ನಂತಹ ಪ್ರತಿಷ್ಠಿತ ಕ್ಲಬ್‌ಗಳಲ್ಲಿ ಮಿಂಚಿದ ರೊನಾಲ್ಡೊ ಪ್ರಸ್ತುತ ಸೌದಿ ಅರೇಬಿಯಾದ ಅಲ್-ನಾಸ್ರ ಕ್ಲಬ್ ಪರ ಆಡುತ್ತಿದ್ದಾರೆ. ಇವರು, ತಮ್ಮ ಅಸಾಧಾರಣ ವೇಗ, ಗೋಲು ಗಳಿಸುವ ಕೌಶಲ್ಯ ಮತ್ತು ಶಿಸ್ತಿಗೆ ಹೆಸರುವಾಸಿಯಾಗಿದ್ದಾರೆ. ಐದು ಬಾರಿ ಪ್ರತಿಷ್ಠಿತ 'ಬ್ಯಾಲನ್ ಡಿ'ಓರ್' ಪ್ರಶಸ್ತಿ ಮತ್ತು ನಾಲ್ಕು ಬಾರಿ 'ಯುರೋಪಿಯನ್ ಗೋಲ್ಡನ್ ಶೂ'. ಪಡೆದಿರುವ ಇವರು ತಮ್ಮ ವೃತ್ತಿಜೀವನದಲ್ಲಿ 900 ಕ್ಕೂ ಹೆಚ್ಚು ಗೋಲುಗಳನ್ನು ಗಳಿಸಿದ ವಿಶ್ವದ ಮೊದಲ ಫುಟ್ಬಾಲ್ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ರೊನಾಲ್ಡೊ ಫುಟ್ಬಾಲ್ ಮೈದಾನದಲ್ಲಿ ಹಾಗೂ ಮೈದಾನದ ಹೊರಗೆ ತಮ್ಮ ಅದ್ಭುತ ಆಟ ಮತ್ತು ವ್ಯವಹಾರಿಕ ಬುದ್ಧಿವಂತಿಕೆಯಿಂದ ಅಪಾರ ಸಂಪತ್ತನ್ನು ಗಳಿಸಿದ್ದಾರೆ. ಹೋಟೆಲ್ ಉದ್ಯಮ, ಫಿಟ್ನೆಸ್ ಬ್ರ್ಯಾಂಡ್‌ಗಳು, ಉಡುಪು ವ್ಯಾಪಾರ ಹಾಗೂ ವಿವಿಧ ಹೂಡಿಕೆಗಳ ಮೂಲಕವೂ ಅಪಾರ ಸಂಪತ್ತನ್ನು ಗಳಿಸಿರುವ ವಿಶ್ವದ ಮೊದಲ ಫುಟ್ಬಾಲ್ ಆಟಗಾರರಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವಿಶ್ವದ ಅತ್ಯಂತ ಹೆಚ್ಚು ಅನುಯಾಯಿಗಳನ್ನು ಹೊಂದಿರುವ ಕ್ರೀಡಾಪಟು ಎಂಬ ಹೆಗ್ಗಳಿಕೆಯೂ ಕ್ರಿಸ್ಟಿಯಾನೊ ರೊನಾಲ್ಡೊ ಅವರಿಗೆ ಇದೆ.

ಲಿಯೋನೆಲ್ ಮೆಸ್ಸಿ ಜೀವಂತ ದಂತಕಥೆ: ಫುಟ್ಬಾಲ್‌ನ ಜೀವಂತ ದಂತಕಥೆ ಎನಿಸಿರುವ ಅರ್ಜೆಂಟೀನಾದ ನಾಯಕ ಲಿಯೋನೆಲ್ ಮೆಸ್ಸಿ ಫುಟ್ಬಾಲ್ ಇತಿಹಾಸದ ಶ್ರೇಷ್ಠ ಆಟಗಾರರಲ್ಲಿ ಒಬ್ಬರು. ಎಂಟು ಬಾರಿ ಬ್ಯಾಲನ್ ಡಿ'ಓರ್ ಪ್ರಶಸ್ತಿ ವಿಜೇತರಾದ ಮೆಸ್ಸಿ ತಮ್ಮ ವೃತ್ತಿಜೀವನದಲ್ಲಿ ಅನೇಕ ದಾಖಲೆಗಳನ್ನು ನಿರ್ಮಿಸಿರುವ ಅದ್ಭುತ ಆಟಗಾರ. ಬಾರ್ಸಿಲೋನಾ ಕ್ಲಬ್‌ನಲ್ಲಿ ಸುವರ್ಣ ಯುಗವನ್ನು ನಿರ್ಮಿಸಿದ ಅವರು ನಂತರ ಪಿಎಸ್‌ಜಿ ಹಾಗೂ ಪ್ರಸ್ತುತ ಅಮೆರಿಕದ ಇಂಟರ್‌ಮಿಯಾಮಿ ಕ್ಲಬ್ ಪರ ಆಡುತ್ತಿದ್ದಾರೆ. ಮೆಸ್ಸಿ ತಮ್ಮ ಕ್ರೀಡಾ ಸಂಪಾದನೆಯ ಜೊತೆಗೆ ಜಾಹೀರಾತು ಮತ್ತು ಬ್ರ್ಯಾಂಡ್ ಒಪ್ಪಂದಗಳಿಂದಲೂ ಅವರು ಅಪಾರ ಆದಾಯ ಗಳಿಸುತ್ತಿದ್ದಾರೆ. ಹಲವು ಅಂತಾರಾಷ್ಟ್ರೀಯ ಕಂಪನಿಗಳ ಬ್ರ್ಯಾಂಡ್ ಅಂಬಾಸಿಡರ್‌ಆಗಿರುವ ಮೆಸ್ಸಿ ವಿಶ್ವದ ಅತ್ಯಂತ ಶ್ರೀಮಂತ ಆಟಗಾರರ ಪೈಕಿ ಎರಡನೇ ಸ್ಥಾನದಲ್ಲಿದ್ದಾರೆ.

ಬ್ರೆಜಿಲ್‌ನ ಮ್ಯಾಜಿಕ್ ಸ್ಟಾರ್ ನೇಮರ್ : ಫುಟ್ಬಾಲ್ ಅಭಿಮಾನಿಗಳಿಗೆ ನೇಮರ್ ಎಂಬ ಹೆಸರು ಹೊಸದೇನಲ್ಲ. ಮೈದಾನದಲ್ಲಿ ತಮ್ಮ ಅದ್ಭುತ ಡ್ರಿಬ್ಲಿಂಗ್, ವೇಗ ಮತ್ತು ಸೃಜನಶೀಲ ಆಟದ ಮೂಲಕ ಅವರು ಕೋಟ್ಯಂತರ ಅಭಿಮಾನಿಗಳನ್ನು ಹೊಂದಿದ್ದಾರೆ. ಬಾರ್ಸಿಲೋನಾ, ಪಿಎಸ್‌ಜಿ ಹಾಗೂ ಸೌದಿ ಅರೇಬಿಯಾದ ಅಲ್ ಹಿಲಾಲ್ ಕ್ಲಬ್‌ಗಳಲ್ಲಿ ಆಡಿರುವ ನೇಮರ್, ವಿಶ್ವದ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ಆಟಗಾರರಲ್ಲಿ ಒಬ್ಬರು. ಅವರ ಸಾಮಾಜಿಕ ಜಾಲತಾಣಗಳಲ್ಲಿನ ಜನಪ್ರಿಯತೆಯೂ ಆದಾಯದ ಪ್ರಮುಖ ಮೂಲವಾಗಿದೆ. ವಿವಿಧ ಜಾಗತಿಕ ಬ್ರ್ಯಾಂಡ್‌ಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳಿಂದ ಅವರು ಭಾರೀ ಮೊತ್ತವನ್ನು ಸಂಪಾದಿಸುತ್ತಿದ್ದಾರೆ. ವಿಶ್ವದ ಅತ್ಯಂತ ಶ್ರೀಮಂತ ಆಟಗಾರರಲ್ಲಿ ನೇಮರ್ ಮೂರನೇ ಸ್ಥಾನದಲ್ಲಿದ್ದಾರೆ.

ಫ್ರಾನ್ಸ್‌ನ ಸೂಪರ್‌ಸ್ಟಾರ್ ಕೈಲಿಯನ್ ಎಂಬಪ್ಪೆ : ವಿಶ್ವದ ಅತ್ಯುತ್ತಮ ಫುಟ್ಬಾಲ್ ಆಟಗಾರರಲ್ಲಿ ಕೈಲಿಯನ್ ಎಂಬಪ್ಪೆ ಕೂಡ ಒಬ್ಬರು. ಇವರು ಫ್ರಾನ್ಸ್‌ನ ಭವಿಷ್ಯದ ಸೂಪರ್‌ಸ್ಟಾರ್ ಆಟಗಾರ. ಫ್ರಾನ್ಸ್ ರಾಷ್ಟ್ರೀಯ ತಂಡದ ಪ್ರಮುಖ ಆಟಗಾರರಾಗಿ, 2018ರ ಫಿಫಾ ವಿಶ್ವ ಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರು. 2022ರ ವಿಶ್ವಕಪ್‌ನ ಫೈನಲ್‌ನಲ್ಲಿ ಹ್ಯಾಟ್ರಿಕ್ ಗೋಲುಗಳನ್ನು ಬಾರಿಸಿ ವಿಶ್ವದಾಖಲೆ ಬರೆದಿದ್ದರು. ಅವರ ವೇಗ, ಗೋಲು ಗಳಿಸುವ ಸಾಮರ್ಥ್ಯ ಮತ್ತು ಅದ್ಭುತ ಕೌಶಲ್ಯಗಳು ಅವರನ್ನು ಇಂದಿನ ಅತ್ಯಂತ ಜನಪ್ರಿಯ ಆಟಗಾರರನ್ನಾಗಿಸಿವೆ. ಪ್ಯಾರಿಸ್ ಸೇಂಟ್-ಜರ್ಮೇನ್ (ಪಿಎಸ್‌ಜಿ) ತಂಡದೊಂದಿಗೆ ಯಶಸ್ವಿ ಪಯಣ ನಡೆಸಿದ ಎಂಬಪ್ಪೆ, ಇದೀಗ ಸ್ಪೇನ್‌ನ ಪ್ರತಿಷ್ಠಿತ ಕ್ಲಬ್ ರಿಯಲ್ ಮ್ಯಾಡ್ರಿಡ್ ಪರ ಆಡುತ್ತಿದ್ದಾರೆ. ಕ್ಲಬ್ ಒಪ್ಪಂದಗಳು, ಪ್ರಾಯೋಜಕತ್ವಗಳು ಮತ್ತು ವಿವಿಧ ಬ್ರ್ಯಾಂಡ್‌ಗಳ ಜಾಹೀರಾತುಗಳಿಂದ ಅವರು ಅಪಾರ ಆದಾಯ ಗಳಿಸಿದ್ದಾರೆ. ವಿಶ್ವದ ಅತ್ಯಂತ ಶ್ರೀಮಂತ ಆಟಗಾರರಲ್ಲಿ ಕೈಲಿಯನ್ ಎಂಬಪ್ಪೆ ಅವರಿಗೆ ನಾಲ್ಕನೇ ಸ್ಥಾನ.

ಹ್ಯಾರಿ ಕೇನ್ ಇಂಗ್ಲೆಂಡ್‌ನ ಗೋಲ್ ಮಷೀನ್ :

ಇಂಗ್ಲೆಂಡ್ ರಾಷ್ಟ್ರೀಯ ತಂಡವನ್ನು ಈ ಬಾರಿಯ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಮುನ್ನಡೆಸುತ್ತಿರುವ ಹ್ಯಾರಿ ಕೇನ್ ಆಧುನಿಕ ಫುಟ್ಬಾಲ್‌ನ ಅತ್ಯುತ್ತಮ ಸ್ಟ್ರೈಕರ್‌ಗಳಲ್ಲಿ ಒಬ್ಬರು. ಗೋಲು ಗಳಿಸುವ ಸಾಮರ್ಥ್ಯ, ನಾಯಕತ್ವ ಮತ್ತು ನಿರಂತರ ಪ್ರದರ್ಶನದಿಂದ ಅವರು ವಿಶ್ವದ ಗಮನ ಸೆಳೆದಿರುವ ಅದ್ಭುತ ಆಟಗಾರ. ಟೊಟೆನ್ಹ್ಯಾಮ್ ಹಾಟ್‌ಸ್ಪರ್ ತಂಡದಲ್ಲಿ ಹಲವು ವರ್ಷಗಳ ಕಾಲ ಮಿಂಚಿದ ಬಳಿಕ ಅವರು ಜರ್ಮನಿಯ ಬೇಯರ್ನ್ ಮ್ಯೂನಿಕ್ ಕ್ಲಬ್‌ಗೆ ಸೇರ್ಪಡೆಯಾದರು. ಕ್ಲಬ್‌ನಿಂದ ಪಡೆಯುವ ಭಾರೀ ವೇತನದ ಜೊತೆಗೆ ಹಲವು ಜಾಗತಿಕ ಬ್ರ್ಯಾಂಡ್‌ಗಳ ಜಾಹೀರಾತು ಒಪ್ಪಂದಗಳಿಂದಲೂ ಹ್ಯಾರಿ ಕೇನ್ ಅಪಾರ ಆದಾಯ ಗಳಿಸುತ್ತಿದ್ದಾರೆ. ಇವರು ವಿಶ್ವದ ಅತ್ಯಂತ ಶ್ರೀಮಂತ ಆಟಗಾರರ ಪೈಕಿ ಐದನೇ ಸ್ಥಾನದಲ್ಲಿದ್ದಾರೆ.

ಕ್ರೀಡೆಯಲ್ಲಿ ಮಾತ್ರವಲ್ಲ, ಸಂಪತ್ತಿನಲ್ಲೂ ಅಗ್ರಸ್ಥಾನದಲ್ಲಿರುವ ಈ ಐವರು ಆಟಗಾರರು ತಮ್ಮ ಪ್ರತಿಭೆ, ಪರಿಶ್ರಮ ಮತ್ತು ನಿರಂತರ ಸಾಧನೆಯ ಮೂಲಕ ವಿಶ್ವ ಫುಟ್ಬಾಲ್‌ನಲ್ಲಿ ವಿಶಿಷ್ಟ ಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ಮೈದಾನದಲ್ಲಿ ಅಭಿಮಾನಿಗಳನ್ನು ರಂಜಿಸುವುದರ ಜೊತೆಗೆ, ಬ್ರ್ಯಾಂಡ್ ಮೌಲ್ಯ, ಜಾಹೀರಾತು ಒಪ್ಪಂದಗಳು ಮತ್ತು ವ್ಯಾಪಾರ ಹೂಡಿಕೆಗಳ ಮೂಲಕ ಸಾವಿರಾರು ಕೋಟಿ ರೂಪಾಯಿ ಸಂಪತ್ತನ್ನು ಗಳಿಸಿದ್ದಾರೆ. 2026ರ ಫಿಫಾ ವಿಶ್ವಕಪ್‌ನಲ್ಲಿ ಇವರ ಪ್ರದರ್ಶನದ ಮೇಲೆ ಮತ್ತೊಮ್ಮೆ ವಿಶ್ವದ ಕಣ್ಣು ನೆಟ್ಟಿದ್ದು, ಅಭಿಮಾನಿಗಳು ರೋಚಕ ಕ್ಷಣಗಳ ನಿರೀಕ್ಷೆಯಲ್ಲಿದ್ದಾರೆ.

: ಎಸ್.ಜಗದೀಶ್ಚಂದ್ರ ಅಂಚನ್ , ಸೂಟರ್‌ಪೇಟೆ

ಪುಣೆಯ ಬಹುರಾಷ್ಟ್ರೀಯ ಕಂಪನಿಯಲ್ಲಿ 'ಲೈಂಗಿಕ ಕಿರುಕುಳ'ದ ಬಗ್ಗೆ ತನಿಖೆಗೆ ಆದೇಶ: ಫಡ್ನವೀಸ್

ಮುಂಬಯಿ, ಜೂ.24 - ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಪ್ಯಾನಿಷ್ ಬಹುರಾಷ್ಟ್ರೀಯ ಕಂಪನಿಯಲ್ಲಿ ಲೈಂಗಿಕ ಕಿರುಕುಳ ಕುರಿತ ಆರೋಪದ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ. ಪುಣೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಪ್ಯಾನಿಷ್ ಬಹುರಾಷ್ಟ್ರೀಯ ಕಂಪನಿಯ ಮಹಿಳಾ ಉದ್ಯೋಗಿಯೊಬ್ಬರು ಲೈಂಗಿಕ ಕಿರುಕುಳದ ದೂರು ದಾಖಲಿಸಿದ ತಕ್ಷಣ ಅವರನ್ನು ವಜಾಗೊಳಿಸಲಾಗಿದೆ ಎಂದು ಶಿವಸೇನಾ ಸದಸ್ಯೆ ಮನೀಷಾ ಕಾಯಂಡೆ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಫಡ್ನವೀಸ್ ಅವರು, ಹಿರಿಯ ಅಧಿಕಾರಿಯೊಬ್ಬರು ಈ ವಿಷಯದ ಬಗ್ಗೆ 15 ದಿನಗಳಲ್ಲಿ ತನಿಖೆ ನಡೆಸುತ್ತಾರೆ ಮತ್ತು ತಪ್ಪಿತಸ್ಥರೆಂದು ಕಂಡುಬಂದರೆ ಕಂಪನಿ ಹಾಗೂ ಕಿರುಕುಳ ನೀಡಿದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಯಾವುದೇ ಸಂದರ್ಭದಲ್ಲೂ ಮಹಿಳೆ ಯಾವುದೇ ಅನ್ಯಾಯವನ್ನು ಎದುರಿಸುವುದಿಲ್ಲ ಎಂದು ಮುಖ್ಯಮಂತ್ರಿ ತಿಳಿಸಿದರು.

ಸರಕಾರಿ ಸ್ವಾಮ್ಯದ ಸೋಲಾಪುರ ಐಟಿಐನಲ್ಲಿ ಕಿರುಕುಳ ಮತ್ತು ಧಾರ್ಮಿಕ ಮತಾಂತರದ ದೂರುಗಳಿವೆ ಎಂದು ಕಾಯಂಡೆ ಆರೋಪಿಸಿದಾಗ ಫಡ್ನವೀಸ್ ಅವರು, ತಕ್ಷಣ ತನಿಖೆಗೆ ಆದೇಶಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಐಟಿ ಪ್ರಮುಖ ಟಿಸಿಎಸ್‌ನ ನಾಸಿಕ್ ಘಟಕದಲ್ಲಿ ಲೈಂಗಿಕ ಕಿರುಕುಳ ಮತ್ತು ಧಾರ್ಮಿಕ ಮತಾಂತರದ ವಿಷಯವನ್ನು ಬಿಜೆಪಿಯ ಚಿತ್ರ ವಾಘ್ ಎತ್ತಿದರು.

ನಾಸಿಕ್‌ನ ಟಿಸಿಎಸ್ ಘಟಕದಲ್ಲಿ ಉದ್ಯೋಗಿಗಳ ಮೇಲೆ ಶೋಷಣೆ, ಬಲವಂತದ ಮತಾಂತರದ ಪ್ರಯತ್ನ, ಧಾರ್ಮಿಕ ಭಾವನೆಗಳಿಗೆ ನೋವುಂಟುಮಾಡುವುದು, ಕಿರುಕುಳ ಹಾಗೂ ಮಾನಸಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ಒಟ್ಟು 9 ಪ್ರಕರಣಗಳನ್ನು ವಿಶೇಷ ತನಿಖಾ ತಂಡ ಈಗಾಗಲೇ ತನಿಖೆ ನಡೆಸುತ್ತಿದೆ. ಯಾವುದೇ ರೀತಿಯ ಕಿರುಕುಳ ಮತ್ತು ಬಲವಂತದ ಬಗ್ಗೆ ತಾನು ಶೂನ್ಯ ಸಹಿಷ್ಣುತೆ ನೀತಿಯನ್ನು ಹೊಂದಿರುವುದಾಗಿ ಸಾಫ್ಟ್‌ವೇರ್ ಕಂಪೆನಿ ಸ್ಪಷ್ಟಪಡಿಸಿದೆಯಲ್ಲದೆ, ನಾಸಿಕ್ ಕಚೇರಿಯಲ್ಲಿ ಲೈಂಗಿಕ ಕಿರುಕುಳದಲ್ಲಿ ಭಾಗಿಯಾಗಿದ್ದಾರೆಂದು ಹೇಳಲಾದ ಉದ್ಯೋಗಿಗಳನ್ನು ಅಮಾನತುಗೊಳಿಸಲಾಗಿದೆ.

ಟಿಸಿಎಸ್ ಘಟನೆಯು ಕಣ್ಣು ತೆರೆಸುವಂತಿದೆ. ಒಂದು ಸಮುದಾಯದ ಜನರು ಒಗ್ಗೂಡಿ, ಮಹಿಳೆಯ ಮೇಲೆ ಒತ್ತಡ ಹೇರಿದ್ದಾರೆ, ಲೈಂಗಿಕವಾಗಿ ಶೋಷಿಸಿದ್ದಾರೆ ಮತ್ತು ಆಕೆಯ ಧರ್ಮವನ್ನು ಮತಾಂತರಿಸುವಂತೆ ಒತ್ತಾಯಿಸಿದ್ದಾರೆ. ದುರದೃಷ್ಟಕರ ಸಂಗತಿಯೆಂದರೆ, ಅವರು ಮೊದಲು ದೂರು ದಾಖಲಿಸಿದ ವ್ಯವಸ್ಥಾಪಕರು ಈ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕಿತ್ತು, ಆದರೆ ಅದು ಆಗಲಿಲ್ಲ ಎಂದು ಕಾಯಂಡೆ ಹೇಳಿದರು.

ಅನೇಕ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಇಂತಹ ಕಾರ್ಯವಿಧಾನವಿದೆ ಎಂದು ಗಮನಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದರಲ್ಲದೆ, ಕಾನೂನುಗಳಿವೆ, ಆದರೆ ಅವುಗಳನ್ನು ಸೂಕ್ತವಾಗಿ ಜಾರಿಗೆ ತರಲಾಗಿಲ್ಲ ಎಂದು ತಿಳಿಸಿದರು. ಟಿಸಿಎಸ್ ತನಿಖೆಗೆ ಸಂಪೂರ್ಣವಾಗಿ ಸಹಕರಿಸಿದೆ ಮತ್ತು ಕಂಪನಿಯು ಈ ಪ್ರಕರಣದಲ್ಲಿ ಯಾವುದೇ ಪಾತ್ರವನ್ನು ಹೊಂದಿಲ್ಲ ಎಂದು ಮುಖ್ಯಮಂತ್ರಿ ಹೇಳಿದರಲ್ಲದೆ, ಟಿಸಿಎಸ್ ಸೂಚಿಸಿದ ಯಾವುದೇ ಮಾರ್ಗಸೂಚಿಗಳನ್ನು ಜಾರಿಗೆ ತರುವುದಾಗಿ ರಾಜ್ಯ ಸರಕಾರಕ್ಕೆ ಭರವಸೆ ನೀಡಿದೆ ಎಂದು ಹೇಳಿದರು.

ಆರ್‌ಟಿಒ ನೌಕರರ ಅನಿರ್ದಿಷ್ಟ ಮುಷ್ಕರ ಹಿಂದೆಗೆತ; ಸಚಿವ ಸರ್ನಾಯಕ್

ಮುಂಬಯಿ,ಜೂ.24 - ಸಾರಿಗೆ ಇಲಾಖೆಯ ನೌಕರರ ವಿವಿಧ ಬಾಕಿ ಇರುವ ಬೇಡಿಕೆಗಳ ಬಗ್ಗೆ ಸರಕಾರ ಸಕಾರಾತ್ಮಕ ನಿಲುವು ತೆಗೆದುಕೊಂಡಿರುವುದರಿಂದ ಮತ್ತು ರಾಜ್ಯದಲ್ಲಿ ಸಾರಿಗೆ ಇಲಾಖೆಯ ಕೆಲಸ ಪುನರಾರಂಭಗೊಳ್ಳುವುದರಿಂದ ಆರ್‌ಟಿಒ ನೌಕರರ ಅನಿರ್ದಿಷ್ಟ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಸಾರಿಗೆ ಸಚಿವ ಪ್ರತಾಪ್ ಸರ್ನಾಯಕ್ ವಿಧಾನಸಭೆಯಲ್ಲಿ ನೀಡಿದ ಹೇಳಿಕೆಯಲ್ಲಿ ತಿಳಿಸಿದರು.

ಸಾರಿಗೆ ಇಲಾಖೆಯ ನೌಕರರ ಸಂಘಗಳು ಜೂ.16ರಿಂದ ವಿವಿಧ ಬೇಡಿಕೆಗಳಿಗಾಗಿ ಅನಿರ್ದಿಷ್ಟ ಮುಷ್ಕರಕ್ಕೆ ಕರೆ ನೀಡಿವೆ ಎಂದು ಸರ್ನಾಯಕ್ ಹೇಳಿದರು.

ಈ ಆಂದೋಲನವು ರಾಜ್ಯದ ಲಕ್ಷಾಂತರ ನಾಗರಿಕರ ದೈನಂದಿನ ಕೆಲಸದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಸರಕಾರವು ಈ ವಿಷಯವನ್ನು ಕೇವಲ ಆಡಳಿತಾತ್ಮಕ ವಿಷಯವಾಗಿ ನೋಡಲಿಲ್ಲ, ಆದರೆ ನೌಕರರ ನಿರೀಕ್ಷೆಗಳು ಮತ್ತು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಕೋನದಿಂದ ಚರ್ಚಿಸಿದೆ. ಚರ್ಚೆಯ ಬಳಿಕ ಸರಕಾರವು ಅನೇಕ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ. ಕಚೇರಿ ಸೂಪರಿಂಟೆಂಡೆಂಟ್ ಹುದ್ದೆಗೆ ತಾತ್ಕಾಲಿಕ ಬಡ್ತಿ ಆದೇಶಗಳನ್ನು ಮುಂದಿನ ಮೂರು ತಿಂಗಳವರೆಗೆ ತಕ್ಷಣವೇ ನವೀಕರಿಸಲಾಗುತ್ತದೆ. ಈ ಬಡ್ತಿಯನ್ನು 11 ತಿಂಗಳವರೆಗೆ ಮುಂದುವರಿಸಲು ಸಾಮಾನ್ಯ ಆಡಳಿತ ಇಲಾಖೆಯ ಅನುಮೋದನೆಯನ್ನು ಕೋರಲಾಗುವುದು. ಹಿರಿಯ ಆಡಳಿತಾಧಿಕಾರಿ ಮತ್ತು ಆಡಳಿತಾಧಿಕಾರಿ ಹುದ್ದೆಗಳ 23 ಬಡ್ತಿಗಳ ಪ್ರಸ್ತಾವನೆಯನ್ನು ಸಾಮಾನ್ಯ ಆಡಳಿತ ಇಲಾಖೆಗೆ ಕಳುಹಿಸಲಾಗಿದ್ದು, ಅನುಮೋದನೆ ಬಂದ ತಕ್ಷಣ ಬಡ್ತಿ ಆದೇಶಗಳನ್ನು ನೀಡಲಾಗುವುದು ಎಂದು ಸಚಿವರು ತಿಳಿಸಿದರು. ಕಚೇರಿ ಸೂಪರಿಂಟೆಂಡೆಂಟ್ ಮತ್ತು ಕ್ಲಾಸ್-3 ಕೇಡರ್‌ನ ಎಲ್ಲಾ ಹುದ್ದೆಗಳಿಗೆ ಸೇವಾ ಪ್ರವೇಶ ನಿಯಮಗಳನ್ನು ಆದಷ್ಟು ಬೇಗ ಅಂತಿಮಗೊಳಿಸಲು ಸೂಚನೆ ನೀಡಲಾಗಿದೆ. ಕ್ಲರ್ಕ್, ಟೈಪಿಸ್ಟ್ ಮತ್ತು ಸೀನಿಯರ್ ಕ್ಲರ್ಕ್ ಹುದ್ದೆಗಳನ್ನು ಕ್ರಮವಾಗಿ 'ಸಾರಿಗೆ ಸಹಾಯಕ' ಮತ್ತು 'ಹಿರಿಯ ಸಾರಿಗೆ ಸಂಯೋಜಕ ಸಹಾಯಕ' ಎಂದು ಬದಲಾಯಿಸುವ ಬಗ್ಗೆ ಸರಕಾರ ಸಕಾರಾತ್ಮಕವಾಗಿದೆ ಮತ್ತು ಅದಕ್ಕಾಗಿ ಆಡಳಿತಾತ್ಮಕ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಎಂದು ಅವರು ಹೇಳಿದರು.

ಸಹಾಯಕ ಪೊಲೀಸ್ ಮೋಟಾರ್ ವಾಹನ ಪ್ರಾಸಿಕ್ಯೂಷನ್ ಹುದ್ದೆಗೆ ಸೇವಾ ಪ್ರವೇಶ ನಿಯಮಗಳಿಗೆ ಅಂತಿಮ ಅನುಮೋದನೆ ನೀಡುವ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ. ಹಿರಿಯ ಕ್ಲರ್ಕ್ ಮತ್ತು ಆಫೀಸ್ ಸೂಪರಿಂಟೆಂಡೆಂಟ್ ಹುದ್ದೆಗಳ ನೌಕರರಿಗೆ ಅಸ್ವಸಿತ್ ಪ್ರಗತಿ ಯೋಜನೆಯ ಪ್ರಯೋಜನವನ್ನು ನೀಡುವ ಬಗ್ಗೆ ನಿಯಮಗಳ ಪ್ರಕಾರ ತಕ್ಷಣ ನಿರ್ಧಾರ ತೆಗೆದುಕೊಳ್ಳುವಂತೆ ಸಾರಿಗೆ ಆಯುಕ್ತರಿಗೆ ಸೂಚಿಸಲಾಗಿದೆ. ಆಡಳಿತದ ಅಗತ್ಯತೆಗಳು ಮತ್ತು ಅಸ್ತಿತ್ವದಲ್ಲಿರುವ ನಿಯಮಗಳನ್ನು ಪರಿಗಣಿಸಿ ವರ್ಗಾವಣೆ ಕಾಯ್ದೆ 2005ರ ಬೇಡಿಕೆಯ ಮೇರೆಗೆ ಅಗತ್ಯ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಮಾಟುಂಗಾ:ಮೇಯರ್ ಕಣ್ಣೆದುರೇ ಒಳಚರಂಡಿಗೆ ಬಿದ್ದ ಬಿಎಂಸಿ ನೌಕರ

ಮುಂಬಯಿ,ಜೂ.24 - ಮುಂಬಯಿಯಲ್ಲಿ ಭಾರೀ ಮಳೆ ಆರಂಭವಾಗುತ್ತಿದ್ದಂತೆ ಮಾಟುಂಗಾ ಪ್ರದೇಶದಲ್ಲಿ ನಡೆದ ಘಟನೆಯೊಂದು ಹಲವರನ್ನು ಬೆಚ್ಚಿಬೀಳಿಸಿದೆ. ನಗರದಲ್ಲಿ ನೀರು ನಿಲ್ಲುವ ಸಮಸ್ಯೆ ಮತ್ತು ಚರಂಡಿಗಳ ಸ್ಥಿತಿಯನ್ನು ಪರಿಶೀಲಿಸಲು ಮೇಯರ್ ರಿತು ತಾವ್ಡೆ ತಪಾಸಣೆ ಪ್ರವಾಸದಲ್ಲಿದ್ದಾಗ, ಬಿಎಂಸಿ ಉದ್ಯೋಗಿಯೊಬ್ಬರು ಇದ್ದಕ್ಕಿದ್ದಂತೆ ತೆರೆದ ಒಳಚರಂಡಿಗೆ ಬಿದ್ದಿದ್ದು, ಈ ಇಡೀ ಘಟನೆ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅದರ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಮೇಯರ್ ಮತ್ತು ಆಡಳಿತ ಅಧಿಕಾರಿಗಳು ಮಾಟುಂಗಾ ಪ್ರದೇಶದಲ್ಲಿ ವಿವಿಧ ಚರಂಡಿಗಳು ಮತ್ತು ನೀರಿನ ಒಳಚರಂಡಿ ವ್ಯವಸ್ಥೆಗಳನ್ನು ಪರಿಶೀಲಿಸುತ್ತಿದ್ದರು. ಈ ತಪಾಸಣೆಯ ಸಮಯದಲ್ಲಿ, ಬಿಎಂಸಿ ಉದ್ಯೋಗಿಯೊಬ್ಬರು ಅಧಿಕಾರಿಗಳೊಂದಿಗೆ ಇದ್ದರು. ಅವರು ತೆರೆದ ಮ್ಯಾನ್‌ಹೋಲ್ ಬಳಿ ನಿಂತಿದ್ದಾಗ, ಇದ್ದಕ್ಕಿದ್ದಂತೆ ಸಮತೋಲನ ಕಳೆದುಕೊಂಡು ನೇರವಾಗಿ ಮ್ಯಾನ್‌ಹೋಲ್‌ಗೆ ಬಿದ್ದರು. ಇದು ಗದ್ದಲಕ್ಕೆ ಕಾರಣವಾಗಿ ಅಧಿಕಾರಿ, ಪೊಲೀಸ್ ಸಿಬ್ಬಂದಿ ಮತ್ತು ಇತರ ನೌಕರರು ತಕ್ಷಣ ಆ ನೌಕರನನ್ನು ಹೊರಗೆಳೆದರು.

ತಪಾಸಣೆ ನಡೆಯುತ್ತಿರುವಾಗ ಸಂಬಂಧಪಟ್ಟ ಉದ್ಯೋಗಿ ಒಳಚರಂಡಿ ಬಳಿ ನಿಂತಿರುವುದು ಕಂಡುಬರುತ್ತದೆ. ಕೆಲವೇ ಕ್ಷಣಗಳಲ್ಲಿ ಆತ ಸಮತೋಲನ ಕಳೆದುಕೊಂಡು ತೆರೆದ ಒಳಚರಂಡಿಗೆ ಬೀಳುತ್ತಾರೆ. ಕೂಡಲೇ ಅಲ್ಲೇ ಇದ್ದ ಪೊಲೀಸರು ಮತ್ತು ಇತರ ನೌಕರರು ತಕ್ಷಣ ಆತನನ್ನು ರಕ್ಷಿಸಿದರು. ಮಾಟುಂಗಾದಲ್ಲಿ ನಡೆದ ಈ ಘಟನೆಯು ಮಳೆಗಾಲದಲ್ಲಿ ಕೆಲಸ ಮಾಡುವ ಪಾಲಿಕೆಯ ನೌಕರರ ಸುರಕ್ಷತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿದೆ. ಭಾರೀ ಮಳೆಯ ಸಮಯದಲ್ಲಿ, ನೌಕರರು ಹೆಚ್ಚಾಗಿ ಚರಂಡಿಗಳು, ನೀರಿನ ಒಳಚರಂಡಿ ವ್ಯವಸ್ಥೆಗಳು ಮತ್ತು ನೀರು ತುಂಬಿದ ಪ್ರದೇಶಗಳನ್ನು ಪರಿಶೀಲಿಸುವಾಗ ತಮ್ಮ ಜೀವವನ್ನು ಪಣಕ್ಕಿಟ್ಟು ಕೆಲಸ ಮಾಡಬೇಕಾಗುತ್ತದೆ. ಜಾರು ಭೂಪ್ರದೇಶ, ನೀರಿನ ವೇಗದ ಹರಿವು ಮತ್ತು ತೆರೆದ ಚರಂಡಿಗಳು ಇಂತಹ ಅಪಘಾತಗಳ ನಿರಂತರ ಅಪಾಯವಾಗಿದೆ. ಆದ್ದರಿಂದ, ಅಂತಹ ಕೆಲಸ ಮಾಡುವ ನೌಕರರ ಸುರಕ್ಷತೆಯ ಬಗ್ಗೆ ಪಾಲಿಕೆಯು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬೇಡಿಕೆಯಿದೆ.

ಸಂತ ನಿರಂಕಾರಿ ಮಿಷನ್ ವತಿಯಿಂದ ಯೋಗದಿನ ಆಚರಣೆ



ಮುಂಬಯಿ, ಜೂ.24 - ಸದ್ಗುರು ಮಾತಾ ಸುದೀಕ್ಷಾ ಜಿ ಮಹಾರಾಜ್ ಮತ್ತು ನಿರಂಕಾರಿರಾಜಪಿತಾ ರಮಿತ್ ಜಿ ಅವರ ಆಶೀರ್ವಾದದೊಂದಿಗೆ ಸಂತ ನಿರಂಕಾರಿ ಮಿಷನ್‌ನ ವಿವಿಧಶಾಖೆಗಳು ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ಯೋಗ ಮತ್ತು ಆಧ್ಯಾತ್ಮಿಕಜಾಗೃತಿಯ ಮೇಲೆ ಕೇಂದ್ರೀಕರಿಸಿದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದವು.

ಈ ಅನುಕ್ರಮದಲ್ಲಿ, ಯೋಗ ದಿನವನ್ನು ಮುಂಬಯಿ ಮಹಾನಗರ ಪ್ರದೇಶದಾದ್ಯಂತ 50ಕ್ಕೂ ಹೆಚ್ಚುಸ್ಥಳಗಳಲ್ಲಿ, ಕೊಲಾಬಾದಿಂದ ವಸಾಯಿ ವಿರಾರ್‌ವರೆಗೆ, ಮುಂಬಯಿನಿಂದ ಡೊಂಬಿವಲಿ, ಕಲ್ಯಾಣ್, ಬದ್ಲಾಪುರ್ ಮತ್ತು ಥಾಣೆ, ನವಿಮುಂಬಯಿ, ಪನ್ವೇಲ್, ಉರಾನ್ ಮುಂತಾದ ಪ್ರದೇಶಗಳಲ್ಲಿ ಯೋಗತರಬೇತಿ ಅವಧಿಗಳನ್ನು ಉತ್ಸಾಹದಿಂದ ಆಯೋಜಿಸಲಾಯಿತು. ಭಕ್ತರು, ಸೇವಾದಳ ಸ್ವಯಂಸೇವಕರು ಮತ್ತು ಸ್ಥಳೀಯ ನಾಗರಿಕರು ಯೋಗ ಅವಧಿಗಳಲ್ಲಿ ಸಕ್ರಿಯವಾಗಿಭಾಗವಹಿಸಿದರು. ಅನುಭವಿಯೋಗಬೋಧಕರಮಾರ್ಗದರ್ಶನದಲ್ಲಿ ಯೋಗವನ್ನು ಅಭ್ಯಾಸಮಾಡಿದರು ಮತ್ತು ಆರೋಗ್ಯಕರ ಮತ್ತು ಸಮತೋಲಿತ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದರು.

ಸದ್ಗುರು ಮಾತಾಜಿ ತಮ್ಮ ಪ್ರವಚನದಲ್ಲಿ ಆಗಾಗ್ಗೆ ಆರೋಗ್ಯಕರ ಮನಸ್ಸು, ಸುಲಭಜೀವನ ಎಂದುಉಲ್ಲೇಖಿಸುತ್ತಾರೆ, ನಮ್ಮ ದೇಹವು ನಿರಂಕಾರ ದೇವರ ಕೊಡುಗೆಯಾಗಿದೆ ಮತ್ತು ಅದನ್ನು ಆರೋಗ್ಯಕರವಾಗಿಡುವುದು ನಮ್ಮ ಪ್ರಾಥಮಿಕ ಕರ್ತವ್ಯ ಎಂದು ವಿವರಿಸುತ್ತಾರೆ. ಆದ್ದರಿಂದ, ದೀರ್ಘ ಜೀವನ ಮತ್ತು ಸಕ್ರಿಯ, ಯಶಸ್ವಿಜೀವನಕ್ಕೆಯೋಗ ಅತ್ಯಗತ್ಯ.

ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನದ ವಿಷಯ ಆರೋಗ್ಯಕರ ಜೀವನಕ್ಕಾಗಿ ಯೋಗ, ಇದು ನಿಜವಾದ ಆರೋಗ್ಯವು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸಮತೋಲನದ ಸಂಘಟಿತರೂಪ ಎಂಬ ಸಂದೇಶವನ್ನು ನೀಡಿತು. ಈ ಮನೋಭಾವಕ್ಕೆ ಅನುಗುಣವಾಗಿ, ಸಂತ ನಿರಂಕಾರಿಮಿಷನ್ ಯೋಗವನ್ನು ಆತ್ಮಜಾಗೃತಿ, ಶಿಸ್ತು ಮತ್ತು ಜೀವನದ ಬಗ್ಗೆ ಸಕಾರಾತ್ಮಕ ದೃಷ್ಟಿಕೋನಕ್ಕಾಗಿ ಪ್ರಬಲಮಾಧ್ಯಮವೆಂದು ವಿವರಿಸುವಮೂಲಕ ಸಾರ್ವಜನಿಕ ಜಾಗೃತಿಯನ್ನುಉತ್ತೇಜಿಸಿತು.

ಕ್ರಾಟಿಕಲ್ ಟೆಕ್ ಲಿಮಿಟೆಡ್ ಐಪಿಒ ಜೂ.30ರಿಂದ ಆರಂಭ: 39.69 ಕೋಟಿ ರೂ. ಸಂಗ್ರಹದ ಗುರಿ

ಮುಂಬಯಿ,ಜೂ.24 - ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸೈಬರ್ ಸೆಕ್ಯೂರಿಟಿ ಕಂಪನಿಯಾದ ಕ್ರಾಟಿಕಲ್ ಟೆಕ್ ಲಿಮಿಟೆಡ್ ತನ್ನ ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ)ಯನ್ನು ಜೂ.30ರಿಂದ ಆರಂಭಿಸಲಿದೆ. ಬಿಎಸ್‌ಇ ಎಸ್‌ಎಂಇ ವೇದಿಕೆಯಲ್ಲಿ ಲಿಸ್ಟ್ ಆಗಲಿರುವ ಈ ಐಪಿಒ ಮೂಲಕ ಗರಿಷ್ಠ ಬೆಲೆಯಲ್ಲಿ ಒಟ್ಟು 39.69 ಕೋಟಿ ರೂ. ಬಂಡವಾಳ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಈ ಕೊಡುಗೆಗಾಗಿ ಪ್ರತಿ ಷೇರಿಗೆ 128 ರೂ.ನಿಂದ 135 ರೂ.ಗಳ ಬೆಲೆ ಪಟ್ಟಿಯನ್ನು ನಿಗದಿಪಡಿಸಲಾಗಿದ್ದು, ಹೂಡಿಕೆದಾರರು ಕನಿಷ್ಠ 1,000 ಷೇರುಗಳ ಲಾಟ್‌ಗೆ ಅರ್ಜಿ ಸಲ್ಲಿಸಬಹುದಾಗಿದೆ. ಜು.2 ರಂದು ಐಪಿಒ ಮುಕ್ತಾಯಗೊಳ್ಳಲಿದ್ದು, ಇದರಿಂದ ಬರುವ ಹಣವನ್ನು ಕಂಪನಿಯ ಜಾಗತಿಕ ವಿಸ್ತರಣೆ, ಹೊಸ ಉತ್ಪನ್ನಗಳ ಅಭಿವೃದ್ಧಿ ಹಾಗೂ ಮಾರುಕಟ್ಟೆ ಚಟುವಟಿಕೆಗಳಿಗಾಗಿ ವಿನಿಯೋಗಿಸಲಾಗುವುದು ಎಂದು ಕಂಪೆನಿಯ ಸಿಇಒ ಪವನ್ ಕುಮಾರ್ ತಿಳಿಸಿದ್ದಾರೆ.

ಅಥರ್ವಾ ಪಾಲಿಪ್ಲಾಸ್ಟ್ ಐಪಿಒ ಜೂ.30ರಿಂದ ಆರಂಭ: 27 ಕೋಟಿ ರೂ. ಬಂಡವಾಳ ಸಂಗ್ರಹದ ಗುರಿ

ಮುಂಬಯಿ,ಜೂ.24 - ಪ್ಲಾಸ್ಟಿಕ್ ಘಟಕಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಅಥರ್ವಾ ಪಾಲಿಪ್ಲಾಸ್ಟ್ ಲಿಮಿಟೆಡ್ ಕಂಪನಿಯು ತನ್ನ ಆರಂಭಿಕ ಸಾರ್ವಜನಿಕ ಕೊಡುಗೆಯನ್ನು (ಐಪಿಒ) ಜೂ.30ರಿಂದ ಹೂಡಿಕೆಗೆ ಮುಕ್ತಗೊಳಿಸುವುದಾಗಿ ಪ್ರಕಟಿಸಿದೆ. ಈ ಐಪಿಒ ಮೂಲಕ ಕಂಪನಿಯು 27 ಕೋಟಿ ರೂ.ಬಂಡವಾಳ ಸಂಗ್ರಹಿಸುವ ಗುರಿ ಹೊಂದಿದ್ದು, ಜು.2ರಂದು ಮುಕ್ತಾಯಗೊಳ್ಳಲಿದೆ. ಪ್ರತಿ ಈಕ್ವಿಟಿ ಶೇರುಗಳ ಬೆಲೆಯನ್ನು 55 ರಿಂದ 60 ರೂ.ಗಳ ಶ್ರೇಣಿಯಲ್ಲಿ ನಿಗದಿಪಡಿಸಲಾಗಿದ್ದು, ಬಿಎಸ್‌ಇ ಎಸ್‌ಎಂಇ ಪ್ಲಾಟ್‌ಫಾರ್ಮ್‌ನಲ್ಲಿ ಪಟ್ಟಿಯಾಗಲು ಪ್ರಸ್ತಾಪಿಸಲಾಗಿದೆ. ಕಚೇರಿ ಪೀಠೋಪಕರಣಗಳು, ಗೃಹೋಪಯೋಗಿ ಉಪಕರಣಗಳು ಹಾಗೂ ಆಟೋಮೊಬೈಲ್ ಕ್ಷೇತ್ರಗಳಿಗೆ ಪ್ಲಾಸ್ಟಿಕ್ ಬಿಡಿಭಾಗಗಳನ್ನು ಒದಗಿಸುವ ಈ ಸಂಸ್ಥೆಯು, ಈ ನಿಧಿಯನ್ನು ವಿಸ್ತರಣೆ ಮತ್ತು ಕಾರ್ಯಕಾರಿ ಬಂಡವಾಳದ ಅಗತ್ಯಗಳಿಗಾಗಿ ಬಳಸಿಕೊಳ್ಳಲಿದೆ. ಹೂಡಿಕೆದಾರರಿಗೆ ಇದು ಅತ್ಯುತ್ತಮ ಅವಕಾಶವಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅನುಜೀತ್ ದರಾಡೆ ತಿಳಿಸಿದ್ದಾರೆ.

ನ್ಯಾಕ್ ಪ್ಯಾಕೇಜಿಂಗ್ ಐಪಿಒ ಜು.1 ರಿಂದ ಆರಂಭ: 380 ಕೋಟಿ ರೂ. ಬಂಡವಾಳ ಸಂಗ್ರಹದ ಗುರಿ

ಮುಂಬಯಿ,ಜೂ.24 - ಪ್ಯಾಕೇಜಿಂಗ್ ಪರಿಹಾರಗಳ ಪ್ರಮುಖ ಸಂಸ್ಥೆಯಾದ ನ್ಯಾಕ್ ಪ್ಯಾಕೇಜಿಂಗ್ ಲಿಮಿಟೆಡ್ ತನ್ನ ಆರಂಭಿಕ ಸಾರ್ವಜನಿಕ ಕೊಡುಗೆಯನ್ನು (ಐಪಿಒ) ಜು.1 ರಂದು ಹೂಡಿಕೆಗೆ ಮುಕ್ತಗೊಳಿಸಲಿದೆ. ಈ ಐಪಿಒ ಜು. 3 ರಂದು ಮುಕ್ತಾಯಗೊಳ್ಳಲಿದ್ದು, ಪ್ರತಿ ಶೇರುಗಳ ಬೆಲೆಯನ್ನು 161 ರೂ. ನಿಂದ 170 ರೂ. ಗಳ ಶ್ರೇಣಿಯಲ್ಲಿ ನಿಗದಿಪಡಿಸಲಾಗಿದೆ. ಕಂಪನಿಯು ಈ ಕೊಡುಗೆಯ ಮೂಲಕ 3,800 ಮಿಲಿಯನ್ ರೂಪಾಯಿಗಳ (380 ಕೋಟಿ ರೂ.) ಹೊಸ ಶೇರುಗಳನ್ನು ಬಿಡುಗಡೆ ಮಾಡಲಿದ್ದು, ಪ್ರವರ್ತಕರಿಂದ 35 ಲಕ್ಷ ಶೇರುಗಳ ಮಾರಾಟದ ಪ್ರಸ್ತಾಪವೂ ಇದರಲ್ಲಿದೆ. ಹೂಡಿಕೆದಾರರು ಕನಿಷ್ಠ 88 ಶೇರುಗಳಿಗೆ ಬಿಡ್ ಸಲ್ಲಿಸಬಹುದಾಗಿದೆ. ಗುಜರಾತ್‌ನಲ್ಲಿ ಉತ್ಪಾದನಾ ಘಟಕಗಳನ್ನು ಹೊಂದಿರುವ ಈ ರಫ್ತು ಆಧಾರಿತ ಸಂಸ್ಥೆಯು ಜಾಗತಿಕವಾಗಿ 71 ದೇಶಗಳಿಗೆ ತನ್ನ ಉತ್ಪನ್ನಗಳನ್ನು ಪೂರೈಸುತ್ತಿದ್ದು, ಶೇರುಗಳನ್ನು ಎನ್‌ಎಸ್‌ಇ ಮತ್ತು ಬಿಎಸ್‌ಇಯಲ್ಲಿ ಪಟ್ಟಿ ಮಾಡಲು ನಿರ್ಧರಿಸಲಾಗಿದೆ.

ಷೇರು ಮಾರುಕಟ್ಟೆ

ಸೆನ್ಸೆಕ್ಸ್ : 76,991.22 + 790.54

ನಿಫ್ಟಿ : 24,021.65 + 197.55

ಚಿನ್ನ

22 ಕ್ಯಾರೆಟ್ : 1,32,300 ರೂ. (10 ಗ್ರಾಮ್‌ಗೆ)

24 ಕ್ಯಾರೆಟ್ : 1,44,330 ರೂ. (10 ಗ್ರಾಮ್‌ಗೆ)

ಬೆಳ್ಳಿ : 2,45,000 ರೂ. (ಒಂದು ಕೆಜಿಗೆ)

ಸುಡೊಕು 1833

9		2		4	1	7		
1						6		
5	7	3	2				4	
				9	4	8		
4		7				9		6
		5	8	3				
	3				6	5	9	1
		6						7
		9	1	8		2		4

MANGAL SENACHA, BANGALORE

1ರಿಂದ 9 ರ ನರೆಗಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1832

5	4	9	1	8	3	2	6	7
1	2	6	4	9	7	3	5	8
3	8	7	5	2	6	1	4	9
8	7	1	3	4	2	6	9	5
9	5	3	6	1	8	7	2	4
2	6	4	7	5	9	8	1	3
4	3	5	2	7	1	9	8	6
6	9	2	8	3	4	5	7	1
7	1	8	9	6	5	4	3	2

ಪದಬಂಧ - 1915



ಎಡದಿಂದ ಬಲಕ್ಕೆ

1.ಮನಸ್ಸಿಗೆ ಉಂಟಾದ ವ್ಯಥೆ, ದ್ವೇಷ, ವಿರಸ -4
3.ಪುಸ್ತಕ ಪ್ರಕಟನಕಾರ-4
5.ವಿಷ್ಣುವಿನ ಮೂರನೇ ಅವತಾರ ಹಿಂದುರುಗಿದೆ -3
6.ಪಟ್ಟಣಗಳಲ್ಲಿ ಅಂಗಡಿಗಳಿರುವ ರಸ್ತೆ -4
7.ಕೋಣೆಯಲ್ಲಿ ಕಂಡ ಎಮ್ಮೆ -2
8.ಪವಿತ್ರ ಜಲ ತುಂಬಿದ ಕೊಡ -3
10.ಹುಲಸಾಗಿ ಬೆಳೆದ ಸಿಹಿ ತೊಳೆಗಳ ಹಣ್ಣು -3
13.ಸಂಪ್ರದಾಯ ಹಿಂದಿರುಗಿ ನೋಡಿದರೆ ಜುವಾರಿಯಾಗುತ್ತದೆ -3
15.ಸಂವತ್ಸರ ಚಕ್ರದಲ್ಲಿ ಮೊದಲನೆಯ ವರ್ಷ -3
17.ಇತಿಯೊಂದಿಗೆ ಬರುವುದು -2
18.ಸರಸವಲ್ಲ, ಸರೋವರದಲ್ಲಿ ಹುಟ್ಟಿದುದು -4
19.ಇದು ಅಂತಿಮವಾದದ್ದು -3
20.ಓಟು ನೀಡುವ ಪ್ರಜೆ -4
21.ಎಲ್ಲರೂ ಕೂಡಿ ಬದುಕುವ ಒಟ್ಟು ಕುಟುಂಬ -4

ಮೇಲಿನಿಂದ ಕೆಳಕ್ಕೆ

2.ಕೃಶ ಶರೀರದ ನರ -5
3.ಏಳಿಗೆಗೆ ಪ್ರೇರೇಪಿಸುವ ಪ್ರೇರಕ-4
4.ಈ ಕೋಶದಲ್ಲಿ ತುಂಬಿರುವುದು ಶಬ್ದರಾಶಿ -4
5.ಹದಿನೈದರ ಬಳಿಕ ಸಿಗುವುದಿದು-4
9.ಹರಿಯುವ ಲಯ -3
11.ಇದರಲ್ಲಿ ಕಷ್ಟ ಇಲ್ಲ -3
12.ಸರಿಗಮದಂತೆ ಸಮನಾಗಿರುವುದು -4
14.ವಿಷ್ಣುವಿನ ಈ ಹೆಸರಿನಲ್ಲಿ ತಾವರೆ ಇದೆ -5
15.ತುಂಬಾ ಮಹತ್ತರವಾದುದು-4
16.ಕಾಡಲ್ಲೇ ಅಡ್ಡಾಡುವ ಜೀವಿ -4

ಉತ್ತರ - 1914



ಮಾತೃಭೂಮಿ ಕೋ -ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್; ಜೂ. 29ರಂದು ವಸಾಯಿ ಪಶ್ಚಿಮದಲ್ಲಿ ಶಾಖೆ ಉದ್ಘಾಟನೆ



ಪ್ರವೀಣ್ ಭೋಜ ಶೆಟ್ಟಿ, ಉಳ್ತೂರು ಮೋಹನದಾಸ್ ಶೆಟ್ಟಿ, ಡಾ. ಆರ್.ಕೆ. ಶೆಟ್ಟಿ, ಕಿಶೋರ್ ಕುಮಾರ್ ಕುತ್ಯಾರು, ಸಿಎ ಹರೀಶ್ ಡಿ. ಶೆಟ್ಟಿ, ಮಹೇಶ್ ಎಸ್. ಶೆಟ್ಟಿ, ಶಶಿಧರ್ ಕೆ. ಶೆಟ್ಟಿ ಇನ್ನಂಜೆ



ಸಿಎ, ಜಗದೀಶ್ ಬಿ. ಶೆಟ್ಟಿ, ಸುನಂದಾ ಡಿ. ಶೆಟ್ಟಿ, ಸಿಎ ರಾಜಶ್ರೀ ಜಿ. ಶೆಟ್ಟಿ, ಸಂತೋಷ್ ಎಂ ಜವಾಂದಳೆ

ಮುಂಬಯಿ, ಜೂ. 24 - ಮುಂಬೈಯ ಬಂಟ ಸಮಾಜದ ಬಂಧುಗಳ ಆಡಳಿತದಲ್ಲಿರುವ ಮಾತೃಭೂಮಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಕಳೆದ 20 ವರ್ಷಗಳಿಂದ ವಸಾಯಿ ಪರಿಸರದ ಗ್ರಾಹಕರ ಅನುಕೂಲತೆಗಾಗಿ ತೊಡಗಿಕೊಂಡಿದ್ದು, ಇದೀಗ ವಸಾಯಿ ಅಂಬಾಡಿ ರೋಡ್, ವಿಶ್ವಕರ್ಮ ನಗರ ಬಳಿ ಇರುವ ಬಿಲ್ಡಿಂಗ್ ನಂಬರ 5, ಶಾಪ್ ನಂಬರ್ 9 ಪೂರ್ಣ ಪ್ರಮಾಣದ ಶಾಖೆಯಾಗಿ ಗ್ರಾಹಕರ ಸೇವಾ ಸೌಲಭ್ಯಕ್ಕಾಗಿ ಜೂ. 29ರಂದು ಸೋಮವಾರ ಬೆಳಿಗ್ಗೆ 10.00 ರಿಂದ ಶುಭ ಆರಂಭಗೊಳ್ಳಲಿದೆ.

ಅಂದು ಬೆಳಿಗ್ಗೆ 10.00 ಕ್ಕೆ ಶ್ರೀ ಸತ್ಯನಾರಾಯಣ ಮಹಾಪೂಜೆ ಬಳಿಕ ಈ ಸುಸಜ್ಜಿತ ಶಾಖೆ ಉದ್ಘಾಟನೆಗೊಳ್ಳಲಿದೆ. ಗ್ರಾಹಕರಿಗೆ ವಿಶೇಷ ಮಾಹಿತಿಯನ್ನು ನೀಡುವ ಉದ್ದೇಶದಿಂದ, ವಸಾಯಿ ಪೂರ್ವದ 60 ಫೀಟ್ ಅಂಬಾಡಿ ರಸ್ತೆಯಲ್ಲಿರುವ ಸ್ವಾಮಿ ನಾರಾಯಣ ಮಂದಿರದ ಸಭಾಂಗಣದಲ್ಲಿ ಮಧ್ಯಾಹ್ನ 12:00 ಗಂಟೆಗೆ ವಿಶೇಷ ಸಭಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ನಂತರ ಪ್ರಸಾದ ರೂಪದಲ್ಲಿ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದೆ.

ಮಾತೃಭೂಮಿ ಸಂಸ್ಥೆಯು ಮುಂಬೈಯ ಆರ್ಥಿಕ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ತಾನು ಸಾಧಿಸಿದ ಸ್ಥಾನಮಾನದಿಂದ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗುತ್ತ ಜನಮನ ಗೆದ್ದಿದೆ. ಸಂಸ್ಥೆಯನ್ನು ಆರ್ಥಿಕವಾಗಿ ಶಕ್ತಿಗೊಳಿಸಿ, ಅದರ ಅಭಿವೃದ್ಧಿಗೆ ಕಾರಣರಾದ ಸ್ಥಾಪಕ ಕಾರ್ಯಾಧ್ಯಕ್ಷರಾಗಿದ್ದ ದಿ. ವಿ. ಕೆ. ಶೆಟ್ಟಿ, ಆನಂತರ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಭುಜಂಗ ಎಂ. ಶೆಟ್ಟಿ, ದಿ. ಸೀತಾರಾಮ ಶೆಟ್ಟಿ ಕಡಂದಲೆ, ಶಿವರಾಮ್ ಜಿ. ಶೆಟ್ಟಿ, ಕೆ. ಡಿ. ಶೆಟ್ಟಿ, ಸಿಎ ಶಂಕರ್ ಶೆಟ್ಟಿ, ರತ್ನಾಕರ್ ಶೆಟ್ಟಿ ಮುಂಡ್ಕೂರು, ಇಂದಿನ ವರೆಗೂ ಇವರುಗಳ ಸೇವೆ ಅನನ್ಯ. ಮಾತೃಭೂಮಿಯ ಪ್ರಸ್ತುತ ಕಾರ್ಯಾಧ್ಯಕ್ಷರಾಗಿರುವ ಉಳ್ತೂರು ಮೋಹನದಾಸ್ ಶೆಟ್ಟಿಯವರು, ಆಡಳಿತ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರ, ಸಿಬ್ಬಂದಿ ವರ್ಗ ಹಾಗೂ ಡೈಲಿ ಕಲೆಕ್ಷನ್ ಏಜೆಂಟ್ ಅದಮ್ಯ ಉತ್ಸಾಹ, ಪರಿಶ್ರಮ ಶ್ಲಾಘನೀಯವಾಗಿದೆ.

ಸಂಸ್ಥೆಯ ಕಾರ್ಯವ್ಯಾಪ್ತಿ ಮುಂಬೈ ಮಹಾನಗರ ಹಾಗೂ ಉಪನಗರದ ಸಾಕಿನಾಕಾ, ಥಾಣೆ, ಕಲ್ಯಾಣ್, ವಾಶಿಗೂ ವಿಸ್ತರಿಸಿದೆ. ಸದಸ್ಯರಿಗೆ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಸಂಗ್ರಹ ಕೇಂದ್ರಗಳನ್ನು ಸಂಪೂರ್ಣ ಶಾಖೆಗಳಾಗಿ ಪರಿವರ್ತಿಸುವ ಗುರಿಯನ್ನು ಸೊಸೈಟಿ ಹೊಂದಿದೆ.

ಮಾತೃಭೂಮಿ ಸೊಸೈಟಿಗೆ ಲೆಕ್ಕಪರಿಶೋಧನೆ (ಆಡಿಟ್) ವರ್ಗೀಕರಣದಲ್ಲಿ 'ಎ' ದರ್ಜೆಯ ಸತತ ಮಾನ್ಯತೆ ಲಭಿಸಿದೆ. ಸೊಸೈಟಿಯು ತನ್ನದೇ ಆದ ಎರಡು ಸ್ವಂತ ಕಚೇರಿಗಳನ್ನು ಹೊಂದಿದೆ. 2025 ಮಾರ್ಚ್ 31 ರವರೆಗಿನ ಲೆಕ್ಕಪರಿಶೋಧಕರ ವರದಿಯಂತೆ ಮಾತೃಭೂಮಿ ಶೇರು ಬಂಡವಾಳ 25.61 ಕೋಟಿಗೇರಿದ್ದು ಒಟ್ಟು ಸಂಗ್ರಹ ರೂ. 37.71 ಕೋಟಿ, ಒಟ್ಟು ಠೇವಣಿ ರೂ. 170.20 ಕೋಟಿಗೆ ತಲುಪಿದೆ. ಒಟ್ಟು ಮುಂಗಡ ಮೊತ್ತ ರೂ. 189.93 ಕೋಟಿ, ನಿವಳ ಮೌಲ್ಯ ರೂ.60.13 ಕೋಟಿ. ಒಟ್ಟು ವ್ಯವಹಾರ ರೂ.360 ಕೋಟಿ ಮತ್ತು ನಿವ್ವಳ ಎನ್‌ಪಿಎ ಸತತವಾಗಿ ಮೂರು ವರ್ಷದಿಂದ ಶೂನ್ಯವನ್ನು ಕಾಯ್ದುಕೊಂಡಿದೆ. 2025ನೇ ಸಾಲಿನಲ್ಲಿ ತನ್ನ ಎಲ್ಲಾ ಸದಸ್ಯರಿಗೆ ಶೇ.13 ಲಾಭಾಂಶ (ಡಿವಿಡೆಂಡ್) ಪಾವತಿಸಿದೆ.

ಠೇವಣಿ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಗಾಗಿ AVIES ಪ್ರಕಾಶನ, ಕೊಲ್ಹಾಪುರ ಹಾಗೂ ಗ್ಯಾಲಕ್ಸಿ INMA ಆಯೋಜಿಸುವ 'ಬಾಂಕೋ ಬ್ಲೂ ರಿಬ್ಬನ್ ಅವಾರ್ಡ್' ಅನ್ನು ಮಾತೃಭೂಮಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯು ಸತತ ಆರು ವರ್ಷಗಳಿಂದ ತನ್ನದಾಗಿಸಿಕೊಂಡಿದೆ. ಮಾತೃಭೂಮಿ ಕೋ -ಆಪರೇಟಿವ್ ಕ್ರೆಡಿಟ್ ಸೊಸೈಟಿ ಈಗಾಗಲೇ ವಿಶೇಷ ಪಟ್ಟಿ ದರದಲ್ಲಿ ವ್ಯಾಪಾರ, ಗೃಹ, ವಾಹನ, ಶಿಕ್ಷಣ, ಯಂತ್ರೋಪಕರಣಗಳ ಖರೀದಿ, ಎಲ್ಐಸಿ/ಎನ್ಎಸ್ಸಿ/ಕೆವಿಪಿ, ಲೀಸ್ ರೆಂಟ್ ಡಿಸ್ಕೌಂಟಿಂಗ್ ಸಾಲ, ಚಿನ್ನದ ಆಭರಣಗಳ ಮೇಲಿನ ಸಾಲದ ವ್ಯವಸ್ಥೆಯನ್ನು ಹಾಗೂ ವಿಶೇಷ ದರದಲ್ಲಿ ಠೇವಣಿದಾರರಿಗೆ ಬಡ್ಡಿ ನೀಡುತ್ತಾ ಬಂದಿದೆ.

ಜೂನ್ 29 ರಿಂದ ವಸಾಯಿ ತಾಲೂಕಿನಲ್ಲಿರುವ ಎಲ್ಲಾ ಗ್ರಾಹಕರಿಗೆ ಹಾಗೂ ಪರಿಸರದ ಹಿತೈಷಿಗಳಿಗೆ, ತುಳು ಕನ್ನಡಿಗರಿಗೆ ಮಾತೃಭೂಮಿ ಕೋ -ಆಪರೇಟಿವ್ ಕ್ರೆಡಿಟ್ ಸೊಸೈಟಿ ಅನುಕೂಲ ಆಗುವ ರೀತಿಯಲ್ಲಿ ವಿಶೇಷ ಬಡ್ಡಿ ದರದಲ್ಲಿ ಒಂದು ಲಕ್ಷದವರೆಗೆ ವೈಯಕ್ತಿಕ ಸಾಲ ಹಾಗೂ ಚಿನ್ನದ ಆಭರಣಗಳ ಮೇಲೆ ನೀಡುವ ಸೌಲಭ್ಯವನ್ನು ಹಾಗೂ ಠೇವಣಿದಾರರಿಗೆ ಆಕರ್ಷಕ ಬಡ್ಡಿ ದರದಲ್ಲಿ `GROW FAST FIXED DEPOSIT SCHEME` ಉದ್ಘಾಟನೆ ದಿನದಿಂದಲೇ ಪ್ರಾರಂಭಗೊಳ್ಳಲಿದೆ.

ವಸಾಯಿ ನಾಲಾಸೋಪಾರ. ವಿರಾರ್, ಮೀರಾ ರೋಡ್ ಪರಿಸರದ ಗ್ರಾಹಕರಿಗೆ ಹಿತೈಷಿಗಳಿಗೆ ಮತ್ತು ಸಮಾಜ ಬಾಂಧವರ ಅನುಕೂಲತೆಗಾಗಿ ಶುಭಾರಂಭಗೊಳ್ಳಲಿರುವ ಶಾಖೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು, ಗ್ರಾಹಕರು, ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ಮಾತೃಭೂಮಿ ಕೋ-ಆಪರೇಟಿವ್ ಸೊಸೈಟಿಯ ಕಾರ್ಯಾಧ್ಯಕ್ಷರಾಗಿರುವ ಉಳ್ತೂರು ಮೋಹನದಾಸ್ ಶೆಟ್ಟಿ, ಉಪಕಾರ್ಯಾಧ್ಯಕ್ಷರಾದ ಡಾ. ಆರ್.ಕೆ. ಶೆಟ್ಟಿ, ಗೌರವ ಕಾರ್ಯದರ್ಶಿ ಕಿಶೋರ್ ಕುಮಾರ್ ಕುತ್ಯಾರು, ಗೌರವ ಖಜಾಂಚಿ ಸಿಎ ಹರೀಶ್ ಡಿ. ಶೆಟ್ಟಿ, ನಿರ್ದೇಶಕರಾದ ಪ್ರವೀಣ್ ಭೋಜ ಶೆಟ್ಟಿ, ಮಹೇಶ್ ಎಸ್. ಶೆಟ್ಟಿ, ಶಶಿಧರ್ ಕೆ. ಶೆಟ್ಟಿ ಇನ್ನಂಜೆ, ಸಿಎ, ಜಗದೀಶ್ ಬಿ. ಶೆಟ್ಟಿ, ಸುನಂದಾ ಡಿ. ಶೆಟ್ಟಿ, ಸಿಎ ರಾಜಶ್ರೀ ಜಿ. ಶೆಟ್ಟಿ, ಸಂತೋಷ್ ಎಂ ಜವಾಂದಳೆ, ಮಾತೃಭೂಮಿಯ ಸಲಹಾ ಸಮಿತಿ ಸದಸ್ಯರು, ಮಾಜಿ ಅಧ್ಯಕ್ಷರು, ಸಿಬ್ಬಂದಿ ವರ್ಗ ವಿನಂತಿಸಿಕೊಂಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಮೊಬೈಲ್ ಸಂಖ್ಯೆಯನ್ನು 7400187906 / 8828800735 ವಸಾಯಿ ಶಾಖೆ ಮೊಬೈಲ್ ನಂ. 8369353598/9226947243 ಸಂಪರ್ಕಿಸಲು ಕೋರಲಾಗಿದೆ.

ಲೈಂಗಿಕ ಕಿರುಕುಳ ; ಡೆಲ್ಲಿ ಕ್ಯಾಪಿಟಲ್ಸ್ ಬ್ಯಾಟರ್ ಅಭಿಷೇಕ್ ಪೊರೆಲ್ ವಿರುದ್ಧ ದೂರು ದಾಖಲು



ಹೊಸದಿಲ್ಲಿ, ಜೂ.24 - ಬಂಗಾಳ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿಕೆಟ್ ಕೀಪರ್-ಬ್ಯಾಟರ್ ಅಭಿಷೇಕ್ ಪೊರೆಲ್ ವಿರುದ್ಧ ಮಹಿಳೆಯೊಬ್ಬರು ಪೊಲೀಸರಿಗೆ ದೂರು ದಾಖಲಿಸಿದ್ದಾರೆ. ಅಭಿಷೇಕ್ ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿ ಲೈಂಗಿಕ ಸಂಬಂಧ ಹೊಂದಿದ್ದಾರೆ ಮತ್ತು ತನ್ನ ಮೇಲೆ ಹಲ್ಲೆ ನಡೆಸಿ, ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಹಿಂದೆ ಭಾರತ ಎ ತಂಡದೊಂದಿಗೆ ಯುಕೆ ಮತ್ತು ಆಸ್ಟ್ರೇಲಿಯಾಕ್ಕೆ ಪ್ರಯಾಣಿಸಿದ್ದ ಪೊರೆಲ್, ಈ ಎಲ್ಲ ಆರೋಪಗಳನ್ನು ಬಲವಾಗಿ ನಿರಾಕರಿಸಿದ್ದಾರೆ.

ಹೂಗ್ಲಿ ಜಿಲ್ಲೆಯ ಮೋಗ್ರಾ ಪೊಲೀಸ್ ಠಾಣೆಯಲ್ಲಿ ಮಹಿಳೆ ಮತ್ತು ಅವರ ತಾಯಿ ಮಂಗಳವಾರ ದೂರು ದಾಖಲಿಸಿದ್ದು, ಈ ಬಗ್ಗೆ ತನಿಖೆ ಆರಂಭಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ದೂರಿನ ಪ್ರಕಾರ, ಮಹಿಳೆ ಮತ್ತು ಪೊರೆಲ್ ಕಳೆದ ಮೂರು ವರ್ಷಗಳಿಂದ ಸಂಬಂಧದಲ್ಲಿದ್ದರು ಮತ್ತು ಕಳೆದ ವರ್ಷ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡವು. ನಂತರ ಕ್ರಿಕೆಟಿಗ ತನ್ನಿಂದ 'ದೂರ' ಹೋಗಲು ಪ್ರಾರಂಭಿಸಿದರು. ಪೊರೆಲ್ ತನ್ನನ್ನು ಮದುವೆಯಾಗುವುದಾಗಿ ಭರವಸೆ ನೀಡಿದ್ದರು. ಆದರೆ, ಮದುವೆಯಾಗಲು ನಿರಾಕರಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ದೂರಿನಲ್ಲಿ, ಪೊರೆಲ್ ಮದುವೆಯಾಗುವುದಾಗಿ ಭರವಸೆ ನೀಡುವ ಮೂಲಕ ತನ್ನೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದರು ಮತ್ತು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಮತ್ತು ಬೆದರಿಕೆಯೊಡ್ಡಿದ್ದಾರೆ ಎಂಬ ಆರೋಪವನ್ನೂ ಮಾಡಿದ್ದಾರೆ.

ನಾವು ದೂರು ಸ್ವೀಕರಿಸಿದ್ದೇವೆ ಮತ್ತು ತನಿಖೆ ಪ್ರಾರಂಭಿಸಿದ್ದೇವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಸದ್ಯ ಬೆಂಗಳೂರಿನಲ್ಲಿ ಇರುವ ಪೊರೆಲ್, ಈ ಆರೋಪಗಳನ್ನು ನಿರಾಕರಿಸಿದ್ದಾರೆ ಮತ್ತು ಅವು ಸುಳ್ಳು ಎಂದಿದ್ದಾರೆ. ಪೊಲೀಸರು ತಮ್ಮನ್ನು ಇನ್ನೂ ಸಂಪರ್ಕಿಸಿಲ್ಲ ಎಂದು ಹೇಳಿದರು.

ನಾನು ಈಗ ಚೆನ್ನಾಗಿ ಆಡುತ್ತಿದ್ದೇನೆ. ಆದ್ದರಿಂದ, ವಿವಿಧ ವಿಷಯಗಳು ಬರುತ್ತಿವೆ. ಪೊಲೀಸರು ತಮ್ಮ ಆರಂಭಿಕ ವಿಚಾರಣೆಯನ್ನು ಪೂರ್ಣಗೊಳಿಸಿದ ನಂತರ ಈ ಬಗ್ಗೆ ಪ್ರತಿಕ್ರಿಯಿಸುತ್ತೇನೆ. ಪೊಲೀಸರು ತನಿಖೆ ನಡೆಸಿದಾಗ ನಾನು ಇದರ ಬಗ್ಗೆ ಮಾತನಾಡುತ್ತೇನೆ. ನಾನು ಇನ್ನೂ ಪೊಲೀಸರೊಂದಿಗೆ ಮಾತನಾಡಿಲ್ಲ ಎಂದು 23 ವರ್ಷದ ಪೊರೆಲ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.ಅಗ್ರ ಕ್ರಮಾಂಕದ ಎಡಗೈ ಬ್ಯಾಟ್ಸ್‌ಮನ್ ಆಗಿರುವ ಪೊರೆಲ್, 2023ರಿಂದ ಇಂಡಿಯನ್ ಪ್ರೀಮಿಯರ್‌ಲೀಗ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಕಳೆದ ಆವೃತ್ತಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಪರ ನಾಲ್ಕು ಇನಿಂಗ್ಸ್‌ಗಳಿಂದ 108 ರನ್ ಗಳಿಸಿದ್ದಾರೆ. ಅವರು 2021-22ರ ಆವೃತ್ತಿಯಲ್ಲಿ ಬಂಗಾಳ ಪರ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. 32 ಪ್ರಥಮ ದರ್ಜೆ ಮತ್ತು 23 ಲಿಸ್ಟ್ ಎ ಪಂದ್ಯಗಳನ್ನು ಆಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಮತ್ತು ಅವರ ಪುತ್ರನ ಮೇಲೆ ಭೂಕಬಳಿಕೆ ಆರೋಪ



ಹೊಸದಿಲ್ಲಿ, ಜೂ. 24 - ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಪುತ್ರ ಪ್ರಿಯಾಂಕ್ ಖರ್ಗೆ ಕರ್ನಾಟಕದ ಹಲವಾರು ಸ್ಥಳಗಳಲ್ಲಿ ಭೂಮಿ ಕಬಳಿಕೆ ಮಾಡಲು ತಮ್ಮ 'ಅಧಿಕಾರ ಮತ್ತು ಪ್ರಭಾವ'ವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಬಿಜೆಪಿ ಬುಧವಾರ ಆರೋಪಿಸಿದೆ. ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ವಿರುದ್ಧ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದೂ ಪಕ್ಷ ಪ್ರಶ್ನಿಸಿದೆ.

ಇಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪಕ್ಷದ ವಕ್ತಾರ ಪ್ರದೀಪ್ ಭಂಡಾರಿ, ಖರ್ಗೆ ಮತ್ತು ಅವರ ಮಗ (ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿದ್ದಾರೆ) ತಮ್ಮ 'ಸಿದ್ಧಾರ್ಥ ವಿಹಾರ್ ಟ್ರಸ್ಟ್' ಮೂಲಕ ಕಾಂಗ್ರೆಸ್ ಆಡಳಿತವಿರುವ ರಾಜ್ಯದಲ್ಲಿ 'ಭೂಕಬಳಿಕೆ'ಯಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

''ಅವರ ಕಾರ್ಯವೈಖರಿ ರಾಬರ್ಟ್ ವಾದ್ರಾ ಮತ್ತು ರಾಹುಲ್ ಗಾಂಧಿ ಕುಟುಂಬದಿಂದ ಪ್ರೇರಿತವಾಗಿದೆ'' ಎಂದು ಅವರು ಆರೋಪಿಸಿದರು.

ಬಿಜೆಪಿಯ ಆರೋಪಕ್ಕೆ ಕಾಂಗ್ರೆಸ್ ಅಥವಾ ಖರ್ಗೆಯಿಂದ ತಕ್ಷಣದ ಪ್ರತಿಕ್ರಿಯೆ ಬಂದಿಲ್ಲ.ಮಧ್ಯಪ್ರದೇಶದಲ್ಲಿ 'ಭೂ ಹಗರಣ'ದ ಹಿಂದಿರುವವರನ್ನು ಕೇಂದ್ರ ತನಿಖಾ ಸಂಸ್ಥೆಗಳು ಏಕೆ ತನಿಖೆ ಮಾಡುತ್ತಿಲ್ಲ ಎಂದು ಕಾಂಗ್ರೆಸ್ ಪಕ್ಷ ಪ್ರಶ್ನಿಸಿದ ಒಂದು ದಿನದ ನಂತರ ಖರ್ಗೆ ಮತ್ತು ಅವರ ಮಗನ ಮೇಲೆ ಬಿಜೆಪಿ ದಾಳಿ ಮಾಡಿದೆ. ಮುಖ್ಯಮಂತ್ರಿ ಮೋಹನ್ ಯಾದವ್ ಅವರ ಕುಟುಂಬ ಸದಸ್ಯರು ಭಾಗಿಯಾಗಿದ್ದಾರೆಂದು ಹೇಳುವ ಮಾಧ್ಯಮ ವರದಿಗಳನ್ನು ಕಾಂಗ್ರೆಸ್ ಉಲ್ಲೇಖಿಸಿದೆ.

ಯಾದವ್ ವಿರುದ್ಧದ ಆರೋಪಗಳನ್ನು ಬಿಜೆಪಿ 'ಆಧಾರರಹಿತ' ಎಂದು ತಳ್ಳಿಹಾಕಿದೆ.ಏರೋಸ್ಪೇಸ್ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಬೆಂಗಳೂರಿನಲ್ಲಿರುವ ಸಿದ್ಧಾರ್ಥ್ ವಿಹಾರ್‌ಟ್ರಸ್ಟ್‌ಗೆ ಕಾಂಗ್ರೆಸ್ ಸರ್ಕಾರ 100 ಕೋಟಿ ರೂ.ಮೌಲ್ಯದ 5 ಎಕರೆ ಭೂಮಿಯನ್ನು ನೀಡಿದೆ. ಟ್ರಸ್ಟ್‌ಗೆ ಅಂತಹ ಕೆಲಸದಲ್ಲಿ ಹಿಂದಿನ ಅನುಭವವಿಲ್ಲದಿದ್ದರೂ ಸಹ ನೀಡಿದೆ ಎಂದು ಭಂಡಾರಿ ಬುಧವಾರ ಆರೋಪಿಸಿದ್ದಾರೆ.ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಗುಲ್ಬರ್ಗ ಜಿಲ್ಲೆಯಲ್ಲಿ 19 ಎಕರೆ ಭೂಮಿಯನ್ನು ಸಿದ್ಧಾರ್ಥ್ ವಿಹಾರ್ ಟ್ರಸ್ಟ್‌ಗೆ 2016 ರಲ್ಲಿ 30 ವರ್ಷಗಳ ಅವಧಿಗೆ ಗುತ್ತಿಗೆಯಾಗಿ ನೀಡಿತು, ನಂತರ ಅದನ್ನು ಖಾರ್ಗೆ ಕುಟುಂಬದ 'ಶಾಶ್ವತ ಆಸ್ತಿ'ಯನ್ನಾಗಿ ಮಾಡಲು ಶಾಶ್ವತ ಪರಿವರ್ತಿಸಲಾಯಿತು ಎಂದು ಬಿಜೆಪಿ ವಕ್ತಾರರು ಹೇಳಿದ್ದಾರೆ. ಅವರು ಕಾಂಗ್ರೆಸ್ ಅಧ್ಯಕ್ಷರು ಮತ್ತು ಅವರ ಪುತ್ರ 'ಭ್ರಷ್ಟಾಚಾರ ಮತ್ತು ಅಕ್ರಮಗಳ' ಎಸಗಿದ್ದಾರೆ ಎಂದು ಆರೋಪ ಮಾಡಿದ್ದಾರೆ.

''ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿರುವ ಮಲ್ಲಿಕಾರ್ಜುನ್ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರು ರಾಜ್ಯದಲ್ಲಿ ತಮ್ಮ ಅಧಿಕಾರ ಮತ್ತು ಪ್ರಭಾವವನ್ನು ಬಳಸಿಕೊಂಡು ಹಲವಾರು ಭೂಮಿಗಳನ್ನು ಕಬಳಿಸಿದ್ದಾರೆ ಮತ್ತು ವಿವಿಧ ಸ್ಥಳಗಳಲ್ಲಿ ಭೂಮಿಯನ್ನು ಲೂಟಿ ಮಾಡಲು ಪ್ರಯತ್ನಿಸಿದ್ದಾರೆ'' ಎಂದು ಭಂಡಾರಿ ಹೇಳಿದರು.

''ಇದು ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ನಿಬಂಧನೆಗಳ ಉಲ್ಲಂಘನೆಯಾಗಿದೆ. ಇದು ಕಾನೂನಿನಡಿಯಲ್ಲಿ ಶಿಕ್ಷಾರ್ಹ ಅಪರಾಧ'' ಎಂದು ಬಿಜೆಪಿ ವಕ್ತಾರರು ಆರೋಪಿಸಿದ್ದಾರೆ. ಈ ವಿಷಯದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಖರ್ಗೆ ಮತ್ತು ಅವರ ಪುತ್ರನ ವಿರುದ್ಧ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.2018ರ ಸಿಎಜಿ ವರದಿಯು ಈ ವಿಷಯವನ್ನು ಎತ್ತಿದ್ದು, ಭೂ ವರ್ಗಾವಣೆಯಿಂದ ಸರ್ಕಾರಕ್ಕಲ್ಲ, ಸಿದ್ಧಾರ್ಥ ವಿಹಾರ್‌ಟ್ರಸ್ಟ್‌ಗೆ ಲಾಭವಾಗಿದೆ. ಆದರೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಭಂಡಾರಿ ಹೇಳಿದ್ದಾರೆ. ಖರ್ಗೆ, ಅವರ ಪತ್ನಿ ಮತ್ತು ಮಗ ಸದಸ್ಯರಾಗಿರುವ ಸಿದ್ಧಾರ್ಥ್ ವಿಹಾರ್ ಟ್ರಸ್ಟ್, ಕಸ್ತೂರಿ ಬಾಯಿ ಎಂಬ ನಕಲಿ ಮಾರಾಟಗಾರರನ್ನು ಸೃಷ್ಟಿಸುವ ಮೂಲಕ ಗುಲ್ಬರ್ಗ ನಗರದಲ್ಲಿ 7.18 ಎಕರೆ ಭೂಮಿಯನ್ನು ಕಬಳಿಸಿದೆ ಎಂದು ಬಿಜೆಪಿ ವಕ್ತಾರರು ಆರೋಪಿಸಿದ್ದಾರೆ. 'ಕಸ್ತೂರಿ ಬಾಯಿ ಯಾರೆಂದು ಯಾರಿಗೂ ತಿಳಿದಿಲ್ಲ' ಎಂದು ಅವರು ಹೇಳಿದರು.2010ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಖರ್ಗೆ ಅವರಿಗೆ 8,125 ಚದರ ಮೀಟರ್ ಭೂಮಿಯನ್ನು ನೀಡಿದೆ ಎಂದು ಭಂಡಾರಿ ಆರೋಪಿಸಿದ್ದಾರೆ.

''ಖರ್ಗೆ ಅವರಿಗೆ ಈ ಭೂಮಿಯನ್ನು ನೀಡುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮೇಲೆ ಒತ್ತಡ ಹೇರಲಾಗಿತ್ತು. ಬಿಡಿಎ ನಿರಾಕರಿಸಿದಾಗ, ಅದನ್ನು ವರ್ಗಾಯಿಸಲಾಯಿತು ಮತ್ತು ಅಂತಿಮವಾಗಿ ಭೂಮಿಯನ್ನು ಅವರಿಗೆ ನೀಡಲಾಯಿತು'' ಎಂದು ಬಿಜೆಪಿ ವಕ್ತಾರರು ಹೇಳಿದರು.ಕರ್ನಾಟಕದ ಸಂಸದ-ಶಾಸಕ ನ್ಯಾಯಾಲಯದಲ್ಲಿ ಪ್ರಕರಣ ಈಗಾಗಲೇ ಬಾಕಿ ಇದೆ ಎಂದು ಭಂಡಾರಿ ಹೇಳಿದರು.

''ನಾವು ದೃಢವಾದ ಪುರಾವೆಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ. ಮಲ್ಲಿಕಾರ್ಜುನ ಖರ್ಗೆ ವಿವರಣೆಯನ್ನು ನೀಡದಿದ್ದರೆ, ಅದನ್ನು ತಪ್ಪೊಪ್ಪಿಕೊಂಡಂತೆ ಪರಿಗಣಿಸಲಾಗುತ್ತದೆ'' ಎಂದು ಬಿಜೆಪಿ ವಕ್ತಾರರು ಹೇಳಿದರು.

ಯಾದವ್ ಅವರ ಕುಟುಂಬವು ಉಜ್ಜಯಿನಿಯಲ್ಲಿ ಮೂಲಸೌಕರ್ಯ ಯೋಜನೆಗಳಿಂದ ಪ್ರಯೋಜನ ಪಡೆಯುವ ವಲಯಗಳಲ್ಲಿ ಎಕರೆಗಟ್ಟಲೆ ಭೂಮಿಯನ್ನು ಖರೀದಿಸಿದೆ ಎಂಬ ವರದಿಗಳನ್ನು ಉಲ್ಲೇಖಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮಂಗಳವಾರ, 'ನಾನು ತಿನ್ನುವುದಿಲ್ಲ, ಇತರರನ್ನು ತಿನ್ನಲು ಬಿಡುವುದಿಲ್ಲ' ಎಂಬ ಘೋಷಣೆಯ ಹಿಂದಿನ ಸತ್ಯ ಜನರಿಗೆ ಈಗ ತಿಳಿದಿದೆ ಮತ್ತು ಈ 'ಬೂಟಾಟಿಕೆ' ಕೊನೆಗೊಳ್ಳಬೇಕು ಎಂದು ಹೇಳಿದ್ದರು.

ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ವಿರುದ್ಧದ ಭೂ ಹಗರಣದ ಆರೋಪಗಳನ್ನು 'ಆಧಾರರಹಿತ' ಎಂದು ಉಲ್ಲೇಖಿಸಿದ ರಾಜ್ಯ ಬಿಜೆಪಿ ಅಧ್ಯಕ್ಷ ಹೇಮಂತ್ ಖಂಡೇಲ್ವಾಲ್ ಅವರು ಮಂಗಳವಾರ, ರಾಜ್ಯವು ಹಿಂದುಳಿದ ವರ್ಗಗಳ ಮುಖ್ಯಮಂತ್ರಿಯನ್ನು ಹೊಂದಿದ್ದಾಗಲೆಲ್ಲಾ ಕಾಂಗ್ರೆಸ್ ಅವರನ್ನು ದುರ್ಬಲಗೊಳಿಸಲು ಪ್ರಯತ್ನಿಸಿದೆ ಎಂದು ಹೇಳಿದರು. ಯಾದವ್ ಕುಟುಂಬದ ವಿರುದ್ಧದ ಆರೋಪಗಳ ಬಗ್ಗೆ ಕೇಳಿದಾಗ ಭಂಡಾರಿ ಸುದ್ದಿಗಾರರಿಗೆ, ''ಮಧ್ಯಪ್ರದೇಶ ಸರ್ಕಾರ ಈ ಬಗ್ಗೆ ವಿವರವಾದ ವಿವರಣೆಯನ್ನು ನೀಡಿದೆ. ನಾವು ಮಧ್ಯಪ್ರದೇಶ ಸರ್ಕಾರದ ಪ್ರತಿಕ್ರಿಯೆಯನ್ನು ಅಧಿಕೃತ ದಾಖಲೆಯಾಗಿ ಪರಿಗಣಿಸಬೇಕು'' ಎಂದು ಹೇಳಿದರು.

2021ರ ಮುಂದ್ರಾ ಬಂದರು ಮಾದಕ ದ್ರವ್ಯ ವಶ ಪ್ರಕರಣ: ದಿಲ್ಲಿ ನೈಟ್‌ಕ್ಲಬ್ ಮಾಲೀಕ ಮತ್ತು ಇತರರ ಮೇಲೆ ಇಡಿ ದಾಳಿ

ಹೊಸದಿಲ್ಲಿ, ಜೂ. 24 - 2021ರ ಮುಂದ್ರಾ ಬಂದರಿನಲ್ಲಿ ನಡೆದ ಮಾದಕ ದ್ರವ್ಯ ಸಾಗಣೆ ಪ್ರಕರಣದ ಹಣ ವರ್ಗಾವಣೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ ಬುಧವಾರ ದೆಹಲಿಯ ಹಲವು ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ ಮೂಲದ ಉದ್ಯಮಿ ಹರ್‌ಪ್ರೀತ್ ಸಿಂಗ್ ತಲ್ವಾರ್ ಅಲಿಯಾಸ್ ಕಬೀರ್ ತಲ್ವಾರ್, ಶಂಶುದ್ದೀನ್ ಎಂಬ ವ್ಯಕ್ತಿ ಮತ್ತು ಇತರ ಕೆಲವು ಸ್ಥಳಗಳನ್ನು ಒಳಗೊಂಡಂತೆ ರಾಷ್ಟ್ರ ರಾಜಧಾನಿಯ ಐದು ಸ್ಥಳಗಳಲ್ಲಿ ಕೇಂದ್ರ ಸಂಸ್ಥೆಯು ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯಲ್ಲಿ ಜನಪ್ರಿಯ ನೈಟ್‌ಕ್ಲಬ್‌ಗಳನ್ನು ನಡೆಸುತ್ತಿರುವ ತಲ್ವಾರ್ ಅವರನ್ನು ಆಗಸ್ಟ್ 2022 ರಲ್ಲಿ ಈ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಬಂಧಿಸಿತ್ತು ಮತ್ತು ಗುಜರಾತ್ ಹೈಕೋರ್ಟ್‌ನಿಂದ ಜಾಮೀನು ಪಡೆದ ನಂತರ ಅವರು ಇತ್ತೀಚೆಗೆ ಜೈಲಿನಿಂದ ಹೊರಬಂದಿದ್ದರು.

ವಿಶ್ವದ ಅತಿದೊಡ್ಡ ಮಾದಕವಸ್ತು ವಶಪಡಿಸಿಕೊಳ್ಳುವಿಕೆಗಳಲ್ಲಿ ಒಂದಾದ, ಇಡಿ ಯಂತೆಯೇ ಕೇಂದ್ರ ಹಣಕಾಸು ಸಚಿವಾಲಯದ ಅಡಿಯಲ್ಲಿರುವ ಜಾರಿ ಸಂಸ್ಥೆಯಾದ ಕಂದಾಯ ಗುಪ್ತಚರ ನಿರ್ದೇಶನಾಲಯವು ಸೆಪ್ಟೆಂಬರ್ 2021ರಲ್ಲಿ ಗುಜರಾತ್‌ನ ಕಚ್ ಜಿಲ್ಲೆಯ ಮುಂದ್ರಾ ಬಂದರಿನಿಂದ 2,988.21 ಕೆಜಿ ಅಫ್ಘಾನ್ ಮೂಲದ ಹೆರಾಯಿನ್ ಅನ್ನು ವಶಪಡಿಸಿಕೊಂಡಿತ್ತು.

ಅಂತಾರಾಷ್ಟ್ರೀಯ ಅಕ್ರಮ ಮಾದಕವಸ್ತು ಮಾರುಕಟ್ಟೆಯಲ್ಲಿ ಸುಮಾರು 21,000 ಕೋಟಿ ರೂ. ಮೌಲ್ಯದ ಈ ಸರಕು ಇರಾನ್ ಮೂಲಕ ಭಾರತದ ತೀರವನ್ನು ತಲುಪಿತ್ತು. ಇಡಿ 2021 ರಲ್ಲಿ ಹಣ ವರ್ಗಾವಣೆ ಪ್ರಕರಣವನ್ನು ದಾಖಲಿಸಿತ್ತು ಮತ್ತು ಮಾದಕವಸ್ತು ಕಳ್ಳಸಾಗಣೆ ಹಣವನ್ನು ದೆಹಲಿಯ ಕೆಲವು ನೈಟ್‌ಕ್ಲಬ್‌ಗಳಲ್ಲಿ ಹೂಡಿಕೆ ಮಾಡಲಾಗಿದೆ ಎಂದು ಹೇಳಲಾದ ಕೆಲವು ಹೊಸ ಮಾಹಿತಿಯ ಆಧಾರದ ಮೇಲೆ ಇತ್ತೀಚಿನ ಶೋಧಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಮಾದಕವಸ್ತು ಜಾಲದ ಮಾರಾಟದಿಂದ ಬಂದ ಹಣವನ್ನು ಪಾಕಿಸ್ತಾನ ಮೂಲದ ನಿಷೇಧಿತ ಭಯೋತ್ಪಾದಕ ಗುಂಪು ಲಷ್ಕರ್-ಎ-ತೈಬಾ (ಎಲ್‌ಇಟಿ) ಚಟುವಟಿಕೆಗಳಿಗೆ ಹಣಕಾಸು ಒದಗಿಸಲು ಬಳಸಲಾಗಿದೆ ಎಂದು ಎನ್ಐಎ ತನ್ನ ಆರೋಪಪಟ್ಟಿಯಲ್ಲಿ ಹೇಳಿತ್ತು.ಫೆಡರಲ್ ಭಯೋತ್ಪಾದನಾ ನಿಗ್ರಹ ಸಂಸ್ಥೆಯು, ಇದು ಭಾರತಕ್ಕೆ ಮಾದಕವಸ್ತು (ಹೆರಾಯಿನ್) ರವಾನೆಯನ್ನು ಅರೆ-ಸಂಸ್ಕರಿಸಿದ ಟಾಲ್ಕ್ ಕಲ್ಲುಗಳ (ವಿಶಾಲ ಶ್ರೇಣಿಯ ಅನ್ವಯಿಕೆಗಳನ್ನು ಹೊಂದಿರುವ ಕಚ್ಚಾ ವಸ್ತು) ರೂಪದಲ್ಲಿ ಕಾನೂನುಬದ್ಧ ಆಮದುಗಳ ವೇಷದಲ್ಲಿ ಕಳುಹಿಸುವ ಪರೀಕ್ಷಾ ಪ್ರಕರಣವಾಗಿದೆ ಎಂದು ಹೇಳಿತ್ತು.

ಬಿಜೆಪಿ ಮೂರನೇ ಎರಡರಷ್ಟು ಬಹುಮತಕ್ಕೆ ಯತ್ನಿಸುತ್ತಿರುವುದು ಮೀಸಲಾತಿ ಕಿತ್ತು ಹಾಕಲು: ಜೈರಾಮ್ ರಮೇಶ್

ಹೊಸದಿಲ್ಲಿ, ಜೂ. 24 - ಬಿಜೆಪಿಯು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತಕ್ಕಾಗಿ ಯತ್ನಿಸುತ್ತಿರುವುದು ಮೀಸಲಾತಿಯನ್ನು ಕಿತ್ತು ಹಾಕಲು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ.

ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಪಡೆದೇ ತೀರಬೇಕು ಎಂದು ಬಿಜೆಪಿ ಹವಣಿಸುತ್ತಿದೆ. ಇದರ ಉದ್ದೇಶ ಮಹಿಳೆಯರಿಗೆ ಮೀಸಲಾತಿ ನೀಡುವುದಾಗಲೀ, ಕ್ಷೇತ್ರ ಪುನರ್‌ವಿಂಗಡಣೆಯಾಗಲೀ ಅಲ್ಲ. ಅದರ ಮುಖ್ಯ ಗುರಿ ಸಂವಿಧಾನಕ್ಕೆ ತಿದ್ದುಪಡಿ ತಂದು ಮೀಸಲಾತಿ ತೆಗೆದು ಹಾಕುವುದು ಎಂದು ಅವರು ಹೇಳಿದರು.

ಪಿಟಿಐ ಸುದ್ದಿ ಸಂಸ್ಥೆ ನಡೆಸಿದ ಸಂದರ್ಶನದಲ್ಲಿ ಜೈರಾಮ್ ರಮೇಶ್ ಈ ಆರೋಪ ಮಾಡಿದ್ದಾರೆ.ಲೋಕಸಭೆಯಲ್ಲಿ ಎಪ್ರಿಲ್ 17ರಂದು (ಕ್ಷೇತ್ರ ಮರುವಿಂಗಡಣೆ ಮಸೂದೆಗಳಿಗೆ ಸೋಲಾದ ದಿನ) ಸ್ವಯಂ ಘೋಷಿತ ಚಾಣಕ್ಯನಿಗೆ (ಅಮಿತ್ ಶಾಹ) ಅವಮಾನವಾಯಿತು. ಈ ಮಸೂದೆಗಳನ್ನು ಗೆಲ್ಲಿಸಿಕೊಡುವುದಾಗಿ ಅವರು ಪ್ರಧಾನಿಗೆ ಮಾತು ಕೊಟ್ಟಿದ್ದರು. ಇದಕ್ಕಾಗಿ ಸೇಡು ತೀರಿಸಿಕೊಳ್ಳಲು ಶಾಹ ಅವರು ಪಕ್ಷಗಳನ್ನು ಒಡೆಯುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಟಿಎಂಸಿಯನ್ನು ಒಡೆದರು. ಶಿವಸೇನಾವನ್ನು (ಉದ್ಧವ್ ಬಣ) ಒಡೆಯುತ್ತಿದ್ದಾರೆ. ಲೋಕಸಭೆಯಲ್ಲಿ ಅವರಿಗೆ ಮೂರನೇ ಎರಡರಷ್ಟು ಬಹುಮತ ಬೇಕಷ್ಟೆ, ನಾವು 2024ರ ಲೋಕಸಭೆ ಚುನಾವಣೆಯಲ್ಲಿ ಏನು ಪ್ರಚಾರ ಮಾಡಿದ್ದೆವೊ ಅದು ಈಗ ಸತ್ಯವಾಗುತ್ತಿದೆ. ಸಂವಿಧಾನಕ್ಕೆ ತಿದ್ದುಪಡಿ ತಂದು ಮೀಸಲಾತಿ ಅಂತ್ಯಗೊಳಿಸಲು ಬಹುಮತ ಬೇಕಿತ್ತು ಎಂದರು. ಎಲ್ಲ ರಾಜ್ಯದಲ್ಲಿಯೂ ಶೇ. 50ರಷ್ಟು ಲೋಕಸಭೆ ಸ್ಥಾನಗಳನ್ನು ಹೆಚ್ಚಿಸಿದರೆ, ವಿರೋಧ ಪಕ್ಷಗಳು ಕ್ಷೇತ್ರ ಪುನರ್ ವಿಂಗಡಣೆಯನ್ನು ಒಪ್ಪಿಕೊಳ್ಳುತ್ತೀರೇ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ವಿಷಯ ಇರುವುದು ನೀವು ಹೇಗೆ ಕ್ಷೇತ್ರ ಪುನರ್‌ವಿಂಗಡಣೆ ಮಾಡುತ್ತೀರಿ ಎಂಬ ಬಗ್ಗೆ ಎಂದರು.

ಮಾತು ಮುಂದುವರಿಸಿದ ಅವರು, ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ 'ಜುಲಗ್ ಬಂದಿ'ಯನ್ನು ನೋಡಿಯಾಗಿದೆ. ಅಮಿತ್ ಶಾಹ ಅವರು ಹೇಳಿದಂತೆ ಆಯೋಗವು ಕೇಳುತ್ತಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಬಿಹಾರದ ವಿಚಾರಗಳಲ್ಲಿ ಆಯೋಗದ ಮೇಲೆ ದೊಡ್ಡ ಕಪ್ಪು ಚುಕ್ಕೆ ಇದೆ. ಇಂಥ ಆಯೋಗದಿಂದ ಕ್ಷೇತ್ರ ಪುನರ್‌ವಿಂಗಡಣೆ ಮಾಡಿಸಿಕೊಳ್ಳಲಿ, ಸಾಧ್ಯವೇ?' ಎಂದು ಪ್ರಶ್ನಿಸಿದರು. ಎಲ್ಲ ರಾಜ್ಯದಲ್ಲಿಯೂ ಶೇ. 50ರಷ್ಟು ಸ್ಥಾನಗಳು ಹೆಚ್ಚಿಗೆ ಆಗುವುದಕ್ಕೆ ಮಾತ್ರವೇ ಕಾಂಗ್ರೆಸ್ ವಿರೋಧಿಸಿಲ್ಲ. ಸಂಸದರ ಸಂಖ್ಯೆ 800 ಆಗುವುದಕ್ಕೂ ವಿರೋಧವಿದೆ. ಈಗಲೇ 500ಕ್ಕೂ ಹೆಚ್ಚು ಸಂಸದರಿದ್ದಾರೆ. ಇವರಿಗೆಲ್ಲ ಸದನದಲ್ಲಿ ಮಾತನಾಡಲು ಅವಕಾಶ ಸಿಗುವುದೇ? ಎಂದರು.

ಸಂಯುಕ್ತ ಮಹಾರಾಷ್ಟ್ರ ಚಳುವಳಿಯ ಅಪರೂಪದ ಐತಿಹಾಸಿಕ ದಾಖಲೆ ಸರಕಾರಿ ದಾಖಲೆಯಲ್ಲಿ;ಆಶಿಶ್ ಶೇಲಾರ್

ಮುಂಬಯಿ,ಜೂ.24 - ಸಂಯುಕ್ತ ಮಹಾರಾಷ್ಟ್ರ ಚಳುವಳಿಗೆ ಸಂಬಂಧಿಸಿದಂತೆ ಹಿರಿಯ ಪತ್ರಕರ್ತ ಕುಮಾರ್‌ಕದಮ್ ಸಂಗ್ರಹಿಸಿದ ಅಪರೂಪದ ಐತಿಹಾಸಿಕ ದಾಖಲೆಯನ್ನು ಸರ್ಕಾರಿ ದಾಖಲೆಯಲ್ಲಿ ಸೇರಿಸಲು ಪ್ರಮುಖ ನಿರ್ಧಾರ ತೆಗೆದುಕೊಳ್ಳಲಾಗಿದೆ ಮತ್ತು ಈ ದಾಖಲೆಯ ಸಂರಕ್ಷಣೆ ಮತ್ತು ಸಂರಕ್ಷಣೆಯನ್ನು ಸಾಂಸ್ಕೃತಿಕ ವ್ಯವಹಾರಗಳ ಇಲಾಖೆ ಮಾಡುತ್ತದೆ ಎಂದು ಸಾಂಸ್ಕೃತಿಕ ವ್ಯವಹಾರಗಳ ಸಚಿವ ಆಶಿಶ್ ಶೇಲಾರ್ ವಿಧಾನ ಪರಿಷತ್ತು ಮತ್ತು ವಿಧಾನಸಭೆಯಲ್ಲಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮರಾಠಿ ಮಾತನಾಡುವ ಸಂಯುಕ್ತ ರಾಜ್ಯ ರಚನೆಗಾಗಿ ಸಂಯುಕ್ತ ಮಹಾರಾಷ್ಟ್ರ ಚಳುವಳಿಯನ್ನು ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಅತ್ಯಂತ ಪ್ರಮುಖ ಮತ್ತು ಐತಿಹಾಸಿಕ ಜನರ ಚಳುವಳಿಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ ಎಂದು ಸಚಿವ ಶೇಲಾರ್ ಹೇಳಿದರು. ವಿವಿಧ ಪಕ್ಷಗಳ ನಾಯಕರು, ಸಾಹಿತ್ಯ ವ್ಯಕ್ತಿಗಳು, ಕಾರ್ಮಿಕರು ಮತ್ತು ಸಾಮಾನ್ಯ ನಾಗರಿಕರು ಈ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಈ ಚಳುವಳಿಯಲ್ಲಿ 106 ಜನರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ ಮತ್ತು ಈ ಚಳುವಳಿ ಮಹಾರಾಷ್ಟ್ರ ಸ್ಥಾಪನೆಯಲ್ಲಿ ಅಮೂಲ್ಯ ಕೊಡುಗೆ ನೀಡಿದೆ.

ಸಂಯುಕ್ತ ಮಹಾರಾಷ್ಟ್ರ ಚಳವಳಿಯ ಇತಿಹಾಸವನ್ನು ಭವಿಷ್ಯದ ಪೀಳಿಗೆಗೆ ಲಭ್ಯವಾಗುವಂತೆ ಮಾಡುವ ಮತ್ತು ಸಂಶೋಧನೆಗೆ ಪ್ರಮುಖ ಉಲ್ಲೇಖ ಸಾಮಗ್ರಿಗಳನ್ನು ಒದಗಿಸುವ ಉದ್ದೇಶದಿಂದ, ಸರ್ಕಾರಿ ಸಮಿತಿಯು ಹಿರಿಯ ಪತ್ರಕರ್ತ ಕುಮಾರ್ ಕದಮ್ ಅವರು ಸಂರಕ್ಷಿಸಿದ ಅಪರೂಪದ ದಾಖಲೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಿದೆ. ಅದರ ನಂತರ, ಈ ಐತಿಹಾಸಿಕ ನಿಧಿಯನ್ನು ಸರ್ಕಾರಿ ದಾಖಲೆಯಲ್ಲಿ ಸೇರಿಸಲು ನಿರ್ಧರಿಸಲಾಗಿದೆ.

ಈ ಸಂಗ್ರಹವು ಸಂಯುಕ್ತ ಮಹಾರಾಷ್ಟ್ರ ಚಳವಳಿಗೆ ಸಂಬಂಧಿಸಿದ ಸುಮಾರು 150 ಅಪರೂಪದ ಛಾಯಾಚಿತ್ರಗಳು, ಚಳುವಳಿಯ ನಾಯಕರು, ಪತ್ರಕರ್ತರು ಮತ್ತು ಕಾರ್ಯಕರ್ತರೊಂದಿಗೆ 35 ಸಂದರ್ಶನಗಳು ಮತ್ತು ಸುಮಾರು 1,258 ನಿಮಿಷಗಳ ಆಡಿಯೊ ದಾಖಲಾತಿಗಳನ್ನು ಒಳಗೊಂಡಿದೆ. ಇದರ ಹೊರತಾಗಿ, ಹುತಾತ್ಮರ ಸ್ಮಾರಕ ನಿರ್ಮಾಣ, ಪತ್ರವ್ಯವಹಾರ ಮತ್ತು ಇತರ ಪ್ರಮುಖ ಐತಿಹಾಸಿಕ ದಾಖಲೆಗಳ ಕುರಿತು ಆಗಿನ ಮುಖ್ಯಮಂತ್ರಿ ಯಶವಂತರಾವ್ ಚವಾಣ್ ನೇತೃತ್ವದ ಸರ್ವಪಕ್ಷ ಸಮಿತಿಯ ಸಭೆಗಳ ನಿಮಿಷಗಳನ್ನು ಕೂಡ ಸಂಗ್ರಹವು ಒಳಗೊಂಡಿದೆ.

ಈ ದಾಖಲೆಗಳನ್ನು ಸಾಂಸ್ಕೃತಿಕ ವ್ಯವಹಾರಗಳ ಇಲಾಖೆಯ ಅಡಿಯಲ್ಲಿ ಆರ್ಕೈವ್ಸ್ ನಿರ್ದೇಶನಾಲಯವು ಸಂರಕ್ಷಿಸುತ್ತದೆ ಮತ್ತು ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಸಂಯುಕ್ತ ಮಹಾರಾಷ್ಟ್ರ ಚಳವಳಿಯ ಇತಿಹಾಸವನ್ನು ಅಧ್ಯಯನ ಮಾಡಲು ಪ್ರಮುಖ ಮೂಲವನ್ನು ಒದಗಿಸುತ್ತದೆ.

ಹಿರಿಯ ಪತ್ರಕರ್ತ ಕುಮಾರ್ ಕದಮ್ ಈ ಐತಿಹಾಸಿಕ ನಿಧಿಯನ್ನು ವೈಯಕ್ತಿಕ ಪ್ರಯತ್ನಗಳು ಮತ್ತು ಉತ್ತಮ ಪ್ರಯತ್ನದ ಮೂಲಕ ಸಂರಕ್ಷಿಸಿದ್ದಾರೆ. ಸರ್ಕಾರದ ಮನವಿಗೆ ಸಕಾರಾತ್ಮಕ ಪ್ರತಿಕ್ರಿಯೆಯಾಗಿ ಈ ಅಮೂಲ್ಯ ಪರಂಪರೆಯನ್ನು ಸರ್ಕಾರಕ್ಕೆ ಹಸ್ತಾಂತರಿಸಲು ಸಿದ್ಧರಿದ್ದಕ್ಕಾಗಿ ಅವರು ಶೇಲಾರ್ ಅವರಿಗೆ ಧನ್ಯವಾದ ಅರ್ಪಿಸಿದರು.

ಲಾತೂರ್: ದೈಹಿಕ ಅಶಕ್ತ ರೈತನ ಮೇಲೆ ಹಲ್ಲೆ; ಸರಪಂಚ ಸೇರಿ ಇಬ್ಬರ ವಿರುದ್ಧ ಪ್ರಕರಣ ದಾಖಲು

ಲಾತೂರ್, ಜೂ. 24 - ಮಹಾರಾಷ್ಟ್ರದ ಲಾತೂರ್ ಜಿಲ್ಲೆಯಲ್ಲಿ ನಡೆದ ವಿವಾದವೊಂದರಲ್ಲಿ ದೈಹಿಕವಾಗಿ ಅಶಕ್ತ ರೈತನ ಮೇಲೆ ಹಲ್ಲೆ ನಡೆಸಿ ಅವಮಾನಿಸಿದ ಆರೋಪದ ಮೇಲೆ ಸರಪಂಚ ಹಾಗೂ ಮತ್ತೊಬ್ಬ ವ್ಯಕ್ತಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

39 ವರ್ಷದ ರೈತನ ಪ್ರಕಾರ, ಈ ಘಟನೆ ಜೂನ್ 19 ರಂದು ಖಡ್ಗಾಂವ್ ಗ್ರಾಮದಲ್ಲಿ ನಡೆದಿದೆ.

ಶೇಕಡಾ 85 ರಷ್ಟು ದೈಹಿಕವಾಗಿ ಅಶಕ್ತನಾಗಿರುವುದಾಗಿ ಹೇಳಿಕೊಂಡ ರೈತ, ಗ್ರಾಮ ನಕ್ಷೆಯಲ್ಲಿ ತೋರಿಸಿರುವ ಸರ್ಕಾರಿ ರಸ್ತೆ - ಖಡ್ಗಾಂವ್-ಹರಂಗುಲ್ ಪಾಂಡನ್ ರಸ್ತೆ - ಮೇಲಿನ ಅತಿಕ್ರಮಣಗಳನ್ನು ತೆಗೆದುಹಾಕುವಂತೆ ಕೋರಿ ತಹಶೀಲ್ದಾರ್ (ಕಂದಾಯ ಅಧಿಕಾರಿ) ಅವರನ್ನು ಸಂಪರ್ಕಿಸಿದ್ದರು.

ಕಂದಾಯ ಅಧಿಕಾರಿಗಳು ಪರಿಶೀಲನೆಗಾಗಿ ಸ್ಥಳಕ್ಕೆ ಭೇಟಿ ನೀಡಿದಾಗ, ರೈತ ಸರ್ವೇ ಸಂಖ್ಯೆಗಳನ್ನು ತೋರಿಸಿ ಅಧಿಕೃತ ದಾಖಲೆಗಳ ಪ್ರಕಾರ ರಸ್ತೆಯನ್ನು ತೆರೆಯುವಂತೆ ವಿನಂತಿಸಿದರು. ಆ ಸಮಯದಲ್ಲಿ, ಸರಪಂಚ (ಗ್ರಾಮ ಮುಖ್ಯಸ್ಥ) ಮತ್ತು ಇನ್ನೊಬ್ಬ ಗ್ರಾಮಸ್ಥರು ಅವರನ್ನು ನಿಂದಿಸಿದರು, ಅವರ ಅಂಗವೈಕಲ್ಯದ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದರು, ಅವರ ಮೇಲೆ ಹಲ್ಲೆ ನಡೆಸಿದರು ಮತ್ತು ಎಫ್ಐಆರ್ ಪ್ರಕಾರ ಕೊಲೆ ಬೆದರಿಕೆ ಹಾಕಿದರು.

ದೂರುಗಳನ್ನು ಮುಂದುವರಿಸದಂತೆ ಆರೋಪಿಗಳು ತನಗೆ ಎಚ್ಚರಿಕೆ ನೀಡಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ರೈತ ಆರೋಪಿಸಿದ್ದಾರೆ. ನಂತರ ಅವರು ವೈದ್ಯಕೀಯ ಚಿಕಿತ್ಸೆ ಪಡೆದು ಪೊಲೀಸರನ್ನು ಸಂಪರ್ಕಿಸಿದರು.

ತನ್ನ ದೂರಿನ ಆಧಾರದ ಮೇಲೆ, ಎಂಐಡಿಸಿ ಪೊಲೀಸರು ಮಂಗಳವಾರ ಸರಪಂಚ ಮತ್ತು ಇನ್ನೊಬ್ಬ ಗ್ರಾಮಸ್ಥನ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ವಿಭಾಗಗಳ ಅಡಿಯಲ್ಲಿ ಹಲ್ಲೆ, ಉದ್ದೇಶಪೂರ್ವಕ ಅವಮಾನ ಮತ್ತು ಕ್ರಿಮಿನಲ್ ಬೆದರಿಕೆ ಹಾಗೂ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಎಫ್ಐಆರ್ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏತನ್ಮಧ್ಯೆ, ರೈತ ಮಂಗಳವಾರ ಲಾತೂರ್ ತಹಶೀಲ್ದಾರ್ ಅವರನ್ನು ಸಂಪರ್ಕಿಸಿ, ರಸ್ತೆಯ ಮೇಲಿನ ಅತಿಕ್ರಮಣಗಳನ್ನು ತಕ್ಷಣ ತೆಗೆದುಹಾಕುವಂತೆ ಕೋರಿ, ಕಳೆದ ಒಂಬತ್ತು ವರ್ಷಗಳಿಂದ ಪದೇ ಪದೇ ದೂರು ನೀಡಿದ್ದರೂ, ಅಧಿಕಾರಿಗಳು ಅಧಿಕೃತ ನಕ್ಷೆಗಳ ಪ್ರಕಾರ ರಸ್ತೆಯನ್ನು ಸಂಪೂರ್ಣವಾಗಿ ಪುನಃಸ್ಥಾಪಿಸಲು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಸೆಪ್ಟೆಂಬರ್ 2017 ರಲ್ಲಿ ಜಿಲ್ಲಾ ಮತ್ತು ಕಂದಾಯ ಅಧಿಕಾರಿಗಳ ಮುಂದೆ ಈ ವಿಷಯವನ್ನು ಮೊದಲು ಪ್ರಸ್ತಾಪಿಸಿದ್ದಾಗಿ ರೈತ ತಿಳಿಸಿದರು.

ಕಂದಾಯ ಅಧಿಕಾರಿಗಳು ನಡೆಸಿದ ತಪಾಸಣೆ ಮತ್ತು ಪಂಚನಾಮದ ನಂತರ, ರಸ್ತೆಯ ಒಂದು ಭಾಗವನ್ನು ತೆರವುಗೊಳಿಸಲಾಯಿತು. ಆದಾಗ್ಯೂ, ಉಳಿದ ಅತಿಕ್ರಮಣಗಳನ್ನು ಎಂದಿಗೂ ತೆಗೆದುಹಾಕಲಾಗಿಲ್ಲ, ಇದರಿಂದಾಗಿ ಮೂಲ ನಕ್ಷೆಯ ಪ್ರಕಾರ ರಸ್ತೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ ಎಂದು ಅವರು ಆರೋಪಿಸಿದರು.

ಕೆಲವು ವ್ಯಕ್ತಿಗಳು ರಸ್ತೆಯನ್ನು ಮೂಲ ಮಾರ್ಗವನ್ನು ಮತ್ತೆ ತೆರೆಯುವ ಬದಲು ಖಾಸಗಿ ಕೃಷಿ ಭೂಮಿಯ ಮೂಲಕ ತಿರುಗಿಸುವ ಮೂಲಕ ಅದರ ಜೋಡಣೆಯನ್ನು ಬದಲಾಯಿಸಲು ಪ್ರಯತ್ನಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

ನವಿಮುಂಬಯಿ: ಅಕ್ರಮ ಕಟ್ಟಡ ಧ್ವಂಸ ತಡೆಯಲು 'ನಕಲಿ' ನ್ಯಾಯಾಂಗ ಆದೇಶ; ಪ್ರಕರಣ ದಾಖಲು

ಥಾಣೆ, ಜೂ. 24 - ಪಾಲಿಕೆ ಆಯುಕ್ತರು ತಮ್ಮ ಮೊಬೈಲ್ ಫೋನ್‌ನಲ್ಲಿ ನ್ಯಾಯಾಲಯದ 'ತಡೆ ಆದೇಶ'ವನ್ನು ಸ್ವೀಕರಿಸಿದ ನಂತರ, ನವಿ ಮುಂಬೈನ ಪಾಲಿಕೆ ಅಧಿಕಾರಿಗಳು ನಗರದಲ್ಲಿ ಬಹುಮಹಡಿ ಅಕ್ರಮ ಕಟ್ಟಡದ ಧ್ವಂಸವನ್ನು ನಿಲ್ಲಿಸಿದರು. ಅದು ನಂತರ ನಕಲಿ ಎಂದು ತಿಳಿದುಬಂದಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ನ್ಯಾಯಾಂಗ ಆದೇಶದ ನಕಲಿ ಮತ್ತು ಆಡಳಿತಾತ್ಮಕ ವಂಚನೆಯ ಈ ಆಘಾತಕಾರಿ ಪ್ರಕರಣ ಈ ತಿಂಗಳ ಆರಂಭದಲ್ಲಿ ಬೆಳಕಿಗೆ ಬಂದಿತು ಮತ್ತು ಸ್ಥಳೀಯ ನ್ಯಾಯಾಲಯದ ನಿರ್ದೇಶನದ ಪ್ರಕಾರ ಜೂನ್ 20 ರಂದು ನವಿ ಮುಂಬೈನಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ನವಿ ಮುಂಬೈನ ಸರ್ಸೋಲ್ ಪ್ರದೇಶದಲ್ಲಿರುವ ಕಟ್ಟಡವನ್ನು ಧ್ವಂಸಗೊಳಿಸುವ ಕಾರ್ಯಾಚರಣೆಯನ್ನು ನವಿ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಎನ್ಎಂಎಂಸಿ) ಈ ವರ್ಷದ ಮೇ ತಿಂಗಳಲ್ಲಿ ಪ್ರಾರಂಭಿಸಿತ್ತು.

'ಪಾಲಿಕೆ ಕ್ರಮವನ್ನು ನಿಲ್ಲಿಸುವ ಪ್ರಯತ್ನದಲ್ಲಿ, ನ್ಯಾಯಾಲಯದ ತಡೆಯಾಜ್ಞೆಯನ್ನು ಎನ್ಎಂಎಂಸಿ ಆಯುಕ್ತರ ಮೊಬೈಲ್ ಫೋನ್‌ಗೆ ರವಾನಿಸಲಾಯಿತು. ನ್ಯಾಯಾಂಗ ದಾಖಲೆಯನ್ನು ನಂಬಿ, ಪಾಲಿಕೆ ಆಡಳಿತವು ತಕ್ಷಣವೇ ಧ್ವಂಸ ಕಾರ್ಯವನ್ನು ಸ್ಥಗಿತಗೊಳಿಸಿತ್ತು. ಆದಾಗ್ಯೂ ನಂತರದ ಪರಿಶೀಲನಾ ಪ್ರಕ್ರಿಯೆಯಲ್ಲಿ ತಡೆಯಾಜ್ಞೆಯನ್ನು ಸಂಪೂರ್ಣವಾಗಿ ಕಟ್ಟುಕಥೆ ಮತ್ತು ನಿಗಮವನ್ನು ದಾರಿ ತಪ್ಪಿಸಲು ನಕಲಿ ಮಾಡಲಾಗಿದೆ ಎಂದು ಬೆಳಕಿಗೆ ಬಂದಿತ್ತು ಎಂದು ನವಿ ಮುಂಬೈ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಕಲಿ ಆದೇಶವನ್ನು ಎನ್ಎಂಎಂಸಿ ಆಯುಕ್ತರಿಗೆ ಕಳುಹಿಸಲಾದ ಮೊಬೈಲ್ ಸಂಖ್ಯೆಯನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿದಾಗ ಪ್ರಕರಣವು ಸಂಚಲನಾತ್ಮಕ ತಿರುವು ಪಡೆದುಕೊಂಡಿತು, ಏಕೆಂದರೆ ಫೋನ್ ಸಂಖ್ಯೆ ಸ್ಥಳೀಯ ರಾಜಕಾರಣಿಯೊಬ್ಬರಿಗೆ ಸೇರಿದೆ ಎಂದು ಅವರು ಕಂಡುಕೊಂಡರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನ್ಯಾಯಾಂಗದ ಹೆಸರಿನ ಸ್ಪಷ್ಟ ದುರುಪಯೋಗದ ಬಗ್ಗೆ ನವಿ ಮುಂಬೈನ ಬೇಲಾಪುರದ ನ್ಯಾಯಾಲಯವು ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಇದನ್ನು ಗಂಭೀರ ಅಪರಾಧ ಎಂದು ಲೇಬಲ್ ಮಾಡಿದ ನ್ಯಾಯಾಲಯವು, ಅಪರಾಧದಲ್ಲಿ ಭಾಗಿಯಾಗಿರುವವರ ವಿರುದ್ಧ ತಕ್ಷಣ ಪ್ರಕರಣ ದಾಖಲಿಸಲು ಆದೇಶಿಸಿದೆ ಎಂದು ಅವರು ಹೇಳಿದರು.

ನ್ಯಾಯಾಲಯದ ಆದೇಶದ ಆಧಾರದ ಮೇಲೆ, ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ನ ವಿವಿಧ ವಿಭಾಗಗಳ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದಾರೆ ಮತ್ತು ಆರೋಪಿಗಳನ್ನು ಪತ್ತೆಹಚ್ಚಲು ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಲವರ್ ಮೇಲೆ ಬಿಸಿ ಎಣ್ಣೆ ಸುರಿದು ಕೊಲೆ; ಮಹಿಳೆಯ ಬಂಧನ

ಲಾತೂರ್, ಜೂ. 24 - ಆಸ್ತಿ ವಿವಾದದ ಹಿನ್ನೆಲೆಯಲ್ಲಿ ತನ್ನೊಂದಿಗೆ ಸಂಬಂಧ ಹೊಂದಿದ್ದ ವ್ಯಕ್ತಿಯ ಮೇಲೆ ಬಿಸಿ ಎಣ್ಣೆ ಸುರಿದು ಕೊಲೆ ಮಾಡಿದ ಆರೋಪದ ಮೇಲೆ 45 ವರ್ಷದ ಮಹಿಳೆಯನ್ನು ಬುಧವಾರ ಇಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಹತ್ತು ದಿನಗಳ ನಂತರ, ಜೂನ್ 22 ರಂದು ಉದ್ಗೀರ್ ತಾಲೂಕಿನ ನಬಂಡಿ ಗ್ರಾಮದ ನಿವಾಸಿ ಉದ್ಧವ್ ಮರೋಟಿ ದಹಿಕಾಂಬಳೆ (24) ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ತೀವ್ರ ಗಾಯಗಳಿಂದ ಸಾವನ್ನಪ್ಪಿದ್ದಾರೆ ಎಂದು ಉಪವಿಭಾಗೀಯ ಪೊಲೀಸ್ ಅಧಿಕಾರಿ ಗಜಾನನ್ ಭಾತ್ಲವೆಂಡೆ ಹೇಳಿದ್ದಾರೆ.

ಜೂನ್ 12ರ ಮಧ್ಯಾಹ್ನ ಉದ್ಗೀರ್‌ನಲ್ಲಿರುವ ಉದ್ಧವ್ ಅವರ ಬಾಡಿಗೆ ಮನೆಯಲ್ಲಿ ಈ ಘಟನೆ ನಡೆದಿದೆ ಎಂದು ಅವರ ತಂದೆ ಸಲ್ಲಿಸಿದ ದೂರಿನಲ್ಲಿ ತಿಳಿಸಿದ್ದಾರೆ.ಪತಿಯಿಂದ ಬೇರ್ಪಟ್ಟ ವಿವಾಹಿತ ಮಹಿಳೆ ವಂದನಾ ಮದಲೆ ಅವರ ಮೇಲೆ ಬಿಸಿ ಎಣ್ಣೆ ಸುರಿದಿದ್ದಾರೆ ಎಂದು ಆರೋಪಿಸಲಾಗಿದೆ.

ದೂರಿನ ಪ್ರಕಾರ, ಇಬ್ಬರ ನಡುವಿನ ಅಕ್ರಮ ಸಂಬಂಧ ಮತ್ತು ಉದ್ಧವ್ ಅವರ ಭೂಮಿ ಮತ್ತು ಆಸ್ತಿಯ ಪಾಲನ್ನು ಮದಲೆ ಅವರ ಹೆಸರಿಗೆ ವರ್ಗಾಯಿಸುವ ವಿವಾದಗಳಿಂದ ಈ ದಾಳಿ ನಡೆದಿದೆ.

ಅವರ ಸಾವಿನ ನಂತರ ಉದ್ಗೀರ್ ಗ್ರಾಮೀಣ ಪೊಲೀಸರು ಮಹಿಳೆಯ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 103(1) ರ ಅಡಿಯಲ್ಲಿ ಕೊಲೆ ಪ್ರಕರಣವನ್ನು ದಾಖಲಿಸಿದ್ದಾರೆ. ಆಕೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು, ನ್ಯಾಯಾಲಯವು ಮಹಿಳೆಯನ್ನು ಮೂರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.








ಅಂಧೇರಿ ಪೂರ್ವದ ಬ್ಯಾಪ್ಟಿಸ್ಟವಾಡಿಯಲ್ಲಿ ನೆಲೆಸಿರುವ ತುಳು - ಕನ್ನಡಿಗರ ಮುಂದಾಳತ್ವದಲ್ಲಿ ಕಾರ್ಯರೂಪದಲ್ಲಿರುವ ಶ್ರೀಕ್ಷೇತ್ರ ದತ್ತ ಜಗದಂಬಾ ದೇವಾಲಯದಲ್ಲಿ ಜೂ. 14ರಿಂದ ಜೂ. 21ರ ವರೆಗೆ ಶ್ರೀ ದೇವರ ನೂತನ ಬಿಂಬ ಪ್ರತಿಷ್ಠೆ ಮತ್ತು ಬ್ರಹ್ಮಕಲಶೋತ್ಸವವು ಬಹು ವಿಜೃಂಭಣೆಯೊಂದಿಗೆ ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ಜೂ. 20ರ ಶನಿವಾರ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 'ಈ ರಾತ್ರೆಗ್ ಯಾನ್ ಪಗೇಲ್ಡ್' ಪ್ರದರ್ಶಿಸಲ್ಪಟ್ಟ ತುಳು ನಾಟಕ ಮಧ್ಯೆ ಜರಗಿದ ಸರಳ ಸಮಾರಂಭದಲ್ಲಿ ಬ್ರಹ್ಮಕಲಶೋತ್ಸವದ ಯಶಸ್ಸಿನ ಹಿನ್ನಲೆಯಲ್ಲಿ ತಮ್ಮ ಮಹತ್ತರ ಯೋಗದಾನ ನೀಡಿದವರನ್ನು ದೇವಾಲಯಾದ ಆಡಳಿತ ಮಂಡಳಿಯ ವತಿಯಿಂದ ದೇವಾಲಯದ ಆಡಳಿತ ಮಂಡಳಿ ಉಪಾಧ್ಯಕ್ಷ ಏಕನಾಥ್ ಬಂಗೇರ (ಚಿತ್ರ : 1), ಜೊತೆ ಕಾರ್ಯದರ್ಶಿ ಶಂಕರ್ ದೇವಾಡಿಗ ದಂಪತಿ (ಚಿತ್ರ : 2), ಜೊತೆ ಕೋಶಾಧಿಕಾರಿ ಪ್ರಕಾಶ್ ಕೋಟ್ಯಾನ್ (ಚಿತ್ರ : 3), ಕ್ಯಾಟರಿಂಗ್‌ನಲ್ಲಿ ಕಾರ್ಯ ನಿರ್ವಹಿಸಿದ ಮಹೇಶ್ ಪೂಜಾರಿ (ಚಿತ್ರ : 4) ಶೋಭಾ ಯಾತ್ರೆಯ ಮುಂದಾಳತ್ವ ವಹಿಸಿ ಯಶಸ್ವಿಗೊಳಿಸಿದ ನಗರದ ನಾಮಾಂಕಿತ ಬಹುಮುಖ ಕಲಾವಿದ ಅಶೋಕ್ ಕುಮಾರ್ ಕೊಡ್ಯಡ್ಕ (ಚಿತ್ರ : 5), 'ಈ ರಾತ್ರೆಗ್ ಪಗೆಲ್ಗ್ ಯಾನ್' ನಾಟಕದ ನಿರ್ದೇಶಕ ಕೃಷ್ಣರಾಜ್ ಶೆಟ್ಟಿಯವರನ್ನು ಗೌರವಿಸಲಾಯಿತು. (ಚಿತ್ರ : 6) ಚಿತ್ರದಲ್ಲಿ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಹರೀಶ್ ಕೋಟ್ಯಾನ್ ಮತ್ತು ಪದ್ಮಾಕೋಟ್ಯಾನ್ ದಂಪತಿ, ಗೌರವ ಕಾರ್ಯದರ್ಶಿ ದೀನದಾಸ್ ಬಿ. ಸನಿಲ್, ಆಡಳಿತ ಸಮಿತಿಯ ಅಧ್ಯಕ್ಷ ದಯಾನಂದ ಸಿ. ಅಂಚನ್, ಕಾರ್ಯದರ್ಶಿ ಯಶವಂತ್ ಸಿ. ಅಮೀನ್‌ರವರನ್ನು ಕಾಣಬಹುದು. (ಚಿತ್ರ, ವರದಿ : ಶ್ರೀಧರ್ ಉಚ್ಚಿಲ್)

ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನ : ಅಂದಿನ ಮಕ್ಕಳ ಬಾಲ್ಯ ಸ್ವರ್ಣಯುಗವಾಗಿತ್ತು : ಟಿ.ಆರ್. ಮಧುಸೂದನ್






ಮುಂಬಯಿ, ಜೂ.24- ಕಳೆದ 20-30 ವರ್ಷಗಳ ಹಿಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಭಯವಿತ್ತು. ಆದರೆ ಒತ್ತಡ ಇರಲಿಲ್ಲ. ಅಂಥ ಒತ್ತಡ ಮುಕ್ತ ಶಾಲಾ ದಿನಗಳು ಮಕ್ಕಳಿಗೆ ಸ್ವರ್ಣಯುಗವಾಗಿತ್ತು. ಅಂತಹ ಸುಂದರ ದಿನಗಳಲ್ಲಿ ಬಾಲ್ಯ ಕಳೆದ ನಾವೇ ಧನ್ಯರು. ಆ ಸುದಿನಗಳನ್ನು ನೆನಪು ಮಾಡಿಕೊಳ್ಳುವುದೇ ಒಂದು ಭಾಗ್ಯ. ಇದೊಂದು ಅಪರೂಪದಲ್ಲಿ ಅಪರೂಪದ, ವಿಭಿನ್ನ ಕಾರ್ಯಕ್ರಮ. ಕನ್ನಡ ನಾಡಿನ ವಿವಿಧ ಪ್ರದೇಶದಲ್ಲಿ ಕಲಿತವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದೀರಿ. ಶಾಲೆ ಕುರಿತು ಮಕ್ಕಳಿಗಾಗಲಿ, ತಂದೆ ತಾಯಿಗಳಿಗಾಗಲಿ ಯಾವುದೇ ಒತ್ತಡವಿಲ್ಲದ ಸುಂದರ ಆ ಬಾಲ್ಯದ ದಿನಗಳು ಯಾರಿಗೂ ಭಾರವಾಗಿರಲಿಲ್ಲ. ಅಂದು ಪಾಲಕರಿಗೆ ಆರ್ಥಿಕವಾಗಿ ತುಂಬ ಕಷ್ಟದ ದಿನಗಳು. ಮನೆಯಲ್ಲಿ ಕನಿಷ್ಠ ಮೂರು ನಾಲ್ಕು ಮಕ್ಕಳ ಲಾಲನೆ - ಪಾಲನೆಯಲ್ಲಿ ಪಾಲಕರು ಹೈರಾಣಾಗುತ್ತಿದ್ದ ದಿನಗಳವು. ಅಂತಹ ದಿನಗಳಲ್ಲೂ ಮಕ್ಕಳಿಗೆ ಶಾಲೆ ಎನ್ನುವುದು ಮನಸ್ಸಿಗೆ ಮುದ ನೀಡುವ ಸುಂದರ ತಾಣವಾಗಿತ್ತು. ಪಾಸು- ಫೇಲು ಎನ್ನುವುದಕ್ಕೆ ಸೀಮಿತ ವಾಗಿದ್ದ ಆ ಶಾಲಾದಿನಗಳು ಮಕ್ಕಳಿಗೆ ಸ್ವರ್ಣಯುಗವಾಗಿತ್ತು. ಆ ಸುಂದರ ದಿನಗಳ ನೆನಪುಗಳನ್ನು ಮೆಲುಕು ಹಾಕಲು ಅವಕಾಶ ಕಲ್ಪಿಸಿದ ಎಲ್ಲ ಕಾರ್ಯಕರ್ತರನ್ನು ಅಭಿನಂದಿಸಿದರು.

ಜೂನ್ 13, 2026 ಶನಿವಾರ ಇಳಿಹೊತ್ತು ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ಅಧಿಕ ಮಾಸದ ನಿಮಿತ್ತ ಘಾಟ್ಕೋಪರ್ ಪೂರ್ವದ ಕನ್ನಡ ವೆಲ್ಫೇರ್ ಸೊಸೈಟಿ ಸಭಾಗೃಹದಲ್ಲಿ ಹಮ್ಮಿಕೊಂಡ ಜ್ಯೋತಿ ಕಡಕೋಳ ಅವರ ಭಾಮಿನಿ ಷಟ್ಪದಿಯಲ್ಲಿ 'ಭರತನ ಆಗಮನ' ಕಥಾ ವಾಚನ ಕಾರ್ಯಕ್ರಮದಲ್ಲಿ 'ಸೃಜನಾ' ಲೇಖಕಿಯರ ಬಳಗ ನಡೆಸಿಕೊಟ್ಟ 'ಒತ್ತಡರಹಿತ ಕನ್ನಡ ಶಾಲಾ ದಿನಗಳ ಸವಿನೆನಪು' ಕಾರ್ಯಕ್ರಮದ ಸಭಾಧ್ಯಕ್ಷತೆ ವಹಿಸಿದ್ದ ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅಧಿಕ ಮಾಸದ ನಿಮಿತ್ತ ಪ್ರತಿಷ್ಠಾನ ಹಮ್ಮಿಕೊಂಡ 'ಭಾಮಿನಿ ಷಟ್ಪದಿಯಲ್ಲಿ ಭರತನ ಆಗಮನ' ಕಥಾ ವಾಚನವನ್ನು ಪುಣೆಯ ಶಾಮರಾವ್ ವಿಠಲ್ ಶಾಲೆಯ ಪ್ರಾಂಶುಪಾಲೆ ಜ್ಯೋತಿ ಕಡಕೋಳ ನಡೆಸಿಕೊಟ್ಟರು. ಶ್ರೀ ರಾಮ ಹಾಗೂ ಭರತನ ನಡೆ ಮನುಕುಲದ ಶ್ರೇಷ್ಠ ನಡೆಗಳಾಗಿದ್ದವು. ಅವಧಿಗಿಂತ ಒಂದು ಕ್ಷಣವೂ ತಡಮಾಡದೆ ರಾಮ ವನವಾಸಕ್ಕೆ ತೆರಳುವಾಗ ಅವನು ಕೊಟ್ಟ ವಚನ ಸದಾ ಅನುಕರಣೀಯ. ಹಾಗೆಯೇ ರಾಮನ ಆಗಮನವನ್ನೇ ಕಾಯುವ ಭರತನ ನಡೆ ಸದಾ ಆದರ್ಶ. ಅಧಿಕ ಮಾಸದ ಶುಭಾವಸರದಲ್ಲಿ ಅವಕಾಶ ನೀಡಿದ ಮೂರೂ ಸಂಸ್ಥೆಗಳಿಗೆ ಜ್ಯೋತಿ ಕಡಕೋಳ ಅವರು ಅಭಿನಂದನೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಸಂಯೋಜಕರಾದ ವಿಶ್ವನಾಥ ದೊಡ್ಮನೆ ಅವರು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತ, ಹಿರಿಯ ವಿದ್ವಾಂಸರಾದ ಕಡೆಂಗೋಡ್ಲು ಶಂಕರ ಭಟ್ ಅವರ 'ಅನುಭವ ಸವಿಯಲ್ಲ ಅದರ ನೆನಪೇ ಸವಿ' ಎನ್ನುವ ಮಾತನ್ನು ನೆನಪಿಸುತ್ತ, ನಮಗೆಲ್ಲ ಒಂದು ಬೇಜಾರು ಇದೆ. ನಮ್ಮ ಹಾಗೆ ನಮ್ಮ ಮಕ್ಕಳಿಗೆ ಒತ್ತಡರಹಿತ ಬಾಲ್ಯವಿಲ್ಲ ಎನ್ನುವ ನೋವು ನಮ್ಮ ಮನಸ್ಸಿನಲ್ಲಿ ಕಾಡುತ್ತಿದೆ ತಾನೇ. ಆದರೆ ನಾವು ಏನೂ ಮಾಡುವ ಹಾಗಿಲ್ಲ. ನಮ್ಮ ಹಳೆಯ ಒತ್ತಡರಹಿತ ಸುದಿನಗಳನ್ನು ನೆನಪಿಸಿಕೊಳ್ಳುತ್ತಿರುವುದೇ ಒಂದು ಭಾಗ್ಯ. ಹಿಂದೆ ಶಾಲೆ ಬಿಟ್ಟಾಕ್ಷಣ ಪ್ರತಿ ಹೆಣ್ಮಕ್ಕಳು ಒಂದೇ ವಿಷಯ ಮಾತನಾಡಿಕೊಳ್ಳುತ್ತಿದ್ದರು. 'ನಾಳೆ ಯಾವ ಹೂವು ಮುಡಿದುಕೊಂಡು ಬರುವುದು!?' ಎಂದು. ಅಂದರೆ ಅಂದಿನ ಮಕ್ಕಳು ಪ್ರಕೃತಿಯೊಂದಿಗೆ ಅಷ್ಟೊಂದು ಒಡನಾಟ ಹೊಂದಿದ್ದರು ಎಂಬ ಕುರಿತಾಗಿ ತಮ್ಮ ಶಾಲಾ ದಿನಗಳ ನೆನಪುಗಳನ್ನು ಹಂಚಿಕೊಂಡರು.

ಕನ್ನಡ ಶಾಲೆಯ ಸವಿನೆನಪನ್ನು ಹಂಚಿಕೊಂಡ ಸೃಜನಾ ಬಳಗದ ಸದಸ್ಯೆಯರಾದ ಗಾಯತ್ರಿ ನಾಗೇಶ್, ಲತಾ ಶೆಟ್ಟಿ ಮುದ್ದುಮನೆ, ಪ್ರಮೋದ ಮಾಡ, ಸರ್ವಮಂಗಳ ಅರಸ, ಶೋಭಾ ಶೆಟ್ಟಿ, ಮಧು ವಸ್ತ್ರದ, ಹರಿಣಿ ಎಂ. ಶೆಟ್ಟಿ, ಶಾರದಾ ಅಂಬೆಸಂಗೆ, ರಶ್ಮಿ ಭಟ್, ಡಾ. ಜಿ.ಪಿ. ಕುಸುಮ ಅವರು ತಮ್ಮ ತಮ್ಮ ಬಾಲ್ಯ ಹೇಗೆ ಒತ್ತಡರಹಿತವಾಗಿತ್ತು ಎನ್ನುವುದರೊಂದಿಗೆ ತಮ್ಮ ಶಾಲೆ, ಶಾಲೆಯ ಪರಿಸರ, ಶಿಕ್ಷಕರ ಮುಗ್ಧತೆಗಳನ್ನು ವಿವರಿಸುವುದರೊಂದಿಗೆ ಅಂದಿನ ದಿನದಲ್ಲಿ ಮಕ್ಕಳ ಬಾಲ್ಯ ಮೈದಾನದಲ್ಲಿ ಹೇಗೆ ಕಳೆಯುತ್ತಿತ್ತು...! ಇರುವ ಒಂದೋ ಎರಡೋ ಜೊತೆ ಬಟ್ಟೆಯಲ್ಲೇ ಕಳೆಯುತ್ತಿದ್ದ ದಿನಗಳು, ಮಳೆಗಾಲದಲ್ಲಿ ಮೈತುಂಬಿ ಹರಿಯುತ್ತಿದ್ದ ಹೊಳೆ -ಹಳ್ಳಗಳ ಸೌಂದರ್ಯ, ಏಕೋಪಾಧ್ಯಾಯ ಶಾಲೆಗಳ ಅವಸ್ಥೆ, ಹೀಗೆ ''ಒತ್ತಡ ರಹಿತ ನಮ್ಮ ಬಾಲ್ಯದ ಶಾಲಾ ದಿನಗಳ ಸವಿ ನೆನಪು''ಗಳನ್ನು ಸೃಜನಾ ಒಳಗದ ಸದಸ್ಯೆಯರು ರಸವತ್ತಾಗಿ ವರ್ಣಿಸಿದರು.

ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದ ಸೃಜನಾ ಬಳಗದ ಪದ್ಮಜಾ ಮಣ್ಣೂರ ಇದೊಂದು ಅಪೂರ್ವ ಸಂಗಮ. ಯಾವುದೇ ಅಂಕದ ಆಸೆಗಳಿಲ್ಲದ ಆ ಸುಂದರ ಶಾಲಾ ದಿನಗಳ ನೆನಪುಗಳನ್ನು ಮೆಲುಕು ಹಾಕಿ ಸಂತೋಷ ಹಂಚಿಕೊಳ್ಳುವುದರಿಂದ ಒತ್ತಡ ಕಡಿಮೆ ಮಾಡಿಕೊಳ್ಳುವ ಸದವಕಾಶ ಒದಗಿಸಿದ್ದಾರೆ . ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನದವರು ಎಂದ ಅವರು ನನ್ನ ತಂದೆ ಸಂಯುಕ್ತ ಕರ್ನಾಟಕದ ಸಂಪಾದಕರಾಗಿದ್ದರು. ಹಾಗಾಗಿ ಪತ್ರಿಕೆ ಪ್ರತಿದಿನ ಮನೆಗೆ ಬರುತ್ತಿತ್ತು. ಬರುವ ಒಂದೇ ಪ್ರತಿಯನ್ನು ಊರಿನ ಹಲವರು ಓದಿ ಸಂಜೆಯೊಳಗೆ ಅದನ್ನು ಮೂರಾಬಟ್ಟೆ ಮಾಡುತ್ತಿದ್ದ ಆ ದಿನಗಳನ್ನು ನೆನಪಿಸಿದ ಅವರು ಕಳೆದ ಇಪ್ಪತ್ನಾಲ್ಕು ವರ್ಷಗಳಿಂದ ಸೃಜನಾ ನಡೆದು ಬಂದ ದಾರಿಯನ್ನು ವಿವರಿಸಿದರು.

ಇನ್ನೋರ್ವ ಗೌರವ ಅತಿಥಿಯಾಗಿ ಆಗಮಿಸಿದ್ದ ಕನ್ನಡ ವೆಲ್ಫೇರ್ ಸೊಸೈಟಿಯ ಅಧ್ಯಕ್ಷರಾದ ನವೀನ್ ಇನ್ನಬಾಳಿಕೆ ಮಾತನಾಡಿ ಮಾಸ್ತರ ಕೈಯಲ್ಲಿ ತಿಂದ ಬೆತ್ತದ ಪೆಟ್ಟಿಗೆ ಲೆಕ್ಕವಿಲ್ಲ. ಅಂದಿನ ದಿನದಲ್ಲಿ ಮಾಸ್ತರರು ಬಡವರು, ವಿದ್ಯಾರ್ಥಿಗಳೂ ಬಡವರು. ಅಂದು ಅಕ್ಷರ ಕಲಿಕೆಯೊಂದಿಗೆ ಸಂಸ್ಕೃತಿ, ಸಂಸ್ಕಾರಗಳನ್ನು ಕಲಿಸಿ ನಮ್ಮನ್ನು ತಿದ್ದಿ - ತೀಡಿ ಉತ್ತಮ ನಾಗರಿಕರನ್ನಾಗಿ ಮಾಡುತ್ತಿದ್ದರು. ಅಂದಿನ ಶಿಕ್ಷಕರು ಡಿಗ್ರಿ ಕಡಿಮೆ ಇದ್ದರೂ ವ್ಯಾಕರಣ, ಭಾಷಾ ಪ್ರೌಢಿಮೆಯಲ್ಲಿ ಸಾಕಷ್ಟು ಪಾಂಡಿತ್ಯ ಹೊಂದಿದವರಾದ್ದರಿಂದ ತಾವು ಕಲಿಸುವ ಶಾಲೆಯ ಮಕ್ಕಳನ್ನು ಪಾಂಡಿತ್ಯವಂತರನ್ನಾಗಿ ಮಾಡಲು ಶ್ರಮಿಸುತ್ತಿದ್ದರು ಎಂದು ಹೇಳುತ್ತಾ, ಇಂತಹ ಸಮಾಜಮುಖಿ ಕಾರ್ಯಕ್ರಮಗಳಿಗೆ ನಮ್ಮ ಸಭಾಗೃಹ ಸದಾ ಅವಕಾಶ ನೀಡುತ್ತದೆ ಎಂದರು.

ವಿವಿಧ ಮಹಿಳಾ ತಂಡದವರಿಂದ ಗೀತಗಾಯನ ನಡೆಯಿತು. ಸೃಜನಾ ಬಳಗದ ಕಾರ್ಯದರ್ಶಿ ಲತಾ ಶೆಟ್ಟಿ ಮುದ್ದುಮನೆ ಸ್ವಾಗತಿಸಿದರು. ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಕಾರ್ಯದರ್ಶಿ ಸವಿತಾ ಆರ್. ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳ ಕುರಿತು ವಿವರಿಸಿದರು. ಮಾಲತಿ ಪುತ್ರನ್ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಜ್ಯೋತಿ ಕಡಕೋಳ ಅವರನ್ನು ಕುಮಾರಿ ಅನಘ ಪರಿಚಯಿಸಿದರು. ದೀಪಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಹಿರಿಯರಾದ ನಾರಾಯಣ ಶೆಟ್ಟಿ ನಂದಳಿಕೆ, ಹರೀಶ್ ಶೆಟ್ಟಿ, ಸಾ.ದಯಾ, ರತ್ನಾಕರ ಶೆಟ್ಟಿ, ನಾರಾಯಣ ರಾವ್, ಸುಜಲಾ ಶೆಟ್ಟಿ, ರಾಜ್‌ವರ್ಮ ಜೈನ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ರೇ-ರೋಡ್ ಶ್ರೀ ಅಯ್ಯಪ್ಪ ಭಕ್ತ ವೃಂದದ ಮಂದಿರದಲ್ಲಿ ಸಂಕ್ರಾಂತಿ ಪೂಜೆ ವರ್ಲಿ ಅಪ್ಪಾಜಿ ಬೀಡು ಕ್ಷೇತ್ರದ ಜೀರ್ಣೋದ್ಧಾರಕ್ಕೆ ದೇಣಿಗೆ ಸಮರ್ಪಣೆ




ಮುಂಬಯಿ, ಜೂ. 24- ರೇ-ರೋಡ್ ದಾರುಖಾನಾ ಹೊಟೇಲ್ ಉಡುಪಿಯಲ್ಲಿ ಸತೀಶ್ ಗುರುಸ್ವಾಮಿ ಮಾರ್ಗದರ್ಶನದಲ್ಲಿ ಸ್ಥಾಪನೆಗೊಂಡಿರುವ ಶ್ರೀ ಅಯ್ಯಪ್ಪ ಸ್ವಾಮಿ ಭಕ್ತ ವೃಂದ ಮಂದಿರದಲ್ಲಿ ತಿಂಗಳ ಸಂಕ್ರಮಣದ ಅಂಗವಾಗಿ ವಿಶೇಷ ಪೂಜೆ ಭಜನೆ ನಡೆಯಿತು. ಸಂಜೆ ಅಪ್ಪಾಜಿ ಬೀಡು ವರ್ಲಿಯ ಮಹಿಳಾ ಮಂಡಳಿ ಹಾಗೂ ರೇ-ರೋಡ್ ಭಕ್ತ ವೃಂದ ಅವರಿಂದ ಭಜನಾ ಸಂಕೀರ್ತನೆ ನಡೆದು ಮಹಾ ಮಂಗಳಾರತಿಯನ್ನು ಸತೀಶ್ ಗುರುಸ್ವಾಮಿ ನಡೆಸಿದರು.

ಅಪ್ಪಾಜಿ ಬೀಡು ಕ್ಷೇತ್ರ ಜೀರ್ಣೋದ್ಧಾರಗೊಳ್ಳುತ್ತಿರುವ ಬಗ್ಗೆ ವಿಶೇಷ ಪ್ರಾರ್ಥನೆಯನ್ನು ಸಮಿತಿ ಭಕ್ತರೆಲ್ಲರ ಸಹಕಾರದಿಂದ ಮಾಡಲಾಯಿತು. ಅಪ್ಪಾಜಿ ಬೀಡು ಜೀರ್ಣೋದ್ಧಾರ ಬ್ರಹ್ಮಕಲಶೋತ್ಸವದ ಸಾಂಗವಾಗಿ ನಡೆಯಲಿ ಎಂದು ರೇ-ರೋಡ್ ಶ್ರೀ ಅಯ್ಯಪ್ಪ ಭಕ್ತ ವೃಂದದ ವತಿಯಿಂದ ದೇಣಿಗೆಯನ್ನು ಸತೀಶ್ ಗುರುಸ್ವಾಮಿ ಮತ್ತು ಪದಾಧಿಕಾರಿಗಳು ಅಪ್ಪಾಜಿ ಬೀಡುವಿನ ಆಡಳಿತ ಟ್ರಸ್ಟಿ ಶಾಂಭವಿ ರಮೇಶ್ ಶೆಟ್ಟಿ, ಅಧ್ಯಕ್ಷ ಪದ್ಮನಾಭ ಶೆಟ್ಟಿಯವರಿಗೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ವೈವಾಹಿಕ ಜೀವನದ 25 ವರ್ಷದ ಸಂಭ್ರಮವನ್ನು ಆಚರಿಸಿಕೊಂಡಿರುವ ಅಪ್ಪಾಜಿ ಬೀಡುವಿನ ಅಧ್ಯಕ್ಷ ಪದ್ಮನಾಭ ಶೆಟ್ಟಿ ದಂಪತಿ ಮತ್ತು ಟ್ರಸ್ಟಿ ದಿನೇಶ್ ಕುಲಾಲ್ ದಂಪತಿಯನ್ನು ಗೌರವಿಸಿದರು ಹಾಗೂ ಸಂಸ್ಥೆಯ ಮಂದಿರಕ್ಕೆ ಸ್ಥಳಾವಕಾಶ ನೀಡಿದ ರೇ-ರೋಡ್ ಹೋಟೆಲ್ ಉಡುಪಿ ಮಾಲಕ ಶುಭಾನಂದ ಶೆಟ್ಟಿಯವರನ್ನು ಹಾಗೂ ದಾನಿಗಳನ್ನು ಗೌರವಿಸಲಾಯಿತು.



ಪೂಜೆಯಲ್ಲಿ ರೇ-ರೋಡ್ ಸ್ವಾಮಿ ಅಯ್ಯಪ್ಪ ಭಕ್ತ ವೃಂದದ ಗೌರವ ಅಧ್ಯಕ್ಷ ಮಂಜುನಾಥ ಶೆಟ್ಟಿ, ಅಧ್ಯಕ್ಷ ಕಿಶೋರ್ ಶೆಟ್ಟಿ ಕಟಪಾಡಿ, ಸಂಚಾಲಕ ಜಗನ್ನಾಥ ಶೆಟ್ಟಿ, ಉಪಾಧ್ಯಕ್ಷ ಬೆಳಪು ಪ್ರದೀಪ್ ಶೆಟ್ಟಿ, ಕಾರ್ಯದರ್ಶಿ ಶಿಬರೂರು ಗುತ್ತು ಸುರೇಶ್ ಶೆಟ್ಟಿ, ಕೋಶಾಧಿಕಾರಿ ರವಿ ಮೂಳೂರು, ಜೊತೆ ಕಾರ್ಯದರ್ಶಿ ಸುಕೇಶ್ ಸ್ವಾಮಿ, ಜೊತೆ ಕೋಶಾಧಿಕಾರಿ ರೂಪೇಶ್ ಸಾಣೂರು ಹಾಗೂ ಮಂಜುನಾಥ ಗುರುಸ್ವಾಮಿ ಸೋಮೇಶ್ವರ, ಜಯ ಗುರುಸ್ವಾಮಿ ಅಡ್ಡೆ ಹಾಗೂ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು.

ಚಿಣ್ಣರ ಬಿಂಬ ಡೊಂಬಿವಲಿ (ಪೂರ್ವ) ಶಿಬಿರದ 2026 - 2027ನೇ ಶೈಕ್ಷಣಿಕ ಸಾಲಿನ ಕನ್ನಡ ಕಲಿಕಾ ತರಗತಿಯ ಉದ್ಘಾಟನಾ ಸಮಾರಂಭ




ಡೊಂಬಿವಲಿ, ಜೂ. 24- ಚಿಣ್ಣರ ಬಿಂಬ ಡೊಂಬಿವಲಿ ಪೂರ್ವ ಶಿಬಿರದ 2026 - 2027ನೇ ಶೈಕ್ಷಣಿಕ ಸಾಲಿನ ಕನ್ನಡ ಕಲಿಕಾ ತರಗತಿಯ ಉದ್ಘಾಟನಾ ಸಮಾರಂಭವು ಜೂನ್ 14ರ ಆದಿತ್ಯವಾರದಂದು ಜಿ.ಎಸ್.ಬಿ. ಶಾಲೆಯಲ್ಲಿ ನಡೆಯಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಜಗದಂಬಾ ಮಂದಿರದ ಧರ್ಮದರ್ಶಿಯವರ ಪತ್ನಿ ಶರ್ಮಿಳಾ ದಿವಾಕರ್ ರೈ ಹಾಗೂ ಕೇಂದ್ರೀಯ ಸಮಿತಿಯ ಸದಸ್ಯೆ ಮಂಜುಳಾ ಶೆಟ್ಟಿ ದೀಪ ಪ್ರಜ್ವಲಿಸಿ ಚಿಣ್ಣರಾದ ಧೃವಿಕಾ ಹಾಗೂ ದೃಶಾನಿಯವರ ಪ್ರಾರ್ಥನೆಯೊಂದಿಗೆ ಉದ್ಘಾಟನೆಯಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶರ್ಮಿಳಾ ದಿವಾಕರ್ ರೈ ಮಾತನಾಡುತ್ತಾ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಚಿಣ್ಣರ ಬಿಂಬವು ಅನೇಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇಂದು ಇಷ್ಟೊಂದು ಮಕ್ಕಳು ಕನ್ನಡ ಕಲಿಯಲು ಬಂದಿರುವುದು ನೋಡಿದರೆ ತುಂಬಾ ಸಂತೋಷವಾಗುತ್ತಿದೆ. ನೀವೆಲ್ಲರ ಭವಿಷ್ಯವು ಉಜ್ವಲವಾಗಿ ಜೀವನವು ಸುಖಮಯವಾಗಲಿ ಎಂದು ಶುಭ ಹಾರೈಸಿದರು.

ಕೇಂದ್ರೀಯ ಸಮಿತಿಯ ಸದಸ್ಯೆ ಮಂಜುಳಾ ಶೆಟ್ಟಿ ಮಾತನಾಡುತ್ತಾ, ಚಿಣ್ಣರ ಬಿಂಬ ಎಂಬ ಚಿಕ್ಕ ಗಿಡವು ಇಂದು ಹೆಮ್ಮರವಾಗಿ ಬೆಳೆದು ಬರುವ ವರ್ಷ ಬೆಳ್ಳಿ ಹಬ್ಬವನ್ನು ಆಚರಿಸಲಿದೆ ಎಂದು ಹೇಳಲು ತುಂಬಾ ಸಂತೋಷವಾಗುತ್ತಿದೆ. ಇದರ ಹಿಂದೆ ಪ್ರಕಾಶ್ ಭಂಡಾರಿ ಹಾಗು ಅನೇಕ ಹಿರಿಯರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಇಲ್ಲಿ ಮಕ್ಕಳಿಗೆ ಕನ್ನಡ ಕಲಿಸುವುದರ ಜೊತೆಗೆ ಭಜನೆ ರಾಮಾಯಣ ಮಹಾಭಾರತದ ಕಥೆಗಳು, ಸಂಸ್ಕಾರ - ಸಂಸ್ಕೃತಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಈ ಮೂಲಕ ಚಿಣ್ಣರ ಬಿಂಬದ ಮಕ್ಕಳು ಸರ್ವತೋಮುಖ ಬೆಳವಣಿಗೆಯನ್ನು ಪಡೆಯುತ್ತಾರೆ ಎಂದು ಹೇಳಲು ತುಂಬಾ ಖುಷಿಯಾಗುತ್ತದೆ. ಇಂದು 12 ಮಕ್ಕಳು ಹೊಸ ದಾಖಲಾತಿಯಾಗಿದ್ದಾರೆ. ಹೀಗೆಯೇ ಇನ್ನೂ ಹೆಚ್ಚಿನ ಮಕ್ಕಳು ಇದರ ಸದುಪಯೋಗವನ್ನು ಪಡೆದು ಯಶಸ್ಸಿನ ಬದುಕನ್ನು ಪಡೆಯಲಿ ಎಂದು ಹಾರೈಸಿದರು.

ಪಾಲಕರಾದ ಸಂಧ್ಯಾ ಶೆಟ್ಟಿ, ಸುಜಾತಾ ಕಾಮತ್, ಪ್ರಭಾ ಹಾಗು ಚಿಣ್ಣರಾದ ಶಿವಂ ಮತ್ತು ಧೃವಿಕಾ ಚಿಣ್ಣರ ಬಿಂಬದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಪಾಲಕರು ಚಿಣ್ಣರು, ಹಳೆವಿದ್ಯಾರ್ಥಿಗಳು, ಭಜನೆ ಶಿಕ್ಷಕಿ ವಿನಿಶಾ ಶೆಟ್ಟಿ ಉಪಸ್ಥಿತರಿದ್ದರು. ಪ್ರಾದೇಶಿಕ ಮುಖ್ಯಸ್ಥೆ ಜ್ಯೋತಿ ಶೆಟ್ಟಿ ಸ್ವಾಗತಿಸಿದರು. ಶಿಬಿರದ ಮುಖ್ಯಸ್ಥೆ ಅಂಬಿಕಾ ಶೆಟ್ಟಿ, ಎಲ್ಲರನ್ನು ವಂದಿಸಿದರು. ಕಾರ್ಯಕ್ರಮದಲ್ಲಿ ಚಿಣ್ಣರಿಗೆ ಹಾಗೂ ಪಾಲಕರಿಗೆ ಸಿಹಿ ಹಂಚಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.


ಸಿಂಗಾಪುರದಲ್ಲಿ ಯೋಗ ಕಲಿಸುತ್ತಿರುವ ಮರವಂತೆಯ ಕುಶ ಪೂಜಾರಿ



ಸಿಂಗಾಪುರ, ಜೂ. 24- ಕುಂದಾಪುರ ತಾಲೂಕಿನ ಮರವಂತೆ ಗ್ರಾಮದ ಕುಶ ಪೂಜಾರಿ ದೂರದ ಸಿಂಗಾಪುರದಲ್ಲಿ ಕಳೆದ ಐದಾರು ವರ್ಷಗಳಿಂದ ಯೋಗ ಶಿಕ್ಷಕರಾಗಿ ದಿನನಿತ್ಯ ಯೋಗ ಅಭ್ಯಾಸ ಕಲಿಸುವುದಲ್ಲದೆ ಅಂತರಾಷ್ಟ್ರೀಯ ಯೋಗ ದಿನ ಜೂ. 21ರ ಆದಿತ್ಯವಾರದಂದು ಕಡಲತಡಿಯಲ್ಲಿ ಯೋಗ ದಿನಾಚರಣೆಯನ್ನು ನಡೆಸಿದ್ದಾರೆ.

ಬೈಂದೂರು ಸಮೀಪದ ಮರವಂತೆಯ ರಾಮಚಂದ್ರ ಪೂಜಾರಿ ಮತ್ತು ನೀಲು ಪೂಜಾರಿ ದಂಪತಿಯ ಪುತ್ರ ಕುಶ ಪೂಜಾರಿ, ತನ್ನ ಪ್ರಾಥಮಿಕ ಶಿಕ್ಷಣವನ್ನು ಮರವಂತೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂರೈಸಿದರು. 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಶಿಕ್ಷಕ ಎಂ. ಎ. ಲಂಬಾಣಿ ಅವರಿಂದ ಪ್ರೇರಿತರಾಗಿ ಯೋಗದ ಕುರಿತು ಆಸಕ್ತಿ ಬೆಳೆಸಿಕೊಂಡರು.

ಕಾಲೇಜು ಶಿಕ್ಷಣದ ಪಿಯುಸಿಯಲ್ಲಿ ಕಲಿಯುತ್ತಿದ್ದಾಗ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಯೋಗ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ಪ್ರಥಮ ಸ್ಥಾನ ಗಳಿಸಿದ್ದರು. ಕುಂದಾಪುರದ ಡಾ. ಬಿ. ಬಿ. ಹೆಗಡೆ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಮಂಗಳೂರು ವಿ.ವಿ.ಯನ್ನು ಪ್ರತಿನಿಧಿಸಿ ಮೂರು ಬಾರಿ ಅಖಿಲ ಭಾರತ ಯೋಗ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಸ್ಥಾನಕ್ಕೆ ಭಾಜನರಾಗಿದ್ದರು. ಅಂತರ್ ಕಾಲೇಜು ಮಟ್ಟದ ಯೋಗ ಸ್ಪರ್ಧೆಯಲ್ಲಿ ಮೂರು ಬಾರಿ ವೈಯಕ್ತಿಕ ಚಾಂಪಿಯನ್ ತನ್ನ ಮುಡಿಗೇರಿಸಿಕೊಂಡಿದ್ದಾರೆ. ಪ್ರಸ್ತುತ ದೇಹಾರೋಗ್ಯಕ್ಕೂ ಮತ್ತು ದೇಹಾಕೃತಿಗೆ ವಿಶೇಷ ಗಮನ ನೀಡುತ್ತಿರುವ ಸಿಂಗಾಪುರದ ದೇಶಿಗರಿಗೆ ಭಾರತವೆಂದರೆ ತುಂಬಾ ಪ್ರೀತಿ. ಭಾರತದ ಯೋಗಾಭ್ಯಾಸದವೆಂದರೆ ವಿಶೇಷ ಗೌರವ, ಈ ದೇಶದ ಜನತೆ ಯೋಗಾಭ್ಯಾಸವನ್ನು ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ.



ಕುಶ ಪೂಜಾರಿ ಕಳೆದ ಆರು ವರ್ಷದಿಂದ ಸಿಂಗಾಪುರದ ಯೂನಿಯನ್ ಯೋಗ ಮತ್ತು ಆಯುರ್ವೇದ ಸಿಂಗಾಪುರದಲ್ಲಿ ಯೋಗ ಶಿಕ್ಷಕರಾಗಿ ತರಬೇತಿ ನೀಡುತ್ತಿದ್ದಾರೆ. ಯೋಗ ಶಿಕ್ಷಣ ಕೇಂದ್ರದಿಂದ ಜೂ. 21ರ ಆದಿತ್ಯವಾರದಂದು ಸಿಂಗಾಪುರದ ಕಡಲ ಕಿನಾರೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಡೆಸಿರುತ್ತಾರೆ. ತನ್ನ ವೈವಾಹಿಕ ಜೀವನದಲ್ಲಿ ಹೇರೆಂಜಾಲಿನ ಅಪ್ಪೇಡಿಮನೆ ಮಹಾಬಲ ಪೂಜಾರಿ ಮತ್ತು ರತ್ನಾ ಪೂಜಾರಿ ಪುತ್ರಿ ನೇತ್ರಾ ಅವರನ್ನು ವಿವಾಹವಾಗಿ ಸಿಂಗಾಪುರದಲ್ಲಿ ವೃತ್ತಿ ನಿರತರಾಗಿದ್ದಾರೆ.

ಉಡುಪಿ : ದೇವಾಡಿಗ ಮಹಾಧಿವೇಶನ -2026ರ ಬಗ್ಗೆ ಪೂರ್ವಭಾವಿ ಸಭೆ





ಉಡುಪಿ, ಜೂ. 24- ಪ್ರಸ್ತುತ ವರ್ಷದಲ್ಲಿ ಜರಗಲಿರುವ ದೇವಾಡಿಗ ಮಹಾಧಿವೇಶನ - 2026ಕ್ಕಾಗಿ ಜೂ. 21ರ ಆದಿತ್ಯವಾರ ಉಡುಪಿಯಲ್ಲಿ ನಡೆಯಲಿರುವ ಬಗ್ಗೆ ಪೂರ್ವಭಾವಿ ಸಭೆಯು ದೇವಾಡಿಗ ಸಮಾಜ ಸೇವಾ ಸಂಘ (ರಿ.) ಪಾವಂಜೆಯಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ವಿಶ್ವ ದೇವಾಡಿಗ ಮಹಾ ಮಂಡಳದ ಅಧ್ಯಕ್ಷ ಧರ್ಮಪಾಲ್ ಯು. ದೇವಾಡಿಗ ವಹಿಸಿದ್ದರು. ಅವರು ಈ ಅಧಿವೇಶನದ ಅಗತ್ಯತೆಯಿಂದ ಆಗುವ ಪ್ರಯೋಜನವನ್ನು ವಿವರಿಸುತ್ತಾ ಎಲ್ಲರ ಸಹಕಾರವನ್ನು ಯಾಚಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮುಂಬಯಿ ಸಂಘದ ಅಧ್ಯಕ್ಷ ರವಿ ಎಸ್. ದೇವಾಡಿಗ ಮಾತನಾಡುತ್ತಾ, ಹಣ ಬಲ ಒಂದಿದ್ದರೆ ಸಾಲದು. ಜನ ಬಲ ಮುಖ್ಯವಾಗಿ ಬೇಕಾಗಿದೆ. ಇದನ್ನು ನಿಮ್ಮಲ್ಲಿ ನಿರೀಕ್ಷೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಸಂಘಟನಾ ಕಾರ್ಯದರ್ಶಿ ಜನಾರ್ದನ ಪಡುಪಣಂಬೂರು ಮಾತನಾಡುತ್ತಾ, ಸಂಘಟನೆ ದೃಢವಾಗಿ ಕೆಲಸ ಮಾಡಲು ವಿವಿಧ ಉಪ ಸಮಿತಿಗಳನ್ನು ಮಾಡಬೇಕಾದ ಅಗತ್ಯತೆಯನ್ನು ತಿಳಿಸಿದರು. ಉಡುಪಿ ನಗರ ಸಭೆ ಮಾಜಿ ಸದಸ್ಯ ವಿಜಯ ಕೊಡವೂರು ಗ್ರಾಮ ಸಭೆಗಳನ್ನು ರಚಿಸಿ ತಳಮಟ್ಟದಿಂದಲೇ ಪುಷ್ಟೀಕರಿಸುವ ಬಗ್ಗೆ ವಿವರಿಸಿದರು. ಪಾವಂಜೆ ಸಂಘದ ಮಹಿಳಾ ವೇದಿಕೆ ಅಧ್ಯಕ್ಷೆ ವಿಜಯಲಕ್ಷ್ಮೀ ಜನಾರ್ದನ್ ಉಪಸ್ಥಿತರಿದ್ದರು.

ಸಭೆಯಲ್ಲಿ ಉಡುಪಿ, ಉದ್ಯಾವರ, ಕಟಪಾಡಿ, ಕಾಪು, ಉಚ್ಚಿಲ, ಪಡುಬಿದ್ರೆ, ಎರ್ಮಾಳು, ಎಲ್ಲೂರು, ಬಂಟಕಲ್ಲು, ಪಲಿಮಾರು, ಬೆಳ್ಮಣ್ಣು, ಹೆಜಮಾಡಿ, ಮೂಲ್ಕಿ, ಪಾವಂಜೆ ಸಂಘಗಳ ಅಧ್ಯಕ್ಷರು ಪದಾಧಿಕಾರಿಗಳು ಭಾಗವಹಿಸಿದರು.

ಪಾವಂಜೆ ಸಂಘದ ಅಧ್ಯಕ್ಷ ಅಣ್ಣಪ್ಪ ದೇವಾಡಿಗ ಪಕ್ಷಿಕೆರೆ, ಉಡುಪಿ ಸಂಘದ ಅಧ್ಯಕ್ಷ ರತ್ನಾಕರ್ ಜಿ. ಎಸ್., ಮಂಗಳೂರು ಸಂಘದ ಅಧ್ಯಕ್ಷ ಅಶೋಕ್ ಮೊೈಲಿ ಹಾಗೂ ಮೇಲೆ ತಿಳಿಸಲಾದ ಎಲ್ಲಾ ಸಂಘದ ಅಧ್ಯಕ್ಷರುಗಳು ತಮ್ಮ ತಮ್ಮ ಅನಿಸಿಕೆಗಳನ್ನು ಮಂಡಿಸಿದರು.


ಪ್ರಾರಂಭದಲ್ಲಿ ಮಹಿಳಾ ವೇದಿಕೆ ಉಪಾಧ್ಯಕ್ಷೆ ಜಯಶ್ರೀ ಯಾದವ್ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶ್ರೀ ಏಕನಾಥೇಶ್ವರಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಉಪಾಧ್ಯಕ್ಷ ಯಾದವ ದೇವಾಡಿಗ ಸ್ವಾಗತಿಸಿದರು. ವಿಶ್ವ ದೇವಾಡಿಗ ಮಹಾಮಂಡಳದ ಪ್ರಧಾನ ಕಾರ್ಯದರ್ಶಿ ಗಣೇಶ್ ದೇವಾಡಿಗ ಅಂಬಲಪಾಡಿ ಪ್ರಾಸ್ತಾವಿಕ ಮಾತುಗಳನ್ನು ಮಂದಿಸಿದರು. ಕೊನೆಯಲ್ಲಿ ಪಾವಂಜೆ ಸಂಘದ ಉಪಾಧ್ಯಕ್ಷ ಸತೀಶ್ ಇಂದಿರಾನಗರ ಧನ್ಯವಾದಗಳನ್ನು ಸಮರ್ಪಿಸಿದರು. ಸಂಘದ ನಿಕಟಪೂರ್ವ ಅಧ್ಯಕ್ಷ ರಾಮದಾಸ್ ಪಾವಂಜೆ ಕಾರ್ಯಕ್ರಮ ನಿರೂಪಿಸಿದರು.



ಬ್ಯಾಂಕ್ ಸೇವೆಯ ನಿವೃತ್ತಿಯ ಹಾದಿಯಲ್ಲಿ...







ಬಂಟ್ವಾಳ ತಾಲೂಕು ಸರಪಾಡಿ ಗ್ರಾಮದ ನೇತ್ರಾವತಿ ನದಿಯ ದಡದ ಒಂದು ಬಡ ಕುಟುಂಬದ ಪದ್ಮಾವತಿಯವರು ಮತ್ತು ಕೃಷ್ಣಪ್ಪ ಹಾಗೂ ಬಾಬು ಪೂಜಾರಿ ದಂಪತಿಯ ಪುತ್ರನಾಗಿ 1966ನೇ ಇಸವಿಯಲ್ಲಿ ಪ್ರಥಮ ಕಂಡೆ. ಹುಟ್ಟೂರಿನ ಸರಪಾಡಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೂರನೇ ತರಗತಿ ಕಲಿತು, ಮುಂದಿನ ಭವಿಷ್ಯದ ಹುಡುಕಾಟದಲ್ಲಿ 07 ಏಪ್ರಿಲ್ 1976ರಲ್ಲಿ ಮನೆಯವರಿಗೆ ಗೊತ್ತಿಲ್ಲದೆ ಹುಟ್ಟೂರಿಗೆ ಬೆನ್ನು ಹಾಕಿ ಲಕ್ಷ್ಮೀನೆಲೆಯಾದ ಮಾಯಾನಗರಿ ಮುಂಬಯಿಗೆ ಪ್ರವೇಶ ಮಾಡಿ ಕರ್ಮಭೂಮಿಯನ್ನಾಗಿ ಆರಿಸಿಕೊಂಡೆ. ಮಹಾನಗರದ ಕೋಟೆ ಪ್ರದೇಶದ ಲಕ್ಷ್ಮೀ ವಿಲಾಸ ಹೋಟೆಲ್‌ನಲ್ಲಿ ಎರಡು ವರ್ಷ ಸೇವೆಗೈದು, ನಂತರ ಶಿರಾ ಬಜಾರ್‌ನಲ್ಲಿ ಆನಂದ ಭವನ, ತಾರ್ದೇವ್‌ನಲ್ಲಿ ಒಂದು ಮಾಹಾ, ಕಾಲಬಾದೇವಿಯ ಶ್ರೀ ಮೋಹನ್ ಲಂಚ್ ಹೋಮ್ ಹೀಗೆ 7 ತಿಂಗಳ 9 ಹೋಟೆಲ್‌ನ ಬಾಗಿಲು ತಟ್ಟಿದರೂ ಕಾಲಿಗೆ ಚಪ್ಪಲಿ ಇಲ್ಲ, ಉಡಲಿಕ್ಕೆ ಸರಿಯಾದ ಬಟ್ಟೆ ಇಲ್ಲದೆ ಪರದಾಡುವ ಪರಿಸ್ಥಿತಿ. ಈ ಹೋಟೆಲ್ ಉದ್ಯೋಗದಲ್ಲಿ ಬೇಸತ್ತು, ತಾರ್ದೇವ್‌ನಲ್ಲಿ ಹಿರಿಯರಾದ ವೆಂಕಟ ಮೇಸ್ತ್ರಿಯವರ ಜೊತೆ 1978ರ ತನಕ ಮರದ ಕೆಲಸ (ಕಾರ್ಪೆಂಟರ್) ಕಲಿತೆ. 1978ರಲ್ಲಿ ಶಾಲೆಯಲ್ಲಿ ಕಲಿತ ಎಲ್ಲಾ ಅಕ್ಷರಗಳನ್ನು ಮರೆತ ನಾನು, ಪುನಃ ವಿದ್ಯಾಭ್ಯಾಸವನ್ನು ಮುಂದುವರಿಸುವ ಇಚ್ಛೆ ಪೂರ್ಣಗೊಳಿಸಲು ಬಯಸಿದಾಗ ಸರಪಾಡಿಯ ಹುಡುಗ 'ವಲೇರಿಯನ್' ಎಂಬವನ ಸಂಪರ್ಕ ಆಗುತ್ತದೆ. ವರ್ಲಿ ನಾಕಾದಲ್ಲಿ ಬಂಟರ ಸಂಘ ಸಂಚಾಲಿತ ಶ್ರೀ ನಿತ್ಯಾನಂದ ರಾತ್ರಿ ಶಾಲೆಯಲ್ಲಿ 3ನೇ ತರಗತಿ ಪ್ರವೇಶ ದೊರಕಿಸಿಕೊಟ್ಟರು. ಅಲ್ಲಿ ಹತ್ತನೇ ತರಗತಿಯ ತನಕ ಕಲಿತು 1983ರಲ್ಲಿ ಹೋಟೆಲ್ ನೌಕರಿ ತೊರೆದಾಗ ಒಂದು ಜಾಹೀರಾತು ಸಂಸ್ಥೆಯ ಮೂಲಕ ಪಾಂಡುರಂಗ ಶೆಟ್ಟಿಯವರ ಪರಿಚಯ ಆಗುತ್ತದೆ. ಅವರ ಎಂ. ಪಿ. ಪಬ್ಲಿಕೇಶನ್‌ನಲ್ಲಿ ಕೆಲಸ ಮಾಡಿ ಮುಂದಿನ ವಿದ್ಯಾಭ್ಯಾಸ ಮಾಡುತ್ತಾ, ಕೆಲವು ಸಮಯ ಕಳೆದ ಮೇಲೆ ಪ್ರಸಿದ್ಧ ಆಸ್ಪತ್ರೆ ನಾನಾವತಿ ಗ್ರೂಪ್ ಆಫ್ ಕಂಪನಿಯಲ್ಲಿ ಆರ್ಕಿಟೆಕ್ ವಿಭಾಗದಲ್ಲಿ ರೂ. 400 ಸಂಬಳಕ್ಕೆ ಗುಮಾಸ್ತ ಹುದ್ದೆಗೆ ಸೇರಿದೆ.


ಬಾಂದ್ರಾದಲ್ಲಿ ಮೂರು ವರ್ಷ ಇಂಟೀರಿಯರ್ ಡಿಸೈನಿಂಗ್(ಆಂತರಿಕ ವಿನ್ಯಾಸ)ನಲ್ಲಿ ಡಿಪ್ಲೋಮಾ ಮಾಡಿ, ಬಾಂದ್ರಾದ ರಹೇಜಾ ಕಾಲೇಜ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ, ಮುಂದೆ ಕೊಹಿನೂರ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ 2 ವರ್ಷ ಎಲೆಕ್ಟ್ರಿಕಲ್ ಮತ್ತು ವಯರಿಂಗ್‌ನ ಡಿಪ್ಲೋಮಾ ಮಾಡಿ ನಂತರ ಅದೇ ಕಾಲೇಜ್‌ನಲ್ಲಿ ಒಂದು ವರ್ಷದ ಪ್ಲಮ್ಮಿಂಗ್ ಡಿಪ್ಲೋಮಾ ಮಾಡಿ, ನಾನಾವತಿ ಗ್ರೂಪ್ ಆಫ್ ಕಂಪನಿಯಲ್ಲಿ ಗುಮಾಸ್ತ ಹುದ್ದೆಯಿಂದ ಪ್ರಮೋಷನ್ ಸಿಕ್ಕಿ 1991ರ ತನಕ ಉದ್ಯೋಗ ಮಾಡಿದ್ದೆ. 03 ಜುಲೈ 1988ರಂದು ಕುದ್ರೋಳಿಯ ನಿವಾಸಿ ಪುಷ್ಪಾ ಸುವರ್ಣ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಪದಗ್ರಹಣ ಮಾಡಿದಾಗ ಡೊಂಬಿವಲಿ ನಿವಾಸಿಯಾಗಿದ್ದೆ.

ಬಿಲ್ಲವರ ಎಸೋಸಿಯೇಶನ್ ಮುಂಬಯಿಯ ಡೊಂಬಿವಲಿ ಸ್ಥಳೀಯ ಕಚೇರಿಯ ಸಂಘದ ಸ್ಥಾಪನೆಯ ಸಂದರ್ಭದಲ್ಲಿ ಸಮಾಜ ಬಾಂಧವರಿಗೆ ನನ್ನ ಕೈಲಾದ ಸೇವೆ ಸಲ್ಲಿಸಿದ ಹೆಗ್ಗಳಿಕೆ ನನಗಿದೆ. ಅಲ್ಲದೆ 1978ರಂದು ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಸ್ಥಾಪಿಸುವ ಪ್ರಾರಂಭದ ದಿನಗಳಲ್ಲಿ ಹಲವಾರು ಹಿರಿಯರು ಬ್ಯಾಂಕ್ ಮಾಡುವ ಕಾರ್ಯದಲ್ಲಿ ತೊಡಗಿದ್ದರು. ಆ ಸಮಯದಲ್ಲಿ ನಾನು 15 ವರ್ಷ ಪ್ರಾಯದ ಬಾಲಕ. ನಾನು ಬ್ಯಾಂಕ್‌ಗೆ ಸದಸ್ಯತನ ಮಾಡುವ ಕಾರ್ಯದಲ್ಲಿ ಅವರೊಂದಿಗೆ ದುಡಿದು ಸಹಕಾರ ನೀಡಿದ ಹೆಮ್ಮೆ ನನಗಿದೆ.

ಮುಂಬಯಿ ಉಪನಗರದ ಗೋರೆಗಾಂವ್ ಕರ್ನಾಟಕ ಸಂಘದ ಬೆಳ್ಳಿಹಬ್ಬದ ಸಂದರ್ಭದಲ್ಲಿ 1923-1984ರಲ್ಲಿ ಗೋರೆಗಾಂವ್ ಪೂರ್ವದಲ್ಲಿ ಕನ್ನಡ ಮಾಧ್ಯಮದಲ್ಲಿ ಪಾಸಾಗದವರಿಗೆ ಒಂದು ಕೋಚಿಂಗ್ ಕ್ಲಾಸೆಸ್ ಇತ್ತು. ಹತ್ತಿರದಲ್ಲೇ 'ವೀರ ಕೇಸರಿ ಕಲಾ ವೃಂದ' ಎಂಬ ಒಂದು ನಾಟಕ ಸಂಸ್ಥೆಯೂ ಇತ್ತು. ಜಯಪ್ರಕಾಶ್ ಹೋಟೆಲ್‌ನಲ್ಲಿ ದುಡಿಯುತ್ತಿದ್ದ ಹಿರಿಯ ಕಲಾವಿದ ಅಶೋಕ್ ಕಾರ್ನಾಡ್‌ರವರ ಪರಿಚಯ ಈ ಸಂಸ್ಥೆಯಿಂದಲೇ ಆಗುತ್ತದೆ. ಆವಾಗ ಜಯ ಸಿ. ಸುವರ್ಣರವರ ಪರಿಚಯ ಆಗುತ್ತದೆ. ಅದೇ ಸಂದರ್ಭದಲ್ಲಿ ಗೋರೆಗಾಂವ್ ಕರ್ನಾಟಕ ಸಂಘದ ಬೆಳ್ಳಿಹಬ್ಬದ ಕಾರ್ಯಕ್ರಮಕ್ಕೆ ನಾನೇ ನಾಟಕ ಬರೆದು, ನಿರ್ದೇಶನ ಮಾಡಿ ಕೆಲವು ಮಿತ್ರರಾದ ಭಾರತ್ ಬ್ಯಾಂಕ್‌ನ ಹಿರಿಯ ಪ್ರಬಂಧಕ ದಯಾನಂದ ಪೂಜಾರಿ, ಪುರೋಹಿತ ವಿಶ್ವನಾಥ್ ಭಟ್ ಕೈರಬೆಟ್ಟು, ಕನ್ನಡ ಶಿಕ್ಷಕ ಸುಧಾಕರ್ ಶೆಟ್ಟಿ ಅವರೊಂದಿಗೆ 'ಬೇಡರ ಕಣ್ಣಪ್ಪ' ಎಂಬ ಏಕಾಂಕ ನಾಟಕದಲ್ಲಿ ನಾನು ಸ್ವತಃ 'ಬೇಡನ' ಪಾತ್ರ ಮಾಡಿ ಮುಂಬಯಿ ರಂಗಭೂಮಿಗೆ ಪ್ರವೇಶ ಮಾಡಿದ್ದೆ.















ಮುಂಬಯಿಯ ಫೋರ್ಟ್ ಪರಿಸರದಲ್ಲಿ ನನ್ನ ಒಡನಾಟ ಹೆಚ್ಚು ಇತ್ತು. ಈ ಸಂದರ್ಭದಲ್ಲಿ ಅಲ್ಲಿ ನನ್ನ 'ಬೇಡರ ಕಣ್ಣಪ್ಪ' ನಾಟಕ ವೀಕ್ಷಿಸಿದ ಹಿರಿಯ ರಂಗ ನಿರ್ದೇಶಕ ಜಯರಾಜ್ ಸುವರ್ಣ ಪಡುಬಿದ್ರಿ ಹಾಗೂ ಕರುಣಾಕರ ಕೆ. ಕೋಟ್ಯಾನ್ ನನ್ನನ್ನು ಸಂಪರ್ಕ ಮಾಡುತ್ತಾರೆ. ಊರಿನ ಹಲವಾರು ಜನರು ಫೋರ್ಟ್ ಪಿ. ಎಂ. ರಸ್ತೆಯ ಒಂದು ಬ್ರಿಸ್ಟಲ್ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅದರಲ್ಲಿಯ ಪ್ರಮುಖರು ಬಾಲಕೃಷ್ಣ ಡಿ. ಶೆಟ್ಟಿ, ಕರುಣಾಕರ ಕಾಪು, ಮುರಳೀಧರ ಶೆಟ್ಟಿ, ಭಾಸ್ಕರ್ ಎಂ. ಶೆಟ್ಟಿ, ಚಂದ್ರಶೇಖರ ಕೋಟ್ಯಾನ್, ಯತೀಶ್ ಕೋಟ್ಯಾನ್, ವಿಶ್ವನಾಥ್ ಭಟ್ ಕೈರಬೆಟ್ಟು, ಅಶೋಕ್ ಕುಮಾರ್ ಕಾರ್ನಾಡ್ ಹಾಗೂ ಸಾಯಿ ಕ್ಯಾರ್‌ನ ಸುರೇಂದ್ರ ಪೂಜಾರಿ, ಸಾ.ದಯ ಹೀಗೆ ಇನ್ನು ಕೆಲವು ರಂಗ ಪ್ರೇಮಿಗಳು, ನಿರ್ದೇಶಕರು, ಕಲಾವಿದರು ಕೂಡಿ ನಮ್ಮದೇ ಆದ ಒಂದು ತಂಡ ನಿರ್ಮಾಣ ಮಾಡಿ 'ಅಭಿನಯ ಮಂಟಪ ಮುಂಬಯಿ' ಎಂಬ ಒಂದು ನಾಟಕ ಸಂಸ್ಥೆಯನ್ನು ಹುಟ್ಟು ಹಾಕಿ, ಈಗ ಅದೇ ಸಂಸ್ಥೆ ಮುಂಬಯಿ ನಗರದಲ್ಲಿ ಖ್ಯಾತಿ ಪಡೆದಿದೆ ಎಂದು ಹೇಳಲು ಹೆಮ್ಮೆ ಅನಿಸುತ್ತದೆ.

1988ರಲ್ಲಿ ಜಯ ಸಿ. ಸುವರ್ಣರವರ ಜೊತೆ ಒಡನಾಟ ಪ್ರಾರಂಭವಾಯಿತು. ನನ್ನ ಮದುವೆಯ ಸಂದರ್ಭದಲ್ಲಿ ಭಾರತ್ ಬ್ಯಾಂಕ್ ಗೋರೆಗಾಂವ್ ಬ್ರಾಂಚ್‌ನಿಂದ ಮದುವೆಗಾಗಿ ಹತ್ತು ಸಾವಿರ ರೂಪಾಯಿಯ ಲೋನ್ ಮಾಡಿ ಕೊಡುತ್ತಾರೆ. 1996 ಏಪ್ರಿಲ್ ತಿಂಗಳಲ್ಲಿ ನನಗೆ ಉದ್ಯೋಗಕ್ಕಾಗಿ ಕರೆ ಬರುತ್ತದೆ. ಆವಾಗ ನನಗೆ 30 ವರ್ಷ. ಈ ಪ್ರಾಯದಲ್ಲಿ ಕೆಲಸ ಸಿಗುವುದು ಅಷ್ಟೇನೂ ಸುಲಭದ ಮಾತಲ್ಲ. ಆದರೆ ನನ್ನ ಸಾಮಾಜಿಕ ಕ್ಷೇತ್ರದಲ್ಲಿಯ ಚಟುವಟಿಕೆಗಳನ್ನು ಗಮನಿಸಿದ ಈಶ್ವರ್ ಹೆಜಮಾಡಿ ಹಾಗೂ ಜಯ ಸಿ. ಸುವರ್ಣರವರ ಪ್ರೋತ್ಸಾಹದಿಂದ ನಾನು ಭಾರತ್ ಬ್ಯಾಂಕ್ ಶಿವಗಿರಿಯ, ಸೆಂಟ್ರಲ್ ಆಫೀಸ್‌ನಲ್ಲಿ ಅಟೆಂಡೆರ್ ಆಗಿ 31.05.1996ರಲ್ಲಿ ಕೆಲಸಕ್ಕೆ ಸೇರಿಕೊಂಡೆ. ಜಯ ಸಿ. ಸುವರ್ಣರವರು ನನಗೆ ಮಾಡಿದ ಈ ಉಪಕಾರವನ್ನು ಜನ್ಮದಲ್ಲಿ ನಾನು ಮರೆಯಲಸಾಧ್ಯ. ನನ್ನ ಕಷ್ಟದ ದಿನಗಳಲ್ಲಿ, ಪ್ರತಿ ಒಂದು ಕೆಲಸದಲ್ಲಿಯೂ ಪ್ರೋತ್ಸಾಹಿಸಿದ್ದಾರೆ. ಬ್ಯಾಂಕ್‌ನಲ್ಲಿ ಕೆಲಸಕ್ಕೆ ಸೇರಿದ ನಂತರ ನಿರಂತರ ಬಿಲ್ಲವರ ಎಸೋಸಿಯೇಶನ್ ಮುಂಬಯಿಯಲ್ಲಿ ಜಯ ಸಿ. ಸುವರ್ಣ ಅಧ್ಯಕ್ಷತೆಯಲ್ಲಿ ಶಂಕರ್ ಡಿ. ಪೂಜಾರಿ ಹಾಗೂ ಮೋಹನ್ ಜಿ. ಪೂಜಾರಿಯವರ ಜೊತೆ ಕೂಡಿಕೊಂಡು 18 ಸ್ಥಳೀಯ ಕಚೇರಿ ಸ್ಥಾಪಿಸುವಲ್ಲಿ, ಬಿಲ್ಲವರ ಜನಗಣತಿ, ಸೇವಾ ದಳದ ಸಂಯೋಜನೆ ನಂತರ 1997ರಲ್ಲಿ 'ಕೋಟಿ-ಚೆನ್ನಯ' ಕ್ರೀಡೆ, 'ಕಾಂತಾಬಾರೆ - ಬೂದಬಾರೆ' ಒಳಾಂಗಣ ಕ್ರೀಡೆಯ ಪ್ರಯುಕ್ತ 12 ವರ್ಷ ಯುವ ವಿಭಾಗದಲ್ಲಿ ಸೇವೆ ಮಾಡುವ ಅವಕಾಶಗಳು ನನ್ನ ಪಾಲಿಗೆ ದೊರಕಿತ್ತು. ಬಿಲ್ಲವ ಸಮಾಜದ (ಒಬಿಸಿ) ನೋಂದಾವಣೆ ವಿಭಾಗದಲ್ಲಿ, 2,500ಕ್ಕೂ ಮಿಕ್ಕಿ ವಿದ್ಯಾರ್ಥಿಗಳಿಗೆ ಒಬಿಸಿ ಸವಲತ್ತು ದೊರಕುವ ಮಹತ್ವದ ಕೆಲಸವನ್ನು ನಿರಂತರ ಮಾಡಿದ್ದೇನೆ.

2006ರಂದು ಬಿಲ್ಲವರ ಎಸೋಸಿಯೇಶನ್ ಸಂಚಾಲಕತ್ವದ ಶ್ರೀ ನಾರಾಯಣ ಗುರು ರಾತ್ರಿ ಶಾಲೆಯಲ್ಲಿ ಬನ್ನಂಜೆ ರವೀಂದ್ರ ಅಮೀನ್ ಕಾರ್ಯಾಧ್ಯಕ್ಷತೆಯಲ್ಲಿ ಒಂದು ಹೊಸ ರೂಪು-ರೇಖೆ ಮಾಡಿ ಮಕ್ಕಳು ಶೇ. 100 ಪಾಸ್ ಆಗಬೇಕು ಎಂಬ ದೃಢ ನಿರ್ಧಾರಕ್ಕೆ ಅಮೀನ್ ಬಂದಾಗ, ಮುಂಬಯಿಯ ಮಹೇಶ್ ಕೋಚಿಂಗ್ ಕ್ಲಾಸ್ ಸಂಪರ್ಕ ಮಾಡಿ, ಅಲ್ಲಿನ ಪ್ರಸಿದ್ಧ ಶಿಕ್ಷಕರ ಮಾರ್ಗದರ್ಶನದಲ್ಲಿ ನಿರಂತರವಾಗಿ ಶಾಲೆ ಶೇ. 100 ಫಲಿತಾಂಶ ಬರುವ ಹಾಗೆ ನಿರಂತರ ಶಾಲಾ ಅಭಿವೃದ್ಧಿಯ ಹಿಂದೆ, ರವೀಂದ್ರ ಅಮೀನ್ ಬನ್ನಂಜೆ ಜೊತೆ ಹಾಗೂ ಜಯ ಸಿ. ಸುವರ್ಣರವರ ಜೊತೆ ಕಾರ್ಯ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಪಾಲಿನ ಭಾಗ್ಯ.

1995ರಲ್ಲಿ ಬೊರಿವಲಿಯ ಗೊರ್ಾಯಿ ಪರಿಸರದಲ್ಲಿ ವಾಸ ಮಾಡಲು ಬಂದಾಗ ಅಲ್ಲಿ ಗೋಪಾಲ ಶೆಟ್ಟಿ ನಗರಸೇವಕರಾಗಿ ಸಮಾಜ ಸೇವೆ ಮಾಡುತ್ತಿದ್ದರು. ಅವರೊಂದಿಗೆ ನನ್ನ ಹತ್ತಿರದ ಒಡನಾಟ ಆಗುತ್ತದೆ. ಗೋಪಾಲ್ ಶೆಟ್ಟಿ ಬೊರಿವಲಿಯ ಚಿಕ್ಕುವಾಡಿ ಎಂಬಲ್ಲಿ ಒಂದು ಯುವಕ ಮಂಡಲ ಪ್ರಾರಂಭಿಸುತ್ತಾರೆ. ಆಗ ನಾನು ಬೊರಿವಲಿಯ ಮನೆ ಬಿಟ್ಟು, ಕಾಂದಿವಲಿಯ ಚಾರ್ಕೋಪ್ ಪರಿಸರಕ್ಕೆ ವಾಸಿಸಲು ಬಂದಿದ್ದೆ. ಅಲ್ಲಿ ನನಗೆ ನಮ್ಮವರ ಭೇಟಿ ಆಗಿ, ಅವರೊಂದಿಗೆ ನನ್ನ ಸಂಪರ್ಕ ಬೆಳೆಯುತ್ತದೆ. ಚಾರ್ಕೋಪ್‌ನಲ್ಲಿ ಇಂಡಿಯನ್ ಎಜುಕೇಶನ್ ಸೊಸ್ಶೆಟಿ ಸ್ಕೂಲ್ ಎಂಬ ಶಾಲೆಯಲ್ಲಿ ಜಯ ಸಿ. ಶೆಟ್ಟಿ, ದಾಸು ಕೆ. ಸುವರ್ಣ, ಕೃಷ್ಣ ಟಿ. ಅಮೀನ್, ಸದಾಶಿವ ಶೆಟ್ಟಿ, ನವೀನ್ ಸುವರ್ಣ ಇವರೆಲ್ಲರ ಮಕ್ಕಳು ಮತ್ತು ನನ್ನ ಮೂರು ಮಕ್ಕಳು ಕಲಿಯುತ್ತಿದ್ದರು. ಆದ್ದರಿಂದ ಅವರೆಲ್ಲಾ ನನ್ನ ಸ್ನೇಹಿತರಾದರು.

ಹುಟ್ಟೂರಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಕ್ರಿಯ ಕಾರ್ಯಕರ್ತ ಹಾಗೂ ಪ್ರಚಾರಕನಾಗಿ ಸೇವೆ ಸಲ್ಲಿಸಿದ ಕಾರಣ, ಚಾರ್ಕೋಪ್ ಮನೆಯ ಮುಂದೆ ಓರ್ವ ಹಿರಿಯ ಕಾರ್ಯಕರ್ತ ಪ್ರತಿದಿನ ಒಬ್ಬರೇ ಪ್ರಾರ್ಥನೆ ಮಾಡುತ್ತಾ ಬರುವುದನ್ನು ನೋಡಿ, ಅವರ ಪರಿಚಯ ಮಾಡಿಕೊಂಡು 1999ರಲ್ಲಿ ಮನೆಯ ಪಕ್ಕದ ಒಂದು ಮೈದಾನದಲ್ಲಿ ಪ್ರತಿದಿನ ಬೆಳಿಗ್ಗೆ ಸಂಘದ ಚಟುವಟಿಕೆ ಪ್ರಾರಂಭ ಆಗುವಂತೆ ಗಣಶಾಮ್ ಶ್ರೀವತ್ಸರವರೊಂದಿಗೆ ಕೂಡಿ ಚಾರ್ಕೋಪ್ ರಾಷ್ಟ್ರೀಯ ಸೇವಾ ಸಂಘ ಸ್ಥಾಪನೆ ಮಾಡಿದೆವು. ಅದರಲ್ಲಿ ತುಂಬಾ ಮಂದಿ ಊರಿನವರು ಸೇರ್ಪಡೆಗೊಂಡರು.

1996ರಲ್ಲಿ ನಮ್ಮ ಭಾರತ್ ಬ್ಯಾಂಕ್ ಕಾಂದಿವಲಿ ಶಾಖೆಯ ಉದ್ಘಾಟನೆ ಆಗುತ್ತದೆ. ಅದೇ ಸಮಯದಲ್ಲಿ ನನಗೆ ವಿಲೇಪಾರ್ಲೆ ಶಾಖೆಯಿಂದ ಕಾಂದಿವಲಿ ಶಾಖೆಗೆ ವರ್ಗಾವಣೆ ಆಗುತ್ತದೆ. ಅಲ್ಲಿ ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ತುಳು-ಕನ್ನಡಿಗರ ಪರಿಚಯ ಆಗುತ್ತದೆ. ಆ ಸಮಯದಲ್ಲಿ ತತ್‌ಕ್ಷಣಕ್ಕೆ ಬಂದ ಆಲೋಚನೆಯಂತೆ ಪರಿಸರದ ತುಳು-ಕನ್ನಡಿಗರಿಗಾಗಿ ಒಂದು ಸ್ನೇಹ-ಸಮ್ಮೇಳನವನ್ನು ಆಯೋಜಿಸಲು ಆಲೋಚಿಸಿದೆ. ಆವಾಗ ನನ್ನ ಕೈಗೆ ಸಿಗುವ ಸಂಬಳ ಬರೇ ರೂ. 950/-ಮಾತ್ರ. ಚಾರ್ಕೋಪ್‌ನಲ್ಲಿ ಸಿಐಡಿ ಖ್ಯಾತಿಯ ದಯಾ ಚಂದ್ರಶೇಖರ್ ಶೆಟ್ಟಿಯವರ 'ಸಂಧ್ಯಾ' ಹೋಟೆಲ್ ತುಂಬಾ ಹೆಸರು ಗಳಿಸಿತ್ತು. ಅಲ್ಲಿ ನಮ್ಮ ಊರಿನ ಜಯರಾಮ್ ಶೆಟ್ಟಿ ಸಂಚಾಲಕರಾಗಿದ್ದರು. ಮುಂಚೆ ನಾನು ಆ ಹೋಟೆಲ್‌ನಲ್ಲಿ ನೌಕರಿ ಮಾಡುವಾಗ ಆತ್ಮೀಯ ಮಿತ್ರ ದಿವಾಕರ್ ಶೆಟ್ಟಿ ಅಡ್ಯಾರು ನಡಿಗುತ್ತು ಅಲ್ಲಿ ಮ್ಯಾನೇಜರ್ ಆಗಿದ್ದರು. ಅವರು ಕವಿ, ಬರಹಗಾರರಾಗಿದ್ದು, ಬೊರಿವಲಿಯ 'ಸಾಯಿ ಸಂಧ್ಯಾ ಆರ್ಟ್ಸ್'ನ ಅಧ್ಯಕ್ಷರೂ ಆಗಿದ್ದರು. ಅವರ ಸಂಪೂರ್ಣ ಸಹಕಾರದಿಂದ 22 ಸೆಪ್ಟೆಂಬರ್ 1999ರಂದು ಒಂದು ತುಳು-ಕನ್ನಡಿಗರ ಸ್ನೇಹ ಸಮ್ಮೇಳನ ನಡೆಯುತ್ತದೆ.

ಈ ಸ್ನೇಹ ಸಮ್ಮೇಳನದಲ್ಲಿ ಭಾಗಿಯಾದ ಪರಿಸರದ ತುಳು-ಕನ್ನಡ ಬಾಂಧವರು, ಕೌಶಲ್ಯತೆ, ಚತುರತೆಯನ್ನು ಗಮನಿಸಿ, ನಮ್ಮ ಪರಿಸರದಲ್ಲೂ ನಮ್ಮದೇ ಆದ ಸ್ವಂತ ಒಂದು ಸಂಸ್ಥೆ ಆಗಬೇಕು ಎಂಬ ಅಭಿಪ್ರಾಯ ತಿಳಿಸಿ ನನ್ನ ಬೆನ್ನು ತಟ್ಟಿದವರು ಹಲವು ಮಂದಿ. ಮಾಜಿ ಸಂಸದ ಗೋಪಾಲ ಸಿ. ಶೆಟ್ಟಿಯವರೊಂದಿಗೆ ಹಲವಾರು ಜನ ಭಾಷಾ ಪ್ರೇಮಿಗಳ ಜೊತೆ ಕೂಡಿಕೊಂಡು 'ಚಾರ್ಕೋಪ್ ಕನ್ನಡಿಗರ ಬಳಗ'ದ ಸ್ಥಾಪಕ ಅಧ್ಯಕ್ಷನಾಗಿ, 14 ವರ್ಷ ಒಂದು ಆದರ್ಶ ಸಂಸ್ಥೆ ಕಟ್ಟಿದ್ದೇನೆ ಎಂದು ಹೇಳಲು ಇಷ್ಟ ಪಡುತ್ತೇನೆ.

ಇದರ ಉದ್ಘಾಟನೆಯ ಕಾರ್ಯಕ್ರಮ ನನ್ನ ಬಾಡಿಗೆ ಮನೆಯಲ್ಲಿ ಹಿರಿಯ ರಂಗಕರ್ಮಿ ದಿ. ಸದಾನಂದ ಸುವರ್ಣ ಮಾಡಿರುತ್ತಾರೆ. ಆ ವೇಳೆಯಲ್ಲಿ ಮಲಾಡ್ ಕನ್ನಡ ಸಂಘದ ಅಧ್ಯಕ್ಷ ಹರೀಶ್ ಎನ್. ಶೆಟ್ಟಿ, ಶಂಕರ್ ಡಿ. ಪೂಜಾರಿ ಹೀಗೆ ಹಲವಾರು ಗಣ್ಯರು ಉಪಸ್ಥಿತರಿದ್ದರು. ಪ್ರಥಮ ಕಾರ್ಯಕ್ರಮವೇ ಕನ್ನಡ ಮಾಧ್ಯಮದ ಮಕ್ಕಳಿಗೆ ಪುಸ್ತಕ ವಿತರಣೆ. ದಿ. ಜಯ ಸಿ. ಸುವರ್ಣ ಅಧ್ಯಕ್ಷತೆ ಹಾಗೂ ಸಿಐಡಿ ಖ್ಯಾತಿಯ ದಯಾ ಶೆಟ್ಟಿಯವರ ಆತಿಥ್ಯದಲ್ಲಿ ಆಗಿರುತ್ತದೆ.

ನಂತರ 2005ರಲ್ಲಿ ನನ್ನದೇ ಆದ ಒಂದು ಸ್ವಂತ ವಸತಿ ಆಯಿತು. ನಂತರ ಕ್ರಮೇಣವಾಗಿ 2010ರಲ್ಲಿ ನಮ್ಮದೇ ಆದ ಚಾರ್ಕೋಪ್ ಕನ್ನಡಿಗರ ಬಳಗದ ಒಂದು ಸ್ವಂತ ಭವನವನ್ನು ನಿರ್ಮಿಸಿ ಸಮಾಜಕ್ಕಾಗಿ ಲೋಕಾರ್ಪಣೆಗೊಳಿಸಿದ ಸಂತೋಷ ಇದೆ. ವಿಜಯ ಕುಮಾರ್ ಶೆಟ್ಟಿ ನೇತೃತ್ವದಲ್ಲಿ ಸ್ಥಾಪಿಸಿದ ಕಲಾ ಜಗತ್ತಿನ ಕಾಂದಿವಲಿ ಚಾರ್ಕೋಪ್ ಪರಿಸರದ 45 ಮಕ್ಕಳು ಒಡಗೂಡಿದ 'ಚಿಣ್ಣರ ಬಿಂಬ' ಸಂಸ್ಥೆಯಲ್ಲಿಯೂ ನಿರಂತರವಾಗಿ 15 ವರ್ಷ ಕಾರ್ಯಕ್ರಮಗಳನ್ನು ಇಂದಿನ ತನಕ ನೆರವೇರಿಸುತ್ತಾ ಬಂದಿದ್ದೇನೆ. ಅಲ್ಲದೆ ಈ ಸಂಸ್ಥೆಯ ಸಹಕಾರದಿಂದ ಕಾಂದಿವಲಿ ಬಿಲ್ಲವರ ಎಸೋಸಿಯೇಶನ್ ಸ್ಥಳೀಯ ಕಚೇರಿ ನಿರ್ಮಾಣ ಮಾಡಿದೆವು.

1999ರಲ್ಲಿ ನಮ್ಮ ಗ್ರಾಮ ದೇವರಾದ ಶ್ರೀ ಸರಬೇಶ್ವರ ದೇವಸ್ಥಾನಕ್ಕೆ ಸಹಕಾರ ಮಾಡುವ ಹಾಗೂ ನನ್ನ ಊರಿನ ಸದಸ್ಯರುಗಳನ್ನು ಒಟ್ಟುಗೂಡಿಸುವ ಉದ್ದೇಶದಿಂದ ಸರಪಾಡಿಯ ಮುಂಬಯಿ ಯುವ ವಿಭಾಗದ ಒಂದು ಸಂಸ್ಥೆಯನ್ನು ಬೊರಿವಲಿಯ ಗೊರ್ಾಯಲ್ಲಿ ಸ್ಥಾಪಿಸಿ ಊರಿನ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ್ದೇನೆ. ನಾನು ಈ ಸಂಸ್ಥೆಯ ಗೌರವ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಾ ಅವರನ್ನು ಇನ್ನೂ ಪ್ರೋತ್ಸಾಹಿಸುವ ಧೋರಣೆಯಿಂದ ಈ ಸಂಸ್ಥೆಯ ವತಿಯಿಂದ 25 ವರ್ಷದಿಂದ ಅರ್ಹತೆಗೆ ಅನುಗುಣವಾಗಿ ಅವರ ಮಹತ್ವಪೂರ್ಣ ಸಾಧನೆಗಾಗಿ ಮೂರು ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದ್ದೇನೆ.

ಭಾಸ್ಕರ್ ಬಾಬು ಬಂಗೇರ ಸರಪಾಡಿ

ನಟಿಸಿರುವ ನಾಟಕಗಳು : ಸ್ವಂತ ನಿರ್ದೇಶನದಲ್ಲಿ 'ದೊಂಬರಾಟ', 'ಬೇಡರ ಕಣ್ಣಪ್ಪ', 'ನಿಶ್ಚಯ ಆತಿಜಿ'. ಅಭಿನಯ ಮಂಟಪದ ಪ್ರಥಮ ನಾಟಕ 'ಬಸಂತಿ' 'ಬಂಗಾರದ ದೊಡ್ಡಿ', ಸತ್ಯ ಒರಿಪಾಲೆ' 'ಕಾರಣಿಕದ ಶನೀಶ್ವರ', 'ಕೋಟಿ-ಚೆನ್ನಯ', 'ಕೋರ್ದಬ್ಬು ತನ್ನಿಮಾನಿಗ', 'ಕಣ್ಣು ಬುಲಾನಗ ಕತ್ತಲೆ', 'ಈ ನಲ್ಕೆ ದಾಯೆ?', 'ಗಿಡಪುನಕುಲು ಬಲಿಪುನಕುಲು', 'ತೂ-ತುಡರ್', 'ಈ ಬಾಲೆ ನಮ್ಮವು', 'ಬೂತೋದ ಇಲ್', 'ಬರ್ಸ', 'ಪೊಣ್ಣು ಸಮಾಜದ ಕಣ್ಣ್', 'ಇದು ಯೂನಿವರ್ಸಿಟಿ'. 'ಹಗ್ಗದ ಕೊನೆ', 'ನಾಟಕದ ಉಲಾಯ್ ನಾಟಕ', 'ಪೆರೆಡೆದ ಪಿರವು', 'ಭೈರನ ಬದುಕು', 'ಇಂದಿರನ ಆಸ್ತಿ', 'ಅಭ' ಮತ್ತು ಹಲವು ರಂಗ ತರಬೇತಿ ಶಿಬಿರಗಳು.

ಸಿಕ್ಕ ಪ್ರಶಸ್ತಿಗಳು : ದಿ. ಹಿರಿಯ ಶಿಕ್ಷಕಿ ರಂಗಕರ್ಮಿ ಭಾರತಿ ಕೊಡ್ಲೇಕರ್ ಪ್ರಶಸ್ತಿ, ದಿ. ಅಡ್ಯಾರು ನಡಿಗುತ್ತು ತಿಮಪ್ಪ ಶೆಟ್ಟಿ ಪ್ರಶಸ್ತಿ.

ಪ್ರತಿ ಮಂಗಳವಾರ ಭಜನೆ, ಪ್ರತಿಭಾ ಸ್ಪರ್ಧೆ, ಬಹುಭಾಷಾ ಕವಿಗೋಷ್ಠಿ, ಮಹಿಳಾ ಸಮಾವೇಶ, ಸದಾನಂದ ಸುವರ್ಣ ದತ್ತಿ ಉಪನ್ಯಾಸ, ಡಾ. ಶಿವರಾಮ ಕಾರಂತೋತ್ಸವ, ರಂಗ ತರಬೇತಿ, ಯಕ್ಷಗಾನ ತರಬೇತಿ, ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪ್ರೋತ್ಸಾಹ, ಸಮಾಜದಲ್ಲಿ ಒಳ್ಳೆಯ ಕಾರ್ಯ ಮಾಡುವವರಿಗೆ ಗೌರವ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಭಾಷೆ ಹಾಗೂ ಸಂಸ್ಕೃತಿಯ ಪ್ರಚಾರ ಹೀಗೆ ಹತ್ತು ಹಲವಾರು ಚಟುವಟಿಕೆಗಳನ್ನು 25 ವರ್ಷದ ಕಾಲಾವಧಿಯಲ್ಲಿ ಮಾಡುತ್ತಾ ಬಂದಿದ್ದೇನೆ.

ಓರ್ವ ಕಲಾವಿದನಾಗಿ ಗುರುತಿಸಿಕೊಂಡ ಜತೆಗೆ ಮೂರು ಮಕ್ಕಳಾದ ವೀಣಾ ದೀಪಕ್ ಸುವರ್ಣ, ನೇಹಾ ಬ್ರಿಜೇಶ್ ಪೂಜಾರಿ ಮತ್ತು ಕೌಶಿಕ್ ಬಂಗೇರ ಸರಪಾಡಿ ಅವರನ್ನು ಮುಂಬಯಿ ರಂಗಭೂಮಿಗೆ ಪರಿಚಯಿಸಿದ ಹೆಮ್ಮೆ ನನಗೆ ಇದೆ. ಅಲ್ಲದೆ, ನಾನು ಮಾಡುವ ಕೆಲಸದಲ್ಲಿ ಎಷ್ಟು ಕಷ್ಟಕರ ಸಂದರ್ಭಗಳನ್ನು ಎದುರಿಸಿದ್ದರೂ, ನನಗೆ ಪ್ರೋತ್ಸಾಹ, ಉತ್ತೇಜನ ನೀಡಿದವಳು ನನ್ನ ಪತ್ನಿ ಪುಷ್ಪ ಭಾಸ್ಕರ್ ಸರಪಾಡಿ. ಅವರ ಸಂಪೂರ್ಣ ಬೆಂಬಲದಿಂದ ಸಾಧನೆಯ ಸರದಾರನಾಗಿ ಹಾಗೂ ಒಬ್ಬ ಸಂಘಟಕನಾಗಿ ಇಂದು ಗುರುತಿಸಿಕೊಳ್ಳಲು ಸಾಧ್ಯವಾಯಿತು.

ಒಟ್ಟಿನಲ್ಲಿ 1996ರಿಂದ 30.06.2026 ಮೂರು ದಶಕಗಳ ಸುದೀರ್ಘ ಅವಧಿಯ ಬ್ಯಾಂಕ್ ಉದ್ಯೋಗಿಯಾಗಿ, 5 ಶಾಖೆಗಳಿಗೆ ವರ್ಗಾವಣೆ, 21 ಹಿರಿಯ ಶಾಖಾ ಪ್ರಬಂಧಕರುಗಳ ಜೊತೆಗೆ ಹಾಗು ಸುಮಾರು 280 ಸಹ ಉದ್ಯೋಗಿಗಳ ಜೊತೆಗೆ ಬೇರೆ ಬೇರೆ ಶಾಖೆಗಳಲ್ಲಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದೇನೆ. ಗ್ರಾಹಕರಿಗೆ ತಕ್ಕಂತೆ ಕರ್ತವ್ಯ ನಿರ್ವಹಿಸಿದ್ದರಿಂದ ಎಲ್ಲರ ಪ್ರೀತಿಗೆ ಪಾತ್ರನಾಗಿ, ಕೆಲವೊಂದು ವರ್ಗಾವಣೆಗಳು ನನ್ನ ಪಾಲಿಗೆ ಶಿಕ್ಷೆ ಆಗಿದ್ರೂ ಅದನ್ನು ಸವಾಲಿನಂತೆ ಸ್ವೀಕರಿಸಿ ಒಳ್ಳೆಯ ಅನುಭವದೊಟ್ಟಿಗೆ ಹೊಸ ಊರಿನ ಸಂಪರ್ಕ ಮತ್ತು ಅಲ್ಲಿಯ ಜನರೊಟ್ಟಿಗೆ ಸ್ನೇಹಿತನಂತೆ ವ್ಯವಹರಿಸಿದ್ದರಿಂದ ಸಾರ್ಥಕ್ಯ ಭಾವದಲ್ಲಿ ಬ್ಯಾಂಕ್‌ನ ಸೇವಾ ನಿವೃತ್ತಿಯ ಹಾದಿಯಲ್ಲಿ ಮುಂದಡಿ ಇರಿಸಿದ್ದೇನೆ.

ಜೂನ್ 28 ರಂದು ಬಂಟರ ಭವನ ಕುರ್ಲಾದಲ್ಲಿ ಕರ್ನಾಟಕ ಸಂಘ ಅಂಧೇರಿ ಹಾಗೂ ಜಾನಪದ ಸಂರಕ್ಷಣಾ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ - 2026 ಹಾಗೂ ದತ್ತಿನಿಧಿ, ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಅಂತಾರಾಷ್ಟ್ರೀಯ ಖ್ಯಾತ ಜನಪದ ಗಾಯಕ ಗೋನಾಸ್ವಾಮಿ ಹಾಗೂ ನಾಟ್ಯ ಸ್ವರಾಲಯ ಬೆಂಗಳೂರು ಕಲಾವಿದರಿಂದ ಸಂಗೀತ ಸಂಜೆ; ಮುಂಬಯಿ ತುಳು-ಕನ್ನಡ ಸಂಘ ಸಂಸ್ಥೆಯ ಕಲಾವಿದರಿಂದ ಸಮೂಹ ಗಾಯನ ಸ್ಪರ್ಧೆ



ಕೃಷ್ಣ ಬಿ. ಶೆಟ್ಟಿ, ಪಿ. ಧನಂಜಯ ಶೆಟ್ಟಿ, ಜಗಜೀವನ್ ಪೂಜಾರಿ, ಸುರೇಖಾ ಎಸ್. ಶೆಟ್ಟಿ, ಡಾ। ಸುರೇಶ್ ರಾವ್, ಸುರೇಶ್ ಕಾಂಚನ್, ಸುರೇಂದ್ರ ಕುಮಾರ್, ಟಿ. ಆರ್. ಮಧುಸೂಧನ್, ರವಿ ನಾಯ್ಕಪು
ದಿ. ಎಚ್.ಬಿ. ಎಲ್.ರಾವ್, ವಿಶ್ವನಾಥ್ ದೊಡ್ಮನೆ, ದಯಾನಂದ್ ಸಾಲ್ಯಾನ್, ಉಮೇಶ್ ಎನ್. ಶೆಟ್ಟಿ, ಡಾ. ಶಿವಾನಂದ, ಸಿ. ಎಂ. ಆರ್. ಶ್ರೀನಾಥ್, ಟಿ. ವಿ. ಬಾಬು, ಆಂಜನೇಯ ಈಡಿಗ, ಪ್ರಭಾ ಎನ್. ಸುವರ್ಣ

ಮನುಷ್ಯ ತನ್ನ ಜೀವ ಪ್ರೀತಿಗಾಗಿ ಅಥವಾ ಜೀವನೋಲ್ಲಾಸಕ್ಕಾಗಿ ಸಹಜವಾಗಿಯೇ ತುಡಿಯುತ್ತಾನೆ. ಹಾಗೆಯೇ ಅಸ್ಮಿತೆಗಾಗಿಯೂ ಕಾತರಿಸುತ್ತಾನೆ. ಬದುಕಿನ ವೈವಿಧ್ಯತೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಅವುಗಳೊಂದಿಗೆ ವಿಸ್ತೃತಗೊಳ್ಳುವ ತಹತಹಿಕೆಗೂ ಅವನು ತೆರೆದುಕೊಳ್ಳುವ ರೀತಿ ಅಗಾಧವೇ. ಈ ಅಗಾಧತೆಯೊಳಗೆ ಒಡಮೂಡುವ ನಾಡು-ನುಡಿಯ ಬಗೆಗಿನ ಒಲವು, ಅಭಿಮಾನಗಳು ಕೂಡಾ ಅನನ್ಯವೆನಿಸುತ್ತವೆ. ವೈಯಕ್ತಿಕ ಪ್ರತಿಭೆ ಮನುಷ್ಯನನ್ನು ಗಾಢಗೊಳಿಸುವ ಸರಿಮಿಗಿಲಾಗಿ ನಾಡು-ನುಡಿಗಳು ಅವನನ್ನು ಪ್ರಗಲ್ಭವಾಗಿ ಗುರುತಿಸಿಕೊಳ್ಳುವಂತೆ ಮಾಡುತ್ತವೆ. ಕುಟುಂಬ, ಕುಟುಂಬದ ಸದಸ್ಯರು, ಸಂಬಂಧಿಗಳು, ಸ್ನೇಹಿತರು, ನೆರೆಯವರು ಮನುಷ್ಯನ ಜೀವ ಪ್ರೀತಿಯನ್ನು ಉತ್ಕಟವಾಗಿಸುವಂತೆ ನಾಡು-ನುಡಿಗಳ ಸಂಬಂಧ ಅವನನ್ನು ಊರ್ಧ್ವಗೊಳಿಸಬಲ್ಲವು. ನಾನು ಕನ್ನಡಿಗ, ನಾನು ಭಾರತೀಯ ಅಂದುಕೊಳ್ಳುವಾಗಿನ ವ್ಯಾಪಕತೆ ಮನುಷ್ಯ ಬದುಕಿಗೆ ಹೊಸ ಆಯಾಮ ತಂದುಕೊಡವು.

ಕಳೆದೆರಡು ದಶಕಗಳಿಂದ ಅಂಧೇರಿ ಪರಿಸರದಲ್ಲಿ ಮತ್ತು ಒಟ್ಟಾರೆ ಮುಂಬಯಿಯ ಸಾಹಿತ್ಯ-ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ವಲಯದಲ್ಲಿ ಗಮನೀಯ ಕೆಲಸ ಮಾಡುತ್ತಿರುವ ಕರ್ನಾಟಕ ಸಂಘ ಅಂಧೇರಿ ಪ್ರಸ್ತುತಪಡಿಸುವ ಜಾನಪದ ಸಂರಕ್ಷಣಾ ಪರಿಷತ್ ಬೆಂಗಳೂರು ಸಹಯೋಗದಲ್ಲಿ 'ಹೊರನಾಡ ಸಂಸ್ಕೃತಿ ಸಂಭ್ರಮ -2026' ಕಾರ್ಯಕ್ರಮವು ಇದೇ ಬರುವ ಜೂನ್ 28ರ ರವಿವಾರದಂದು ಮಧ್ಯಾಹ್ನ 2:00ರಿಂದ ರಾತ್ರಿ 8:00ರ ವರೆಗೆ ಕುರ್ಲಾ ಬಂಟರ ಭವನ ಸಭಾಗೃಹದಲ್ಲಿ 'ರಾಷ್ಟ್ರ ಭಕ್ತಿ ನಾಡ ಪ್ರೀತಿ' ಎಂಬ ಧ್ಯೇಯದೊಂದಿಗೆ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ -2026 ಇದರ ಉದ್ಘಾಟನಾ ಸಮಾರಂಭವು ಮಧ್ಯಾಹ್ನ 2:30ಕ್ಕೆ ಸರಿಯಾಗಿ ಜರಗಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಆದಿಕವಿ ವಿಶ್ವವಿದ್ಯಾಲಯ ರಾಯಚೂರು ಕುಲಪತಿ ಡಾ. ಶಿವಾನಂದ ಕೆಳಗಿನ ಮನೆ ಮಾಡಲಿದ್ದು. ಅಧ್ಯಕ್ಷತೆಯನ್ನು ಬಂಟರ ಸಂಘ ಮುಂಬಯಿಯ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ವಹಿಸಲಿರುವರು. ಶ್ರೀ ಉಮಾಮಹೇಶ್ವರಿ ದೇವಸ್ಥಾನ ಜರಿಮರಿಯ ಪ್ರಧಾನ ಅರ್ಚಕ ಶ್ರೀನಿವಾಸ ಎನ್. ಉಡುಪ ಆಶೀರ್ವಚನ ನೀಡಲಿದ್ದು, ಮುಖ್ಯ ಅತಿಥಿಗಳಾಗಿ ಸಿ.ಎಂ.ಆರ್. ಶ್ರೀನಾಥ್ (ಸಮಾಜ ಸೇವಕ ಕೋಲಾರ), ಟಿ. ವಿ. ಬಾಬು (ಸಮಾಜ ಸೇವಕ ಆನೇಕಲ್ಲು), ಆಂಜನೇಯ ಈಡಿಗ (ಸಮಾಜ ಸೇವಕ ರಾಯಚೂರು), 'ವಾಸ್ತು ಮಾರ್ತಾಂಡ' ಪಂಡಿತ್ ನವೀನ್ಚಂದ್ರ ಸನಿಲ್ (ಖ್ಯಾತ ವಾಸ್ತುತಜ್ಞ) ಇವರೆಲ್ಲರೂ ಉಪಸ್ಥಿತರಿರುವರು.

ಮಧ್ಯಾಹ್ನ 3:15ಕ್ಕೆ ಸರಿಯಾಗಿ ಮುಂಬಯಿಯ ತುಳು-ಕನ್ನಡ ಸಂಘ-ಸಂಸ್ಥೆಯ ಗಾಯಕ ಗಾಯಕಿಯರಿಂದ ಸಮೂಹ ಗಾಯನ ಸ್ಪರ್ಧೆ, 4:45ರಿಂದ ಕರ್ನಾಟಕ ಸಂಘ ಅಂಧೇರಿ ಸಂಸ್ಥೆಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, 5:00ರಿಂದ ಅಂತಾರಾಷ್ಟ್ರೀಯ ಖ್ಯಾತ ಜನಪದ ಗಾಯಕ ಗೋನಾ ಸ್ವಾಮಿಯವರಿಂದ ಹಾಗೂ ನಾಟ್ಯ ಸ್ವರಾಲಯ ಬೆಂಗಳೂರು ಕಲಾವಿದರಿಂದ ಸಂಗೀತ ಸಂಜೆ ಕಾರ್ಯಕ್ರಮ ಜರಗಲಿದೆ. 6:30ರಿಂದ ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ -2026ರ ಸಮಾರೋಪ ಕಾರ್ಯಕ್ರಮ ಹಾಗೂ ದತ್ತಿನಿಧಿ ಸಮರ್ಪಣೆ, ಪ್ರಶಸ್ತಿ ಪ್ರದಾನ ಸಮಾರಂಭವು ಚೆಂಬೂರು ಕರ್ನಾಟಕ ಸಂಘ ಮುಂಬಯಿಯ ಗೌ. ಕಾರ್ಯದರ್ಶಿ ದಯಾಸಾಗರ್ ಚೌಟ ಅವರ ಅಧ್ಯಕ್ಷತೆಯಲ್ಲಿ ಜರಗಲಿದೆ. ಮುಖ್ಯ ಅತಿಥಿಗಳಾಗಿ ಡಾ. ಆರ್. ಕೆ. ಶೆಟ್ಟಿ (ಗೌ. ಕಾರ್ಯದರ್ಶಿ ಬಂಟರ ಸಂಘ ಮುಂಬಯಿ), ಡಾ. ಅಶೋಕ್ ನರೋಡೆ (ಸಾಹಿತಿ ಮತ್ತು ನಿವೃತ್ತ ಪ್ರಾಧ್ಯಾಪಕ ಮಾಲಿಂಗಾಪುರ), ಪ್ರವೀಣ್ ಭಟ್ (ಅಂತಾರಾಷ್ಟ್ರೀಯ ಜ್ಯೋತಿಷಿ), ಚಂದ್ರಶೇಖರ ಪಾಲೆತ್ತಾಡಿ (ಸಂಪಾದಕ : 'ಕರ್ನಾಟಕ ಮಲ್ಲ' ದೈನಿಕ), ನಾಗರಾಜ ಪಡುಕೋಣೆ (ಎಮ್.ಡಿ. : ಟೆಕ್ನಿಕ್ ಗ್ರೂಪ್ ಆಫ್ ಕಂಪನೀಸ್), ರಮೇಶ್ ರೈ. ಕೈಯ್ಯಾರು (ಕಾರ್ಯಾಧ್ಯಕ್ಷ : ಮ್ಯಾರೇಜ್ ಸೆಲ್ ಬಂಟರ ಸಂಘ ಮುಂಬಯಿ), ಮಾಲಾ ಎಂ. ಆಚಾರ್ಯ (ಕನ್ನಡ ನಾಟಕ ಬರಹಗಾರ್ತಿ ಮತ್ತು ಕಲಾವಿದೆ, ಸಮಾಜ ಸೇವಕಿ), ಮಾಧವ ಶೆಟ್ಟಿ (ಲಲಿತಾ ಟ್ರೇಡರ್ಸ್ ಮುಂಬಯಿ), ಭಾಸ್ಕರ್ ಶೆಟ್ಟಿ ಸಫೇದ್ ಫೂಲ್ (ಪೂಜಾ ಸಮಿತಿ ಅಧ್ಯಕ್ಷ : ಶ್ರೀ ಭ್ರಮರಾಂಬಿಕಾ ದೇವಸ್ಥಾನ ಸಾಕಿನಾಕ) ಇವರೆಲ್ಲರೂ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ದತ್ತಿನಿಧಿ ಸಮರ್ಪಣೆ ಕಾರ್ಯಕ್ರಮ ಜರಗಲಿದ್ದು ದಿ. ಗಣೇಶ್ ಬಲ್ಯಾಯ ಸ್ಮರಣಾರ್ಥ (ಶಶಿಕಲಾ ಬಲ್ಯಾಯ ಮತ್ತು ಯತೀಶ್ ಗಣೇಶ್ ಬಲ್ಯಾಯ ಕೊಡ ಮಾಡುವ) ದತ್ತಿನಿಧಿಯನ್ನು ಹೊರನಾಡ ಕನ್ನಡ ಸಮಾಜ ಸೇವೆಯನ್ನು ಮಾಡುತ್ತಿರುವ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ವಿಶ್ವನಾಥ್ ದೊಡ್ಮನೆ ಅವರಿಗೆ, ಪೆಲತ್ತೂರು ಗುರು ನಿವಾಸ ದಿ. ಕೊರಗ ಪೂಜಾರಿ ಸ್ಮರಣಾರ್ಥ (ಶ್ರದ್ಧಾ ಕ್ಯಾಟರರ್ಸ್ ಮಾಲಕ ಶಂಕರ್ ಪೂಜಾರಿ ಪೆಲತ್ತೂರು ದಂಪತಿ ಕೊಡ ಮಾಡುವ) ದತ್ತಿನಿಧಿಯನ್ನು ಹಿರಿಯ ರಂಗ ನಿರ್ದೇಶಕ ದಯಾನಂದ್ ಸಾಲ್ಯಾನ್ ಅವರಿಗೆ, ದಿ. ಆಶಾ ಮಾಧವ ಶೆಟ್ಟಿ ಸ್ಮರಣಾರ್ಥ (ಮಾಧವ ಶೆಟ್ಟಿ ಮತ್ತು ಮಕ್ಕಳು ಕೊಡ ಮಾಡುವ) ಆರೋಗ್ಯ ನಿಧಿಯನ್ನು ಸುಜಾತಾ ಜಗದೀಶ್ ಪೂಜಾರಿ ಅವರಿಗೆ, ದಿ. ಬೊಮ್ಮಯ್ಯ ಶೆಟ್ಟಿ ಮತ್ತು ದಿ. ಅಬ್ಬು ಶೆಡ್ತಿ ಸ್ಮರಣಾರ್ಥ (ಕೃಷ್ಣ ಬಿ. ಶೆಟ್ಟಿ ಮತ್ತು ಸುನೀತಾ ಶೆಟ್ಟಿ ಕೊಡಮಾಡುವ) ದತ್ತಿನಿಧಿಯನ್ನು ನಗರದ ಹಿರಿಯ ಕಲಾವಿದ ಉಮೇಶ್ ಎನ್. ಶೆಟ್ಟಿ ಅವರಿಗೆ ಸಮರ್ಪಿಲಾಗುವುದು.

'ಶ್ರೇಷ್ಠ ಹೊರನಾಡ ಕನ್ನಡಿಗ ಪ್ರಶಸ್ತಿ'ಯನ್ನು ಡಾ। ಸುರೇಶ್ ರಾವ್ (ನಿರ್ದೇಶಕ : ಸಂಜೀವಿನಿ ಹಾಸ್ಪಿಟಲ್ ಅಂಧೇರಿ), ಸುರೇಶ್ ಕಾಂಚನ್ (ನಿರ್ದೇಶಕ : ಕ್ಲಾಸಿಕ್ ಗ್ರೂಪ್ ಆಫ್ ಹೊಟೇಲ್ಸ್), ಸುರೇಂದ್ರ ಕುಮಾರ್ ಮಾರ್ನಾಡ್ (ಕಲಾವಿದ : ಐ ಲೇಸಾ ದಿ ವಾಯ್ಸ್ ಆಫ್ ಓಷನ್ (ರಿ.)), ಟಿ. ಆರ್. ಮಧುಸೂದನ್ (ಅಧ್ಯಕ್ಷ : ಕನ್ನಡ ಕಲಾ ಕೇಂದ್ರ ಮುಂಬಯಿ), ರವಿ ನಾಯ್ಕಪು (ನಿರೂಪಣಾ ಕೌಸ್ತುಭ ಪ್ರಶಸ್ತಿ), ದಿ. ಎಚ್. ಬಿ. ಎಲ್. ರಾವ್ (ಮರಣೋತ್ತರ ಪ್ರಶಸ್ತಿ), ಸೇರಿದಂತೆ ಡಾ. ಶಿವಾನಂದ ಕೆಳಗಿನಮನೆ (ಕುಲಪತಿ : ಆದಿಕವಿ ವಿಶ್ವವಿದ್ಯಾನಿಲಯ ರಾಯಚೂರು), ಸಿ. ಎಂ. ಆರ್. ಶ್ರೀನಾಥ್ (ಸಮಾಜ ಸೇವಕ ಕೋಲಾರ), ಟಿ. ವಿ. ಬಾಬು (ಸಮಾಜ ಸೇವಕ ಆನೇಕಲ್ಲು), ಆಂಜನೇಯ ಈಡಿಗ (ಸಮಾಜ ಸೇವಕರು ರಾಯಚೂರು), ಪ್ರಭಾ ಎನ್. ಸುವರ್ಣ (ರೂಪದರ್ಶಿ) ಇವರೆಲ್ಲರನ್ನು ವಿಶೇಷವಾಗಿ ಗೌರವಿಸಲಾಗುವುದು. ಮಾತ್ರವಲ್ಲದೆ ಸ್ಥಳೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಬಹುಮಾನ ವಿತರಣೆ ಜರಗಲಿದೆ. ಕಾರ್ಯಕ್ರಮ ನಿರೂಪಣೆಯನ್ನು ಭಾಸ್ಕರ್ ಸುವರ್ಣ ಸಸಿಹಿತ್ಲು ಮತ್ತು ಪುಷ್ಪಾ ಜಿ. ಗೌಡ ನಿರ್ವಹಿಸಲಿರುವರು.

ಹೊರನಾಡಿನಲ್ಲಿ ಕನ್ನಡ ನಾಡಿನ ಕಂಪನ್ನು ಸೂಸಿ ನಾಡ ಕೀರ್ತಿಯನ್ನು ವಿಶ್ವದಗಲ ಪಸರಿಸುವ ಕರ್ನಾಟಕ ಸಂಘ ಅಂಧೇರಿ ಪ್ರಸ್ತುತಪಡಿಸುವ 'ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ -2026'ರ ಈ ಅಭೂತಪೂರ್ವ ಕಾರ್ಯಕ್ರಮಕ್ಕೆ ಸರ್ವ ಕಲಾಭಿಮಾನಿಗಳು ಆಗಮಿಸಿ ಕಾರ್ಯಕ್ರಮದ ಯಶಸ್ಸು ಹಾಗೂ ಶ್ರೇಯಸ್ಸಿಗೆ ಸಾಕ್ಷಿಗಳಾಗಿ ಸಂಪೂರ್ಣ ಸಹಕಾರ ಪ್ರೋತ್ಸಾಹವನ್ನಿತ್ತು ಕಾರ್ಯಕ್ರಮವನ್ನು ಚಂದಗಾಣಿಸಿಕೊಡಬೇಕಾಗಿ ಕರ್ನಾಟಕ ಸಂಘ ಅಂಧೇರಿ ಸಂಸ್ಥಾಪಕ ಕೃಷ್ಣ ಬಿ. ಶೆಟ್ಟಿ, ಗೌರವ ಅಧ್ಯಕ್ಷ ಪಿ. ಧನಂಜಯ ಶೆಟ್ಟಿ, ಅಧ್ಯಕ್ಷ ಜಗಜೀವನ್ ಪೂಜಾರಿ, ಗೌ. ಕಾರ್ಯದರ್ಶಿ ಉದಯ್ ಕೇರ್ಗಲ್, ಗೌ. ಕೋಶಾಧಿಕಾರಿ ಪರ್ಮಿಂದರ್ ಸಿಂಗ್ ಸೋಖಿ, ಮಹಿಳಾ ವಿಭಾಗದ ಅಧ್ಯಕ್ಷೆ ಸುರೇಖಾ ಶಿವರಾಮ್ ಶೆಟ್ಟಿ, ಕಾರ್ಯದರ್ಶಿ ಪ್ರತಿಮಾ ಸುರೇಂದ್ರ ಹೆಗ್ಡೆ ಹಾಗೂ ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು ವಿನಂತಿಸಿಕೊಂಡಿದ್ದಾರೆ.

'ರಾಷ್ಟ್ರ ಭಕ್ತಿ - ನಾಡ ಪ್ರೀತಿ' ಎಂಬ ಧ್ಯೇಯದೊಂದಿಗೆ 'ಅಮೃತ ಭಾರತಿಗೆ ಕನ್ನಡದ ಆರತಿ' ಎಂಬ ವಿಶಿಷ್ಟ ಪರಿಕಲ್ಪನೆಯಲ್ಲಿ ಕರ್ನಾಟಕ ಸಂಘ ಅಂಧೇರಿ (ರಿ.) ಪ್ರಸ್ತುತಪಡಿಸುವ ಜಾನಪದ ಸಂರಕ್ಷಣಾ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಮುಂಬಯಿಯಲ್ಲಿ ಜೂ. 28ರ ರವಿವಾರ ಮಧ್ಯಾಹ್ನ 2:00 ರಿಂದ ರಾತ್ರಿ 8:00ರ ವರೆಗೆ ರಾಧಾಬಾಯಿ ಟಿ. ಭಂಡಾರಿ ಸಭಾಗೃಹ ಬಂಟರ ಭವನ ಕುರ್ಲಾ ಪೂರ್ವ ಮುಂಬಯಿ ಇಲ್ಲಿ 'ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ - 2026' ಎಂಬ ವಿಶಿಷ್ಟ ರೀತಿಯ ವೈವಿಧ್ಯಮಯ ಕಾರ್ಯಕ್ರಮವು ಜರಗಲಿದೆ. ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಮುಂಬಯಿ ತುಳು-ಕನ್ನಡ ಸಂಘ ಸಂಸ್ಥೆಯ ಗಾಯಕ ಗಾಯಕಿಯರಿಂದ ಸಮೂಹ ಗಾಯನ ಸ್ಪರ್ಧೆ, ಕರ್ನಾಟಕ ಸಂಘ ಅಂಧೇರಿ ಸಂಸ್ಥೆಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಅಂತಾರಾಷ್ಟ್ರೀಯ ಖ್ಯಾತ ಜನಪದ ಗಾಯಕ ಗೋನಾ ಸ್ವಾಮಿ ಹಾಗೂ ನಾಟ್ಯ ಸ್ವರಾಲಯ ಬೆಂಗಳೂರು ಕಲಾವಿದರಿಂದ ಸಂಗೀತ ಸಂಜೆ ಕಾರ್ಯಕ್ರಮ ಜರಗಲಿದೆ. ಈತನ್ಮಧ್ಯೆ ಪ್ರಶಸ್ತಿ ಪ್ರದಾನ, ಗೌರವ ಪುರಸ್ಕಾರ, ದತ್ತಿ ನಿಧಿ ಸಮರ್ಪಣೆ ಕಾರ್ಯಕ್ರಮಗಳು ಜರಗಲಿದೆ. ಈ ನಿಮಿತ್ತ ಕಾರ್ಯಕ್ರಮದ ಕ್ಷ-ಕಿರಣ ಬೀರುವ ಕಿರು ಲೇಖನ ಇಲ್ಲಿದೆ.



ಪ್ರಭಾಕರ್ ಬೆಳುವಾಯಿ.

ಫಿಫಾ ವಿಶ್ವಕಪ್ : ರೊನಾಲ್ಡೊ ಮ್ಯಾಜಿಕ್; ಪೋರ್ಚುಗಲ್‌ಗೆ ಭರ್ಜರಿ ಜಯ



ಹ್ಯೂಸ್ಟನ್ (ಅಮೆರಿಕ), ಜೂ.24 - ದಿಗ್ಗಜ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರ ಅವಳಿ ಗೋಲು ಮತ್ತು ತಂಡದ ಸಹ ಆಟಗಾರರ ಅಮೋಘ ಪ್ರದರ್ಶನದ ನೆರವಿನಿಂದ ಪೋರ್ಚುಗಲ್ ತಂಡ ಫಿಫಾ ವಿಶ್ವಕಪ್‌ನಲ್ಲಿ ಭರ್ಜರಿ ಗೆಲುವಿನ ಖಾತೆ ತೆರೆದಿದೆ. ಮಂಗಳವಾರ ತಡರಾತ್ರಿ ನಡೆದ ಉಜ್ಬೇಕಿಸ್ತಾನ ವಿರುದ್ಧದ 'ಕೆ' ಗುಂಪಿನ ಪಂದ್ಯದಲ್ಲಿ 5-0 ಅಂತರದ ಗೆಲುವು ಸಾಧಿಸಿ ನಾಕೌಟ್ ಹೊಸ್ತಿಲಿಗೆ ಬಂದು ನಿಂತಿತು.

ಕಾಂಗೊ ರಿಪಬ್ಲಿಕ್ ವಿರುದ್ಧದ ಮೊದಲ ಪಂದ್ಯಲ್ಲಿ ಗೋಲು ಬಾರಿಸಲು ವಿಫಲವಾಗಿ ಭಾರೀ ಟೀಕೆಗೆ ಗುರಿಯಾಗಿದ್ದ ಕ್ರಿಸ್ಟಿಯಾನೊ ರೊನಾಲ್ಡೊ ಈ ಪಂದ್ಯದ 6ನೇ ನಿಮಿಷದಲ್ಲೇ ಗೋಲು ಬಾರಿಸಿದರು. ಇದೇ ವೇಳೆ ಫಿಫಾ ವಿಶ್ವಕಪ್‌ನಲ್ಲಿ ಆಡಿದ ಆರೂ ಆವೃತ್ತಿಗಳಲ್ಲಿ ಗೋಲು ದಾಖಲಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. 2006ರ ಆವೃತ್ತಿಯಲ್ಲಿ ಇರಾನ್ ವಿರುದ್ಧ ತಮ್ಮ ಮೊದಲ ವಿಶ್ವಕಪ್ ಗೋಲು ಗಳಿಸಿದ್ದರು. 41 ವರ್ಷ ವಯಸ್ಸಿನ ರೊನಾಲ್ಡೊ 39ನೇ ನಿಮಿಷದಲ್ಲಿ ಮತ್ತೊಂದು ಗೋಲು ಬಾರಿಸಿ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದರು. ಮಾತ್ರವಲ್ಲದೆ ತನ್ನ ವಿರುದ್ಧದ ಟೀಕೆಗಳಿಗೆ ತಕ್ಕ ಉತ್ತರ ನೀಡಿದರು. ರೊನಾಲ್ಡೊ ಹೊರತುಪಡಿಸಿ ತಂಡದ ಪರ ನುನೊ ಮೆಂಡೆಸ್ (17ನೇ) ಮತ್ತು ರಫೆಲ್ ಲಿಯೊ (87ನೇ) ತಲಾ ಒಂದು ಗೋಲು ಬಾರಿಸಿದರು. ಒಂದು ಗೋಲು ಎದುರಾಳಿ ತಂಡದ ಗೋಲ್‌ಕೀಪರ್ ಅಬ್ದುವೋಹಿದ್ ನೆಮಾಟೋವ್ ಮಾಡಿದ ತಪ್ಪಿನಿಂದ ಲಭಿಸಿತು.

ಅರ್ಜೆಂಟೀನಾ ನಾಯಕ ಲಿಯೊನೆಲ್ ಮೆಸ್ಸಿ ಅವರೂ ವಿಶ್ವಕಪ್‌ನ ಆರು ಆವೃತ್ತಿಗಳಲ್ಲಿ ಆಡಿದ್ದಾರೆ. ಆದರೆ, 2010ರ ಆವೃತ್ತಿಯಲ್ಲಿ ಅವರಿಗೆ ಗೋಲು ಗಳಿಸಲು ಸಾಧ್ಯವಾಗಿರಲಿಲ್ಲ. 2003ರಲ್ಲಿ ಅಂತಾರಾಷ್ಟ್ರೀಯ ಪಂದ್ಯಕ್ಕೆ ಪದಾರ್ಪಣೆ ಮಾಡಿದ ರೊನಾಲ್ಡೊ ಇದುವರೆಗೆ 230 ಪಂದ್ಯಗಳಲ್ಲಿ ದಾಖಲೆಯ 145 ಗೋಲು ಗಳಿಸಿದ್ದಾರೆ. ಇದು ಅವರ ಕೊನೆಯ ವಿಶ್ವಕಪ್ ಆಗಿರುವ ಕಾರಣ ಕನಸಿನ ವಿಶ್ವಕಪ್ ಗೆಲುವಿಗಾಗಿ ವಯಸ್ಸನ್ನೂ ಲೆಕ್ಕಿಸದೆ ಶಕ್ತಿ ಮೀರಿದ ಪ್ರಯತ್ನವೊಂದನ್ನು ಮಾಡಲಿದ್ದಾರೆ.

ಪಂತ್ ತಂಡಕ್ಕೆ ಮರಳಿರುವುದರಿಂದ ನಾಯಕತ್ವ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಉಂಟಾಗುವುದಿಲ್ಲ : ಅಕ್ಷರ್ ಪಟೇಲ್



ಹೊಸದಿಲ್ಲಿ , ಜೂ.24 - ರಿಷಭ್ ಪಂತ್ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಿದ್ದರೂ 2027ರ ಇಂಡಿಯನ್ ಪ್ರೀಮಿಯರ್‌ಲೀಗ್ ಟೂರ್ನಿಯಲ್ಲಿಯೂ ತಾವೇ ತಂಡದ ನಾಯಕರಾಗಿ ಮುಂದುವರಿಯುವುದಾಗಿ ಅಕ್ಷರ ಪಟೇಲ್ ದೃಢಪಡಿಸಿದ್ದಾರೆ. ಆ ಮೂಲಕ ಪಂತ್ ಅವರು ಮುಕ್ತವಾಗಿ ಬ್ಯಾಟಿಂಗ್ ನಡೆಸಲು ಅನುವು ಮಾಡಿ ಕೊಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ರಿಷಭ್ ಪಂತ್ ಅವರು 27 ಕೋಟಿ ರೂ. ಮೊತ್ತದ ಒಪ್ಪಂದದೊಂದಿಗೆ ಲಖನೌ ಸೂಪರ್ ಜಯಂಟ್ಸ್ ತಂಡಕ್ಕೆ ಸೇರ್ಪಡೆಯಾದ ಬಳಿಕ, ದೆಹಲಿ ಮೂಲದ ಫ್ರಾಂಚೈಸಿಯ ನಾಯಕನಾಗಿ ಅಕ್ಷರ್‌ಪಟೇಲ್ ಅವರನ್ನು ನೇಮಿಸಲಾಗಿತ್ತು. ಆ ಮೂಲಕ ಪಂತ್ ಐಪಿಎಲ್ ಇತಿಹಾಸದ ಅತ್ಯಂತ ದುಬಾರಿ ಆಟಗಾರರಾಗಿದ್ದರು. ಆದರೆ ಇದೀಗ ಎಲ್‌ಎಸ್‌ಜಿ, 15 ಕೋಟಿ ರೂ. ಮೊತ್ತಕ್ಕೆ ಪಂತ್ ಅವರನ್ನು ಮತ್ತೆ ಡೆಲ್ಲಿ ಕ್ಯಾಪಿಟಲ್ಸ್‌ಗೆ ಟ್ರೇಡ್ ಮಾಡಿದ್ದು, ಪ್ರತಿಯಾಗಿ 13.25 ಕೋಟಿ ರೂ. ಗಳ ರಿಟೆನ್ಷನ್ ಮೌಲ್ಯದಲ್ಲಿ ಕುಲ್ದೀಪ್ ಯಾದವ್ ಅವರನ್ನು ತನ್ನ ತಂಡಕ್ಕೆ ಸೇರಿಸಿಕೊಂಡಿದೆ.

ಪಂತ್ ತಂಡಕ್ಕೆ ಮರಳಿರುವುದರಿಂದ ನಾಯಕತ್ವ ಅಥವಾ ಜವಾಬ್ದಾರಿಗಳ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಉಂಟಾಗುವುದಿಲ್ಲ ಎಂದು ಅಕ್ಷರ್‌ಸ್ಪಷ್ಟಪಡಿಸಿದ್ದಾರೆ. ನಮ್ಮಿಬ್ಬರ ನಡುವೆ ಸ್ನೇಹಿತರಾಗಿ ಅಥವಾ ನಾಯಕ-ಆಟಗಾರರಾಗಿ ಎಂದಿಗೂ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ಮೂಲತಃ ಅವರು ಡೆಲ್ಲಿ ಕ್ಯಾಪಿಟಲ್ಸ್‌ನಲ್ಲಿ ಇದ್ದಾಗ ನನ್ನ ನಾಯಕನಾಗಿದ್ದರು ಮತ್ತು ನನಗೆ ಮಾರ್ಗದರ್ಶನ ನೀಡುತ್ತಿದ್ದರು. ಆಗಲೂ ನಮ್ಮ ನಡುವೆ 'ನಾನು ನಾಯಕ, ನೀನು ನಾನು ಹೇಳಿದಂತೆ ಮಾಡಬೇಕು' ಎಂಬ ರೀತಿಯ ಯಾವುದೇ ನಿಯಮ ಇರಲಿಲ್ಲ, ಎಂದು ಅಕ್ಷರ್ ಪಟೇಲ್ ಅವರು ಡೆಲ್ಲಿ ಕ್ಯಾಪಿಟಲ್ಸ್‌ನ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ ವಿಡಿಯೊದಲ್ಲಿ ಹೇಳಿದ್ದಾರೆ.

ನಾವು ಪರಸ್ಪರ ಅರ್ಥೈಸಿಕೊಳ್ಳುವಿಕೆಯೊಂದಿಗೆ ಕೆಲಸ ಮಾಡಿದ್ದೇವೆ. ನಾವು ಇಬ್ಬರೂ ಹಿರಿಯ ಆಟಗಾರರಾಗಿರುವುದರಿಂದ, ಯಾವುದೇ ಪರಿಸ್ಥಿತಿಯಲ್ಲಿ ಒಬ್ಬರ ಸಾಮರ್ಥ್ಯ ಮತ್ತು ಪಾತ್ರ ಏನು ಎಂಬುದು ಇಬ್ಬರಿಗೂ ಚೆನ್ನಾಗಿ ತಿಳಿದಿದೆ. ಸ್ನೇಹಿತನಾಗಿಯೂ ಮತ್ತು ನಾಯಕನಾಗಿಯೂ ನಾನು ಅವರಿಗೆ ಹೇಳುವುದೇನೆಂದರೆ, ಅವರಿಗೆ ತನ್ನ ಆಟದ ಬಗ್ಗೆ ಸಂಪೂರ್ಣ ಅರಿವು ಇದೆ. ನನ್ನಿಂದಾಗಲಿ ಅಥವಾ ಫ್ರಾಂಚೈಸಿಯಿಂದಾಗಲಿ ಅವರ ಮೇಲೆ ಯಾವುದೇ ಹೆಚ್ಚುವರಿ ಒತ್ತಡ ಇರುವುದಿಲ್ಲ. ಇದು ಅವರ ತವರು ತಂಡ. ಅವರು ಹಲವು ವರ್ಷಗಳಿಂದ ಇಲ್ಲಿ ಆಡಿದ್ದಾರೆ. ಡೆಲ್ಲಿ ಅವನ ಮನೆ ಇದ್ದಂತೆಯೇ. ಅವರಿಗೆ ನಾನು ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ. ನಾಯಕನಾಗಿ ನನ್ನಿಂದ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ದೊರೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಪಂತ್‌ಗೆ ಸ್ವಾಗತ ಕೋರಿದ ಅಕ್ಷರ್ ಪಟೇಲ್: ಇದಲ್ಲದೆ, ಗುಜರಾತ್ ಮೂಲದ ಕ್ರಿಕೆಟಿಗ ಅಕ್ಷರ್ ಪಟೇಲ್ ಅವರು ಹರಿದ್ವಾರ ಮೂಲದ ರಿಷಭ್ ಪಂತ್ ಅವರಿಗೆ ಹೃತ್ಪೂರ್ವಕ ಸ್ವಾಗತ ಕೋರಿದರು. ಮುಂಬರುವ ಋತುವಿಗೂ ಮುನ್ನ ತಂಡಕ್ಕೆ ಅವರ ಮರಳುವಿಕೆಯನ್ನು ಸಂತಸದ ಕ್ಷಣವೆಂದು ಬಣ್ಣಿಸಿದರು. ಜೊತೆಗೆ, ಪ್ರಸ್ತುತ ಕಳಪೆ ಫಾರ್ಮ್‌ನಲ್ಲಿರುವ ಪಂತ್ ಶೀಘ್ರದಲ್ಲೇ ಬಲಿಷ್ಠವಾಗಿ ಕಮ್‌ಬ್ಯಾಕ್ ಮಾಡಲಿದ್ದಾರೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು. ನೀವು ನಿಮ್ಮ ಆಟವನ್ನು ಆನಂದಿಸಿ ಮತ್ತು ನಿಮ್ಮ ಸ್ವಭಾವಕ್ಕೆ ನಿಷ್ಠನಾಗಿರಿ. ಫಾರ್ಮ್ ತಾತ್ಕಾಲಿಕ, ಆದರೆ ಕ್ಲಾಸ್ ಶಾಶ್ವತ. ನೀವು ಆ ಮಟ್ಟದ ಆಟಗಾರ. ನಮ್ಮ ಕಡೆಯಿಂದ ನಿಮಗೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಆದ್ದರಿಂದ ಯಾವುದೇ ಒತ್ತಡವಿಲ್ಲದೆ ನಿಮ್ಮ ಸಹಜ ಆಟವನ್ನು ಆಡಿ ಮತ್ತು ಅದನ್ನು ಆನಂದಿಸಿ. ನಿಮಗಾಗಿ ನನ್ನ ಸಂದೇಶ ಇದೇ ಎಂದು 2025ರಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕನಾಗಿರುವ ಆಲ್‌ರೌಂಡರ್ ಅಕ್ಷರ್‌ಪಟೇಲ್ ಹೇಳಿದ್ದಾರೆ.

ಇಂಗ್ಲೆಂಡ್‌ನಲ್ಲಿ 'ಬಾಸ್ ಬೇಬಿ' ಹವಾ: ವಿಸ್ಡನ್ ಮುಖಪುಟದಲ್ಲಿ ವೈಭವ್ ಸೂರ್ಯವಂಶಿ



ಲಂಡನ್ , ಜೂ.24 - ಕ್ರಿಕೆಟ್ ಅಂಗಳದ ಹೊಸ ಸೆನ್ಸೇಷನ್ ವೈಭವ್ ಸೂರ್ಯವಂಶಿ ಹವಾ ಶುರುವಾಗಿದೆ. ಅದು ಸಹ ದೂರದ ಇಂಗ್ಲೆಂಡ್‌ನಲ್ಲಿ. ಭಾರತ ಮತ್ತು ಇಂಗ್ಲೆಂಡ್ ನಡುವಣ ಸರಣಿಗೂ ಮುನ್ನ ಯುನೈಟೆಡ್ ಕಿಂಗ್‌ಡಮ್‌ನ ಅತ್ಯಂತ ಪ್ರತಿಷ್ಠಿತ ನಿಯತಕಾಲಿಕೆ ವಿಸ್ಡನ್ ತನ್ನ ನೂತನ ಸಂಚಿಕೆಯನ್ನು ಪ್ರಕಟಿಸಿದೆ. ಈ ಸಂಚಿಕೆಯ ಮುಖಪುಟದಲ್ಲಿ ಕಾಣಿಸಿಕೊಂಡಿರುವುದು ವೈಭವ್ ಸೂರ್ಯವಂಶಿ ಎಂಬುದು ವಿಶೇಷ.

1864 ರಲ್ಲಿ ಇಂಗ್ಲೆಂಡ್‌ನ ಕ್ರಿಕೆಟಿಗ ಜಾನ್ ವಿಸ್ಡನ್ ಅವರು ಸ್ಥಾಪಿಸಿದ ವಿಸ್ಡನ್ ನಿಯತಕಾಲಿಕೆಯನ್ನು 'ಕ್ರಿಕೆಟ್‌ನ ಬೈಬಲ್' ಎಂದೇ ಕರೆಯಲಾಗುತ್ತದೆ. ಈ ಮಾಸಿಕ ನಿಯತಕಾಲಿಕೆಗೆ ಕ್ರಿಕೆಟ್ ಲೋಕದಲ್ಲಿ ಇದಕ್ಕೆ ಅತ್ಯುನ್ನತ ಗೌರವವಿದೆ. ಇದೀಗ ಈ ನಿಯತಕಾಲಿಕೆಯ ಮುಖಪುಟದಲ್ಲಿ ಇನ್ನೂ ಕೂಡ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡದ ವೈಭವ್ ಸೂರ್ಯವಂಶಿ ಕಾಣಿಸಿಕೊಂಡಿರುವುದು ವಿಶೇಷ.

ಮುಖಪುಟದ ವಿಶೇಷತೆಗಳು: ವಿಸ್ಡನ್ ನಿಯತಕಾಲಿಕೆಯ ಹೊಸ ಸಂಚಿಕೆಯ ಮುಖಪುಟದಲ್ಲಿ ವೈಭವ್ ಸೂರ್ಯವಂಶಿಯ ಫೋಟೋ ಬಳಸಲಾಗಿದ್ದು, ಇದಕ್ಕೆ 'ಕ್ರಿಕೆಟ್ ದಾಖಲೆಗಳನ್ನು ಧೂಳೀಪಟ ಮಾಡಿದ ಹುಡುಗ' ಎಂಬಾರ್ಥದ ಕ್ಯಾಪ್ಷನ್ ನೀಡಿದ್ದಾರೆ. ಈ ಮೂಲಕ ವಿಸ್ಡನ್ ನಿಯತಕಾಲಿಕೆಯ ಮುಖಪುಟದಲ್ಲಿ ಅತೀ ಕಿರಿಯ ವಯಸ್ಸಿಗೆ ಗೌರವ ಪಡೆದ ವಿಶ್ವದ ಅಪರೂಪದ ಆಟಗಾರರಲ್ಲಿ ಒಬ್ಬರೆನಿಸಿಕೊಂಡಿದ್ದಾರೆ.

ಇನ್ನು ಈ ಸಂಚಿಕೆಯಲ್ಲಿ ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಬ್ಯಾಟಿಂಗ್ ಶೈಲಿ ಹಾಗೂ ಆಧುನಿಕ ಕ್ರಿಕೆಟ್‌ಗೆ ಅವರ ಕೊಡುಗೆಯನ್ನು ಆಳವಾಗಿ ವಿಶ್ಲೇಷಿಸಲಾಗಿದೆ. ಹಾಗೆಯೇ ವೈಭವ್ ಸೂರ್ಯವಂಶಿಯ ಮಾರ್ಗದರ್ಶಕರಾದ ಸುಬಿನ್ ಭರುಚಾ ಅವರು, ಯುವ ದಾಂಡಿಗ ಇಷ್ಟು ಸಣ್ಣ ವಯಸ್ಸಿನಲ್ಲೇ ಒತ್ತಡವನ್ನು ಹೇಗೆ ಮೆಟ್ಟಿ ನಿಲ್ಲುತ್ತಾರೆ ಎಂಬ ವಿಚಾರವನ್ನು ಹಂಚಿಕೊಂಡಿದ್ದಾರೆ. ಇದರ ಜೊತೆಗೆ ಸೌತ್ ಆಫ್ರಿಕಾದ ಮಾಜಿ ನಾಯಕ ಗ್ರೇಮ್ ಸ್ಮಿತ್ ಅವರು, ನಾನು ನನ್ನ ಜೀವನದಲ್ಲಿ ನೋಡಿದ ಅತ್ಯುತ್ತಮ ಟಿ20 ಬ್ಯಾಟಿಂಗ್ ಪ್ರತಿಭೆ ವೈಭವ್ ಎಂದು ಒಟ್ಟಾರೆಯಾಗಿ ಹೇಳುವುದಾದರೆ, 15ರ ಹರೆಯದಲ್ಲೇ ವಿಸ್ಡನ್‌ನಂತಹ ಜಾಗತಿಕ ನಿಯತಕಾಲಿಕೆಯ ಮುಖಪುಟದಲ್ಲಿ ಸ್ಥಾನ ಪಡೆದಿರುವುದು ವೈಭವ್ ಸೂರ್ಯವಂಶಿ ಅವರ ಅಸಾಧಾರಣ ಪ್ರತಿಭೆಗೆ ಸಾಕ್ಷಿಯಾಗಿದೆ. ಕ್ರಿಕೆಟ್ ಲೋಕದ ದಿಗ್ಗಜರೇ ಬೆರಗಾಗುವಂತೆ ಮಾಡಿರುವ ವೈಭವ್ ಮುಂಬರುವ ಐರ್ಲೆಂಡ್ ವಿರುದ್ಧದ ಟಿ20 ಸರಣಿಯ ಮೂಲಕ ಟೀಮ್ ಇಂಡಿಯಾ ಪರ ಅಂತಾರಾಷ್ಟ್ರೀಯ ಕೆರಿಯರ್ ಆರಂಭಿಸುವ ಸಾಧ್ಯತೆಯಿದೆ.

ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಶತಕ ಸಿಡಿಸಿ ವಿಶ್ವ ದಾಖಲೆ ನಿರ್ಮಿಸಿದ ಚಾಮರಿ ಅಟಪಟ್ಟು



ಲಂಡನ್, ಜೂ. 24 - ಶ್ರೀಲಂಕಾ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಚಾಮರಿ ಅಟಪಟ್ಟು ಐಸಿಸಿ ಮಹಿಳಾ ಟಿ20 ವಿಶ್ವಕಪ್ ಪಂದ್ಯದ ರನ್ ಚೇಸ್‌ನಲ್ಲಿ ಶತಕ ಗಳಿಸಿದ ವಿಶ್ವದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಇತಿಹಾಸ ಪುಸ್ತಕಗಳಲ್ಲಿ ತಮ್ಮ ಹೆಸರನ್ನು ಬರೆದಿದ್ದಾರೆ.

ಮಂಗಳವಾರ ಬ್ರಿಸ್ಟಲ್‌ನ ಕೌಂಟಿ ಮೈದಾನದಲ್ಲಿ ನಡೆದ ಐಸಿಸಿ ಮಹಿಳಾ ಟಿ20 ವಿಶ್ವಕಪ್ 2026 ರ ಗ್ರೂಪ್ ಬಿ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧದ 131 ರನ್‌ಗಳ ಗುರಿ ಬೆನ್ನಟ್ಟಿದ ಶ್ರೀಲಂಕಾ ಪರ 36 ವರ್ಷದ ಎಡಗೈ ಬ್ಯಾಟರ್ ಚಾಮರಿ, ಬಿರುಸಿನ ಬ್ಯಾಟಿಂಗ್ ಮೂಲಕ 61 ಎಸೆತಗಳಲ್ಲಿ 106 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರು 17ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನು ಬಾರಿಸಿಶ್ರೀಲಂಕಾವನ್ನು ಒಂಭತ್ತು ವಿಕೆಟ್‌ಗಳ ಜಯಕ್ಕೆ ಕೊಂಡೊಯ್ದರು.

ಅಟಪಟ್ಟು ಅವರ ಶತಕಕ್ಕೂ ಮುನ್ನ, ಮಹಿಳಾ ಟಿ20 ವಿಶ್ವಕಪ್ ಪಂದ್ಯವೊಂದರಲ್ಲಿ ಯಶಸ್ವಿ ರನ್ ಚೇಸ್ ವೇಳೆ ಅತಿ ಹೆಚ್ಚು ಸ್ಕೋರ್‌ಗಳಿಸಿದ ದಾಖಲೆ ವೆಸ್ಟ್ ಇಂಡೀಸ್‌ನ ಶೆಮೈನ್ ಕ್ಯಾಂಪ್‌ಬೆಲ್ ಹೆಸರಿನಲ್ಲಿತ್ತು. ಸೌತಾಂಪ್ಟನ್‌ನಲ್ಲಿ ನಡೆದ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಅಜೇಯ 90 ರನ್ ಗಳಿಸಿದ್ದರು. ಹಾಲಿ ಆವೃತ್ತಿಯಲ್ಲೇ ಅವರು ಈ ಸಾಧನೆಗೈದಿದ್ದರು.

ಈ ಶತಕದೊಂದಿಗೆ ಚಾಮರಿ ಅಟಪಟ್ಟು ಮಹಿಳಾ ಅಂತಾರಾಷ್ಟ್ರೀಯ ಟಿ20ಯಲ್ಲಿ 4ನೇ ಶತಕ ಪೂರ್ತಿಗೊಳಿಸಿದರು. ಅತ್ಯಧಿಕ ಶತಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದರು. ಯುಎಇಯ ಇಶಾ ಓಜಾ 5 ಶತಕ ಸಿಡಿಸಿ ಅಗ್ರಸ್ಥಾನದಲ್ಲಿದ್ದಾರೆ.

ಪಂದ್ಯದ ಬಗ್ಗೆ ಹೇಳುವುದಾದರೆ ಮೊದಲು ಬ್ಯಾಟಿಂಗ್ ನಡೆಸಿದ ಐರ್ಲೆಂಡ್ 5 ವಿಕೆಟ್‌ಗೆ 130 ರನ್ ಬಾರಿಸಿತು. ಗುರಿ ಬೆನ್ನಟ್ಟಿದ ಶ್ರೀಲಂಕಾ 15.3 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 134 ರನ್ ಬಾರಿಸಿ ಗೆಲುವು ತನ್ನದಾಗಿಸಿತು. ಬಿ ಗುಂಪಿನಲ್ಲಿ 4 ಪಂದ್ಯ ಆಡಿರುವ ಶ್ರೀಲಂಕಾ ಎರಡು ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದೆ. ಅಂತಿಮ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ ಗೆದ್ದರೂ ಪವಾಡವೊಂದು ಸಂಭವಿಸಿದರಷ್ಟೇ ಲಂಕಾಗೆ ಸೆಮಿಫೈನಲ್ ಅವಕಾಶ ಸಿಗಲಿದೆ.

ಟೇಬಲ್ ಟೆನಿಸ್ ಒಕ್ಕೂಟದ ವಿರುದ್ಧ ಮೊಕದ್ದಮೆ ಹೂಡಲು ಮುಂದಾದ ಮಣಿಕಾ ಬಾತ್ರಾ



ಹೊಸದಿಲ್ಲಿ, ಜೂ.24 - ಭಾರತದ ಅಗ್ರ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ, ಏಷ್ಯನ್ ಗೇಮ್ಸ್ ತಂಡದಿಂದ ಕೈಬಿಟ್ಟಿದ್ದಕ್ಕೆ ಭಾರತ ಟೇಬಲ್ ಟೆನಿಸ್ ಫೆಡರೇಶನ್ (ಟಿಟಿಎಫ್‌ಐ) ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕಿದ್ದಾರೆ. ಸ್ಪಷ್ಟ ಮತ್ತು ವಾಸ್ತವಿಕ ವಿವರಣೆ ನೀಡುವಂತೆ ಒತ್ತಾಯಿಸಿದ್ದಾರೆ.


ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಅಗತ್ಯವಿದ್ದ ಭಾರತೀಯ ಟೇಬಲ್ ಟೆನಿಸ್ ಒಕ್ಕೂಟದ (ಟಿಟಿಎಫ್‌ಐ) ಆಯ್ಕೆ ಮಾನದಂಡಗಳನ್ನು ಪೂರೈಸಲು ವಿಫಲವಾದ ಕಾರಣ, 31 ವರ್ಷದ ಒಲಿಂಪಿಯನ್ ಅವರನ್ನು 10 ಸದಸ್ಯರ ತಂಡದಿಂದ ಕೈಬಿಡಲಾಯಿತು ಮತ್ತು ಮೀಸಲು ಆಟಗಾರರ ಪಟ್ಟಿಯಲ್ಲಿ ಹೆಸರಿಸಲಾಯಿತು.

ಈ ವಿಷಯದ ಬಗ್ಗೆ ಸಾರ್ವಜನಿಕವಾಗಿ ಮಾತನಾಡಿದ ಮಣಿಕಾ, ಪ್ರಧಾನಿ ನರೇಂದ್ರ ಮೋದಿ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಅವರ ಮಧ್ಯಪ್ರವೇಶವನ್ನು ಕೋರಿದ್ದಾರೆ. ತಾನು ಯಾವುದೇ ವಿಶೇಷ ಸವಲತ್ತುಗಳನ್ನು ಕೇಳುತ್ತಿಲ್ಲ ಅಥವಾ ಆಯ್ಕೆ ನಿರ್ಧಾರವನ್ನು ರದ್ದುಗೊಳಿಸುವಂತೆ ಒತ್ತಾಯಿಸುತ್ತಿಲ್ಲ ಆದರೆ ಸ್ಪಷ್ಟ ಮತ್ತು ವಾಸ್ತವಿಕ ವಿವರಣೆ ನೀಡಬೇಕೆಂದು ಒತ್ತಾಯಿಸಿದ್ದಾರೆ. ಕಳೆದ ಕೆಲವು ದಿನಗಳಿಂದ, ನಾನು ಏಷ್ಯನ್ ಗೇಮ್ಸ್ ತಂಡದಲ್ಲಿ ಸ್ಥಾನ ಪಡೆಯುತ್ತಿದ್ದೇನೆ ಅಥವಾ ವಿಶೇಷ ಪರಿಗಣನೆಯನ್ನು ಕೇಳುತ್ತಿದ್ದೇನೆ ಎಂದು ಅನೇಕ ಜನರು ಹೇಳುವುದನ್ನು ನಾನು ನೋಡಿದ್ದೇನೆ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಆಯ್ಕೆಯಾಗಲು ಕೇಳುತ್ತಿಲ್ಲ. ನಿರ್ಧಾರವನ್ನು ರದ್ದುಗೊಳಿಸಲು ನಾನು ಯಾರನ್ನೂ ಕೇಳುತ್ತಿಲ್ಲ. ನಾನು ಉತ್ತರಗಳನ್ನು ಕೇಳುತ್ತಿದ್ದೇನೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತಂಡದಲ್ಲಿ ಸ್ಥಾನ ಪಡೆಯಲು ನಾನು ಬಯಸುತ್ತಿಲ್ಲ. ವಿಶೇಷ ಚಿಕಿತ್ಸೆ ಪಡೆಯಲು ಬಯಸುತ್ತಿಲ್ಲ. ಆದರೆ ಪ್ರತಿಯೊಬ್ಬ ಕ್ರೀಡಾಪಟುವೂ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸ್ಥಿರತೆ ಮತ್ತು ಹೊಣೆಗಾರಿಕೆಗೆ ಅರ್ಹರು ಎಂದು ನಾನು ನಂಬುತ್ತೇನೆ. ನಾನು ಸುಮಾರು ಇಪ್ಪತ್ತು ವರ್ಷಗಳಿಂದ ಭಾರತವನ್ನು ಹೆಮ್ಮೆಯಿಂದ ಪ್ರತಿನಿಧಿಸುತ್ತಿದ್ದೇನೆ ಮತ್ತು ಇಂದು ನಾನು ಕೇಳುತ್ತಿರುವುದು ನ್ಯಾಯಯುತ ಮತ್ತು ಪ್ರಾಮಾಣಿಕ ವಿವರಣೆಯನ್ನು ಮಾತ್ರ. ನನಗೆ ತೃಪ್ತಿದಾಯಕ ಉತ್ತರಗಳು ಸಿಗದಿದ್ದರೆ, ನನ್ನ ಕಾನೂನು ನೆರವು ಅನ್ವೇಷಿಸುವುದನ್ನು ಬಿಟ್ಟು ನನಗೆ ಬೇರೆ ದಾರಿಯಿಲ್ಲ ಎಂದು ಅವರು ಹೇಳಿದರು.

ಆಯ್ಕೆ ಮಾನದಂಡಗಳನ್ನು ಪೂರೈಸುವಲ್ಲಿ ವಿಫಲವಾದ ನಂತರ ಐದು ಸದಸ್ಯರ ಮಹಿಳಾ ತಂಡದಲ್ಲಿ ಮಣಿಕಾ ಸ್ಥಾನ ಪಡೆಯಲು ವಿಫಲರಾದರು. ಫಲಿತಾಂಶಕ್ಕಿಂತ ಪ್ರಕ್ರಿಯೆಯ ವಿರುದ್ಧ ತಮ್ಮ ಹೋರಾಟ ನಿರಂತರವಾಗಿ ಸಮರ್ಥಿಸಿಕೊಂಡಿದ್ದಾರೆ.

ಐಸಿಸಿ ಟೆಸ್ಟ್ ಬೌಲಿಂಗ್ ಶ್ರೇಯಾಂಕ : ನಂ.1 ಸ್ಥಾನಕ್ಕೇರಿದ ನ್ಯೂಜಿಲ್ಯಾಂಡ್‌ನ ಮ್ಯಾಟ್ ಹೆನ್ರಿ



ದುಬೈ, ಜೂ.24 - ನ್ಯೂಜಿಲೆಂಡ್ ಪರ 36 ವರ್ಷಗಳ ಬರಗಾಲವನ್ನು ಮ್ಯಾಟ್ ಹೆನ್ರಿ ಕೊನೆಗೊಳಿಸಿದ್ದಾರೆ. ಐಸಿಸಿ ಟೆಸ್ಟ್ ಬೌಲಿಂಗ್ ಶ್ರೇಯಾಂಕದಲ್ಲಿ ನಂ.1 ಸ್ಥಾನ ಪಡೆದಿದ್ದಾರೆ. ಈ ಸಾಧನೆಗೈದ ಮೂರನೇ ಕಿವೀಸ್ ಬೌಲರ್‌ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದಲ್ಲಿ ಅವರು 11 ವಿಕೆಟ್ ಗೊಂಚಲು ಪಡೆದಿದ್ದರು. ಸದ್ಯ ಹೆನ್ರಿ ಭಾರತದ ಜಸ್ಪ್ರಿತ್ ಬುಮ್ರಾ ಜತೆ ಜಂಟಿ ಅಗ್ರಸ್ಥಾನ ಪಡೆದಿದ್ದಾರೆ. ಉಭಯ ಆಟಗಾರರು ತಲಾ 870 ರೇಟಿಂಗ್ ಅಂಕ ಹೊಂದಿದ್ದಾರೆ.

ಏತನ್ಮಧ್ಯೆ, ಎರಡನೇ ಓವಲ್ ಟೆಸ್ಟ್‌ನಲ್ಲಿ 77 ರನ್ ಗಳಿಸಿದ ನಂತರ ಜೋ ರೂಟ್ ಮತ್ತೆ ವಿಶ್ವದ ನಂ.1 ಟೆಸ್ಟ್ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಮೂರನೇ ಸ್ಥಾನದಿಂದ ಎರಡು ಸ್ಥಾನಗಳ ಜಿಗಿತದೊಂದಿಗೆ ದಾಖಲೆಯ ಉತ್ತುಂಗಕ್ಕೇರಿದ್ದಾರೆ. ನೈಟ್‌ಕ್ಲಬ್ ಘಟನೆಯಿಂದಾಗಿ ಬೆನ್ ಸ್ಟೋಕ್ಸ್ ಅವರನ್ನು ಕೈಬಿಟ್ಟ ನಂತರ ರೂಟ್ ಓವಲ್ ಟೆಸ್ಟ್‌ಗೆ ಹಂಗಾಮಿ ನಾಯಕರಾಗಿದ್ದರು. ಅವರು ಎರಡನೇ ಇನ್ನಿಂಗ್ಸ್‌ನಲ್ಲಿ 77 ರನ್ ಗಳಿಸಿದರು ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ 14,000 ರನ್‌ಗಳನ್ನು ತಲುಪಿದರು.

ಓವಲ್‌ನಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ನ್ಯೂಜಿಲೆಂಡ್ ತಂಡವು ಪ್ರಾಬಲ್ಯ ಸಾಧಿಸುವಲ್ಲಿ ಹೆನ್ರಿ ಎರಡೂ ಇನ್ನಿಂಗ್ಸ್‌ಗಳಲ್ಲಿ ಐದು ವಿಕೆಟ್‌ಗಳನ್ನು ಪಡೆಯುವ ಮೂಲಕ ಇಂಗ್ಲೆಂಡ್ ಬ್ಯಾಟಿಂಗ್ ಲೈನ್ ಅನ್ನು ಛಿದ್ರಗೊಳಿಸಿದರು. ಲಾರ್ಡ್ಸ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್‌ನ 115 ರನ್‌ಗಳ ಸೋಲಿನಲ್ಲಿ ಏಕೈಕ ವಿಕೆಟ್ ಪಡೆದ ನಂತರ, ಎರಡನೇ ಪಂದ್ಯದಲ್ಲಿ 11 ವಿಕೆಟ್ ಗೊಂಚಲು ಗಳಿಸಿ ತಂಡದ 253 ರನ್‌ಗಳ ಬೃಹತ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಇತ್ತೀಚಿನ ದಿನಗಳಲ್ಲಿ ರೂಟ್ ಮತ್ತು ಬ್ರೂಕ್ ಮಧ್ಯೆ ನಂ.1 ಸ್ಥಾನಕ್ಕೆ ಹಲವು ಬಾರಿ ಪೈಪೋಟಿ ನಡೆದಿದೆ. ಯಾರ್ಕ್‌ಷೈರ್‌ನ ಈ ಜೋಡಿ ಕಳೆದ 18 ತಿಂಗಳುಗಳಲ್ಲಿ ಒಟ್ಟು ಆರು ಬಾರಿ ಅಗ್ರ ಸ್ಥಾನವನ್ನು ಪಡೆದಿದ್ದಾರೆ.

ಏಕದಿನ ಶ್ರೇಯಾಂಕ : ಎರಡನೇ ಸ್ಥಾನಕ್ಕೆ ಲಗ್ಗೆಯಿಟ್ಟ ಶುಭಮನ್ ಗಿಲ್, ಕೊಹ್ಲಿಗೆ ಹಿನ್ನಡೆ



ದುಬೈ, ಜೂ.24 - ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಏಕದಿನ ಕ್ರಿಕೆಟ್ ಶ್ರೇಯಾಂಕಗಳನ್ನು ಪ್ರಕಟಿಸಿದ್ದು, ಭಾರತೀಯ ಆಟಗಾರರು ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಗಮನಾರ್ಹ ಬೆಳವಣಿಗೆ ಕಂಡಿದ್ದಾರೆ. ನಾಯಕ ಶುಭಮನ್ ಗಿಲ್ ಎರಡನೇ ಸ್ಥಾನಕ್ಕೆ ಲಗ್ಗೆ ಇಟ್ಟರೆ, ಅಫ್ಘಾನಿಸ್ತಾನ ವಿರುದ್ಧದ ಏಕದಿನ ಸರಣಿಯನ್ನು ತಪ್ಪಿಸಿಕೊಂಡಿದ್ದಕ್ಕಾಗಿ ವಿರಾಟ್ ಕೊಹ್ಲಿ ಶ್ರೇಯಾಂಕದಲ್ಲಿ ಭಾರಿ ಹಿನ್ನಡೆಯನ್ನು ಅನುಭವಿಸಿದ್ದರೆ, ಇಶಾನ್ ಕಿಶನ್ ಮತ್ತು ಯಶಸ್ವಿ ಜೈಸ್ವಾಲ್ ಇತ್ತೀಚಿನ ಸರಣಿಯಲ್ಲಿ ಶತಕಗಳನ್ನು ಗಳಿಸುವ ಮೂಲಕ ಲಾಭ ಪಡೆದಿದ್ದಾರೆ, ಇಬ್ಬರೂ ಬ್ಯಾಟ್ಸ್‌ಮನ್‌ಗಳು ಶ್ರೇಯಾಂಕದಲ್ಲಿ ಗಮನಾರ್ಹ ಏರಿಕೆಗಳನ್ನು ಕಂಡಿದ್ದಾರೆ.

ಭಾರತದ ನಾಯಕ ಶುಭಮನ್ ಗಿಲ್ ಈಗ ಏಕದಿನ ಶ್ರೇಯಾಂಕದಲ್ಲಿ ಅಗ್ರ ಸ್ಥಾನದಿಂದ ಕೇವಲ ಒಂದು ಸ್ಥಾನದ ದೂರದಲ್ಲಿದ್ದಾರೆ. 791 ರೇಟಿಂಗ್ ಪಾಯಿಂಟ್‌ಗಳೊಂದಿಗೆ ಗಿಲ್ ಎರಡನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ. ನ್ಯೂಜಿಲೆಂಡ್‌ನ ಡ್ಯಾರಿಲ್ ಮಿಚೆಲ್ 816 ಅಂಕಗಳೊಂದಿಗೆ ಅಗ್ರ ಸ್ಥಾನದಲ್ಲಿದ್ದಾರೆ. ಅಫ್ಘಾನಿಸ್ತಾನ ವಿರುದ್ಧದ ಏಕದಿನ ಸರಣಿಗೂ ಮೊದಲು, ಗಿಲ್ ಐದನೇ ಸ್ಥಾನದಲ್ಲಿದ್ದರು; ಅವರು ಮೊದಲ ಮತ್ತು ಎರಡನೇ ಏಕದಿನ ಪಂದ್ಯಗಳಲ್ಲಿ ಕ್ರಮವಾಗಿ 84 ಮತ್ತು 154 ರನ್‌ಗಳ ಇನಿಂಗ್ಸ್‌ಗಳನ್ನು ಆಡಿದರು. ಮತ್ತೊಂದೆಡೆ, ವಿರಾಟ್ ಕೊಹ್ಲಿ ಏಕದಿನ ಶ್ರೇಯಾಂಕದಲ್ಲಿ ಒಂದು ಸ್ಥಾನ ಕುಸಿದಿದ್ದಾರೆ; ಅವರು ಈಗ 768 ರೇಟಿಂಗ್ ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ. ವಿರಾಟ್ ಗಾಯದ ಕಾರಣ ಅಫ್ಘಾನಿಸ್ತಾನ ವಿರುದ್ಧದ ಸರಣಿಯಿಂದ ಹೊರಗುಳಿದಿದ್ದರು.

ಐಸಿಸಿ ಏಕದಿನ ಶ್ರೇಯಾಂಕದಲ್ಲಿ ಭಾರತೀಯ ಬ್ಯಾಟ್ಸ್‌ಮನ್‌ಗಳು ಪ್ರಾಬಲ್ಯ ಸಾಧಿಸಿದ್ದಾರೆ. ಶುಭಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ ಅವರೊಂದಿಗೆ, ರೋಹಿತ್ ಶರ್ಮಾ ನಾಲ್ಕನೇ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ; ಅವರ ಸ್ಥಾನವು ಬದಲಾಗದೆ ಉಳಿದಿದೆ. ಅವರು ಅಫ್ಘಾನಿಸ್ತಾನ ವಿರುದ್ಧ 16, 48 ಮತ್ತು 76 ರನ್‌ಗಳ ಇನಿಂಗ್ಸ್‌ಗಳನ್ನು ಆಡಿದರು. ಇದರ ನಡುವೆ ಕೆಎಲ್ ರಾಹುಲ್ ಎರಡು ಸ್ಥಾನಗಳನ್ನು ಕುಸಿದು ಅಗ್ರ10 ರಿಂದ ಹೊರಬಿದ್ದಿದ್ದಾರೆ.

78 ಎಸೆತಗಳಲ್ಲಿ 125 ರನ್ ಗಳಿಸಿದ ಇಶಾನ್ ಕಿಶನ್ 21 ಸ್ಥಾನಗಳನ್ನು ಏರಿ 43ನೇ ಸ್ಥಾನಕ್ಕೆ ತಲುಪಿದ್ದಾರೆ. ಅಂತಿಮ ಏಕದಿನ ಪಂದ್ಯದಲ್ಲಿ ಶತಕ ಗಳಿಸಿದ ಯಶಸ್ವಿ ಜೈಸ್ವಾಲ್ 84 ಸ್ಥಾನಗಳನ್ನು ಏರಿ 71ನೇ ಸ್ಥಾನಕ್ಕೆ ತಲುಪಿದ್ದಾರೆ. 110 ರನ್‌ಗಳ ಅಜೇಯ ಬ್ಯಾಟಿಂಗ್ ನಡೆಸಿದರೂ ಅವರನ್ನು ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಿಂದ ಹೊರಗಿಡಲಾಗಿದೆ.

ಏಕದಿನ ಸರಣಿ ಜುಲೈ 14 ರಿಂದ ಪ್ರಾರಂಭ ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ಜುಲೈ 14 ರಂದು ಪ್ರಾರಂಭವಾಗಲಿದೆ. ಬಿಸಿಸಿಐ ತಂಡವನ್ನು ಪ್ರಕಟಿಸಿದೆ. ವಿರಾಟ್ ಕೊಹ್ಲಿ ತಂಡಕ್ಕೆ ಮರಳಿದ್ದಾರೆ, ಆದರೂ ಅವರ ಭಾಗವಹಿಸುವಿಕೆ ಅವರ ಫಿಟ್‌ನೆಸ್ ಅನ್ನು ಅವಲಂಬಿಸಿರುತ್ತದೆ. 2023 ರ ವಿಶ್ವಕಪ್ ಫೈನಲ್‌ನ ನಂತರ ಜಸ್‌ಪ್ರೀತ್ ಬುಮ್ರಾ ಮೊದಲ ಬಾರಿ ಒಡಿಐ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಇಂಗ್ಲೆಂಡ್ ಏಕದಿನ ಸರಣಿಗೆ **ಭಾರತ ತಂಡ**: ಶುಭಮನ್ ಗಿಲ್, ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆಎಲ್ ರಾಹುಲ್, ಇಶಾನ್ ಕಿಶನ್, ವಾಷಿಂಗ್ಟನ್ ಸುಂದರ್, ಅಕ್ಷರ್‌ಪಟೇಲ್, ನಿತೀಶ್ ಕುಮಾರ್‌ರೆಡ್ಡಿ, ಕುಲ್ದೀಪ್ ಯಾದವ್, ಜಸ್‌ಪ್ರೀತ್ ಬುಮ್ರಾ, ಪ್ರಸಿಧ್ ಕೃಷ್ಣ, ಹರ್ಷಿತ್ ರಾಣಾ, ಅರ್ಷ್‌ದೀಪ್ ಸಿಂಗ್, ಗುರ್ನೂರ್‌ಬ್ರಾರ್.